ಸೋಮವಾರ, ಸೆಪ್ಟೆಂಬರ್ 5, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಫಾ ಆಟ...

ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾನುವಾರ ನಾಲ್ಕನೇ ಸುತ್ತು ಪ್ರವೇಶಿಸಿದ ಸ್ಪೇನ್‌ನ ರಫೆಲ್ ನಡಾಲ್

ಕರ್ನಾಟಕದ ಅತ್ಯಂತ ಯಶಸ್ವಿ ಮತ್ತು ವಿಶ್ವಾಸಾರ್ಹ ನೀಟ್ ಕೋಚಿಂಗ್ ಸಂಸ್ಥೆ

VISION NEET ACADEMY

ವಿಷನ್ ನೀಟ್ ಅಕಾಡೆಮಿ

BLR ENVISION ACADEMY LLP

ಬೆಂಗಳೂರು | ಬಳ್ಳಾರಿ

NEET 2022 ಅದ್ಭುತವಾದ ಫಲಿತಾಂಶ ಖಚಿತ

ನಿಮ್ಮ...! 2022ರ ನೀಟ್ ರ್‍ಯಾಂಕ್ ಮಿಸ್ಸಾಗುತ್ತಾ, 2023 ನೀಟ್ ರ್‍ಯಾಂಕ್ ಪಡಯಲೇ ಬೇಕು ಅನ್ನೋ ಛಲ ನಿಮ್ಮಲ್ಲಿದೆಯಾ?
ವಿಷನ್ ನೀಟ್ ಅಕಾಡೆಮಿಯಲ್ಲಿ 1 ವರ್ಷ ಲಾಂಗ್ ಟರ್ಮ್ ಕೋಚಿಂಗ್ ಪಡೆಯಿರಿ ನಿಮ್ಮ ಗುರಿಯನ್ನು ಸಾಧಿಸಿ.

ನಿಮ್ಮ ಛಲ । ನಮ್ಮ ಭರವಸೆ

NTA ಕೀ–ಆನ್ಸರ್ ನಂತೆ 2022ರ ನೀಟ್ ಫಲಿತಾಂಶದಲ್ಲಿ ನಿರೀಕ್ಷಿಸಲಾದ ನಮ್ಮ ವಿದ್ಯಾರ್ಥಿಗಳು ಪಡೆದ ಅಂಕಗಳು

690 Marks HARSHITH C APP No. 220410289033
676 Marks PRERITHA N.S APP No. 220411069127
669 Marks PRAJNA J APP No. 220411084601
669 Marks PAVAN KUMAR I D APP No. 220410792596
668 Marks VARUN U S APP No. 220410969528
650 Marks MAINUDDIN S M APP No. 220410432326
637 Marks MANJUNATH O S APP No. 220410908350
637 Marks MD. SAQUIIB QADIR APP No. 220410046758
633 Marks MANJUNATH B M APP No. 220411063060
632 Marks BHARATH PATIL APP No. 220410964879
632 Marks TIPPU GOWDA APP No. 220410346515
631 Marks VINOD K S APP No. 220410672121
630 Marks PRAVEEN KUMAR APP No. 220410022565
630 Marks SRINISHA N V APP No. 220410207071
630 Marks MD ZAHEER APP No. 220411357222
630 Marks ABDUL SAMAD APP No. 220411294987
630 Marks SAMARTH R KULKARNI APP No. 220410841936
627 Marks ADITYA KUMAR APP No. 220411000829
626 Marks DEEKSHITA B M APP No. 220410765154
619 Marks SANJANA G P APP No. 220410835341
618 Marks SRISATYASAGAR D BAGI APP No. 220410706825
617 Marks SRUSTI H G APP No. 220410433754
615 Marks CHETAN B APP No. 220410822122
610 Marks AKSHAY G. HIREMANI APP No.220410368414
600 Marks SHREYAS K S APP No. 220410086097
600 Marks ADITYA H KULKARNI APP No. 220410449812
600 Marks PUNEET AP APP No. 220410960531
600 Marks VIVEK SAI G APP No. 220410904909
600 Marks KEERTHI MAITHRI APP No. 220411174588

2022ರ ನೀಟ್ ಫಲಿತಾಂಶದಲ್ಲಿ ಪಡೆದ ಅಂಕಗಳ ಮೇಲೆ ರಿಪೀಟರ್‌ಗಳಿಗೆ ಸ್ಕಾಲರ್‌ಶಿಪ್ ಸಿಗುತ್ತದೆ

4045
2015ರಿಂದ 4045ಕ್ಕೂ ಅಧಿಕ ನಮ್ಮ ವಿದ್ಯಾರ್ಥಿಗಳು ಸರ್ಕಾರಿ ಮೆಡಿಕಲ್ ಸೀಟ್ ಪಡೆದಿದ್ದಾರೆ.

20% ಸ್ಕಾಲರ್‌ಶಿಪ್* 300+ ಮಾರ್ಕ್ಸ್ ಪಡೆದವರಿಗೆ
25% ಸ್ಕಾಲರ್‌ಶಿಪ್* 350+ ಮಾರ್ಕ್ಸ್ ಪಡೆದವರಿಗೆ
30% ಸ್ಕಾಲರ್‌ಶಿಪ್* 400+ ಮಾರ್ಕ್ಸ್ ಪಡೆದವರಿಗೆ
40% ಸ್ಕಾಲರ್‌ಶಿಪ್* 450+ ಮಾರ್ಕ್ಸ್ ಪಡೆದವರಿಗೆ
50% ಸ್ಕಾಲರ್‌ಶಿಪ್* 500+ ಮಾರ್ಕ್ಸ್ ಪಡೆದವರಿಗೆ

ಪ್ರವೇಶಾತಿ ಪ್ರಾರಂಭವಾಗಿದೆ
ಸೆಪ್ಟೆಂಬರ್ 10 ರಿಂದ 2ನೇ ಬ್ಯಾಚ್ ಪ್ರಾರಂಭ

ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕ್ಯಾಂಪಸ್ ಮತ್ತು ಹಾಸ್ಟಲ್ ವ್ಯವಸ್ಥೆಯಿದೆ

* ಈ ಸ್ಕಾಲರ್‌ಶಿಪ್ ಸೆಪ್ಟೆಂಬರ್ 15, 2022 ವರೆಗೆ ಟ್ಯೂಷನ್ ಫೀ ಗೆ ಮಾತ್ರ ಅನ್ವಯಿಸುತ್ತದೆ

ನೀಟ್ Admissions Open NEET
ಲಾಂಗ್ ಟರ್ಮ್ ಮೆಡಿಕಲ್ ಕೋಚಿಂಗ್
LONG TERM MEDICAL COACHING

ಪ್ರವೇಶ ಪಡೆಯಲು ಸಂಪರ್ಕಿಸಿ

ಬೆಂಗಳೂರು ಕ್ಯಾಂಪಸ್
73497 44105 98862 18399
74112 68903 90357 17875

ಬಳ್ಳಾರಿ ಕ್ಯಾಂಪಸ್
63665 81638
63665 81639

ವಿಳಾಸ: ನಂ.802, 9ನೇ ಬಿ ಮೇನ್, ಹೆಚ್‌ಆರ್‌ಬಿಆರ್ 1ನೇ ಬ್ಲಾಕ್, ಕಲ್ಯಾಣ ನಗರ, ಬಾಣಸವಾಡಿ, ಬೆಂಗಳೂರು – 43

www.visionedu.in

ad6.in

ಕುಗ್ರಾಮದ ಸಾಕ್ಷರತೆ ಹೆಚ್ಚಿಸಿದ ಶಿಕ್ಷಕ: ಪಾಲಕರಿಗೂ ಪಾಠ

• ಗಣಪತಿ ಹೆಗಡೆ

ಗೌಳಿ ಸಮುದಾಯದ ಸಾಂಪ್ರದಾಯಿಕ ದಿರಿಸು ಧರಿಸಿದ ವಿದ್ಯಾರ್ಥಿಗಳ ಜತೆ ಶಿಕ್ಷಕ ಬಾಲಚಂದ್ರ ಹೆಗಡೆ

ಶಿರಸಿ: ವಿದ್ಯಾರ್ಥಿಗಳಿಗೆ ಪಾಠ ಮಾಡುವುದಷ್ಟೆ ಕರ್ತವ್ಯ ಎಂದು ಭಾವಿಸಿ ಕೆಲಸ ಮಾಡುವ ಶಿಕ್ಷಕರ ನಡುವೆ ಮುಂಡಗೋಡ ತಾಲ್ಲೂಕಿನ ಬಡ್ಡಿಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಬಾಲಚಂದ್ರ ಹೆಗಡೆ ವಿಭಿನ್ನ ಎನಿಸುತ್ತಾರೆ. ತೀರಾ ಹಿಂದುಳಿದ ಪ್ರದೇಶಗಳಲ್ಲೇ 23 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅವರನ್ನು 'ಕುಗ್ರಾಮದ ಜನರ ಗುರು' ಎಂದೇ ಗ್ರಾಮಸ್ಥರು ಗುರುತಿಸುತ್ತಾರೆ.

ಮುಂಡಗೋಡ ತಾಲ್ಲೂಕಿನ ಅತಿ ಹಿಂದುಳಿದ ಪ್ರದೇಶಗಳಾದ ಬಸವನಕೊಪ್ಪ, ಚೌಡಳ್ಳಿ, ಬಡ್ಡಿಗೇರಿ ಶಾಲೆಗಳಲ್ಲಿ ಕೆಲಸ ಮಾಡಿ, ಗ್ರಾಮಸ್ಥರಲ್ಲಿ ಸಾಕ್ಷರತೆಯ ಬೀಜ ಬಿತ್ತಿರುವುದು ಇದಕ್ಕೆ ಕಾರಣ.

ಬಾಲಚಂದ್ರ ಹೆಗಡೆ ಮೂಲತಃ ಶಿರಸಿ ತಾಲ್ಲೂಕು ಬಿಸಲಕೊಪ್ಪ ಗ್ರಾಮದವರು. ಅಂಗವಿಕಲ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ, ನೂರಾರು ಮಕ್ಕಳ ಬಾಳಿಗೆ ಬೆಳಕು ನೀಡಿದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿತ್ತು.

ಬಡಮಕ್ಕಳಿಗೆ ಮನೆಯಲ್ಲಿಯೇ ಆಶ್ರಯ: ಗೌಳಿಗರು ಹೆಚ್ಚಿರುವ ಬಡ್ಡಿಗೇರಿ ಶಾಲೆಯಲ್ಲಿ ಆರು ವರ್ಷಗಳಿಂದ ಶಿಕ್ಷಕರಾಗಿ ಕೆಲಸ ಮಾಡುತ್ತಿರುವ ಬಾಲಚಂದ್ರ ಹೆಗಡೆ, ಮಕ್ಕಳ ಓದಿಗಾಗಿ ಪಾಲಕರನ್ನು ಪ್ರೇರೇಪಿಸುತ್ತಿದ್ದಾರೆ. ಕಡು ಬಡ ಕುಟುಂಬದ ಮಕ್ಕಳಿದ್ದರೆ ಅವರಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಿ ಶಿಕ್ಷಣ ಒದಗಿಸುತ್ತಿದ್ದಾರೆ.

ಪ್ರಶಸ್ತಿಗೆ ಅರ್ಜಿ ಸಲ್ಲಿಸುವಂತೆ ನೀಡುವ ಸಲಹೆಯನ್ನು ನಯವಾಗಿಯೇ ತಿರಸ್ಕರಿಸುತ್ತೇನೆ. ಮಕ್ಕಳು ಶಿಕ್ಷಣ ವಂಚಿತರಾಗದಂತೆ ನೋಡಿಕೊಳ್ಳುವುದೇ ನನ್ನ ಪಾಲಿಗೆ ದೊಡ್ಡ ಪ್ರಶಸ್ತಿ

ಬಾಲಚಂದ್ರ ಹೆಗಡೆ, ಬಡ್ಡಿಗೇರಿ ಶಾಲೆ ಶಿಕ್ಷಕ

ಶಿಕ್ಷಕರ ದಿನ ಇಂದು

ಬಸವನಕೊಪ್ಪ ಗ್ರಾಮದಲ್ಲಿ 1999–2002ರಲ್ಲಿ ಶಾಲೆ ಅವಧಿ ಮುಗಿದ ನಂತರ ಪಾಲಕರಿಗೆ ಓದು, ಬರಹ ಕಲಿಸಿ ಅಲ್ಲಿನ ಹತ್ತಾರು ಕುಟುಂಬಗಳನ್ನು ಸಾಕ್ಷರರನ್ನಾಗಿಸಿದ್ದರು. ಈ ಕಾರ್ಯ ಈಗಲೂ ಮುಂದುವರೆದಿದ್ದು, ಬಡ್ಡಿಗೇರಿಯಲ್ಲಿ ಅಕ್ಷರ ಪಾಠ ಮುಂದುವರಿದಿದೆ. ಕವಿಯಾಗಿ, ಭಾಷಣಕಾರರಾಗಿಯೂ ಅವರು ಹೆಸರು ಮಾಡಿದ್ದಾರೆ.

'ಬಡತನದಲ್ಲಿ ಬೆಳೆದ ನನಗೆ ಶಿಕ್ಷಕನಾಗಬೇಕು ಎಂಬ ಗುರಿ ಇತ್ತು. ಈಗ ಬಡ ಮಕ್ಕಳು ಶಿಕ್ಷಣ ವಂಚಿತ ಆಗಬಾರದು ಎಂಬುದೇ ಗುರಿಯಾಗಿದೆ. ಅದನ್ನು ಸಾಧಿಸುವುದಷ್ಟೆ ನನ್ನ ಕೆಲಸ' ಎನ್ನುತ್ತಾರೆ ಬಾಲಚಂದ್ರ ಹೆಗಡೆ.

ಸುದ್ದಿ 2 ನಿಮಿಷ

ಅಂಬೇಡ್ಕರ್ ಚಿತ್ರಕ್ಕೆ ಸೆಗಣಿ ಬಳಿದ ಕಿಡಿಗೇಡಿಗಳು: ಪ್ರಕ್ಷುಬ್ಧ ಸ್ಥಿತಿ

ಗುಳೇದಗುಡ್ಡ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಹಂಗರಗಿ ಗ್ರಾಮದ ಹಿರಿಯ ಮಾದರಿ ಪ್ರಾಥಮಿಕ ಶಾಲೆ ಕಟ್ಟಡದ ಗೋಡೆಯ ಮೇಲೆ ಚಿತ್ರಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಭಾನುವಾರ ಕಿಡಿಗೇಡಿಗಳು ಸೆಗಣಿ ಬಳಿದಿದ್ದು, ಗ್ರಾಮದಲ್ಲಿ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾಗಿದೆ.

ವಿಷಯ ತಿಳಿದು ಸ್ಥಳದಲ್ಲಿ ಜಮಾಯಿಸಿದ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಘಟನೆ ಖಂಡಿಸಿ ಪ್ರತಿಭಟನೆ ನಡೆಸಿದರು. ಕೆರೂರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬಾದಾಮಿ ಸಿಪಿಐ ಕರೆಪ್ಪ ಬನ್ನೆ ಅವರು ಗ್ರಾಮದಲ್ಲಿ ಶಾಂತಿ ಸಭೆ ನಡೆಸಿದರು.

ಗ್ರಾಮದಲ್ಲಿ ಐದನೇ ದಿನದ ಗಣೇಶ ಮೂರ್ತಿಗಳ ವಿಸರ್ಜನಾ ಕಾರ್ಯಕ್ರಮವೂ ಇದೆ. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಬಿಜೆಪಿ ರಾಜ್ಯ ಎಸ್‌.ಸಿ ಮೋರ್ಚಾದಿಂದ ಅಂಬೇಡ್ಕರ್ ಜ್ಯೋತಿ ಯಾತ್ರೆ

ಕೋಲಾರ: ಬಿಜೆಪಿ ರಾಜ್ಯ ಎಸ್‌.ಸಿ ಮೋರ್ಚಾ ಆಶ್ರಯದಲ್ಲಿ ನ.26ರಿಂದ ಡಿ.6ವರೆಗೆ ಅಂಬೇಡ್ಕರ್ ಜ್ಯೋತಿ ಯಾತ್ರೆ ನಡೆಸಲಾಗುವುದು. ರಾಜ್ಯದ ಐದು ವಿಭಾಗಗಳಲ್ಲಿ 2 ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಲಾಗುವುದು ಎಂದು ಮೋರ್ಚಾದ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಐದು ತಂಡಗಳು ಹತ್ತು ದಿನ ರಾಜ್ಯದಾದ್ಯಂತ ಯಾತ್ರೆ ಸಂಚರಿಸಲಿವೆ. ಅಂಬೇಡ್ಕರ್ ಪರಿನಿರ್ವಾಣ ದಿನದಂದು ಸಮಾರೋಪ ನಡೆಯಲಿದೆ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಮ್ಮ ಕಾರ್ಯಕ್ರಮ ಗೊತ್ತಾಗುತ್ತಿದ್ದಂತೆ ಕಾಂಗ್ರೆಸ್‌ನವರು ಕೆ.ಎಚ್.ಮುನಿಯಪ್ಪ ಹಾಗೂ ಡಾ.ಜಿ.ಪರಮೇಶ್ವರ ಸಾರಥ್ಯದಲ್ಲಿ ದಲಿತೋತ್ಸವ ನಡೆಸಲು ಮುಂದಾಗಿದ್ದಾರೆ. ಉತ್ಸವ ಆರಂಭವಾಗುವಷ್ಟರಲ್ಲಿ ಈ ಇಬ್ಬರು ನಾಯಕರು ಕಾಂಗ್ರೆಸ್‌ನಲ್ಲಿ ಉಳಿಯುವುದೇ ಅನುಮಾನ' ಎಂದರು.

ನಗರದಲ್ಲಿ ಮೂರು ದಿನ ಆಯೋಜಿಸಿದ್ದ ಬಿಜೆಪಿ ಎಸ್‌.ಸಿ ಮೋರ್ಚಾ ಪ್ರಶಿಕ್ಷಣ ವರ್ಗಕ್ಕೆ ಭಾನುವಾರ ತೆರೆ ಬಿತ್ತು. ಮೈಸೂರಿನಲ್ಲಿ ಅಕ್ಟೋಬರ್‌ನಲ್ಲಿ ಎರಡು ದಿನ ಬಿಜೆಪಿ ಎಸ್‌.ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಆಯೋಜಿಸಲಾಗುವುದು ಎಂದು ಹೇಳಿದರು.

ಮಕ್ಕಳ ಕಲ್ಯಾಣ ಸಮಿತಿ ಸುಪರ್ದಿಗೆ ಹಾಸ್ಟೆಲ್ ಮಕ್ಕಳು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಶರಣರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಎದುರಾಗಿದ್ದರಿಂದ ಮಠದ ಹಾಸ್ಟೆಲ್‌ನಲ್ಲಿದ್ದ ವಿದ್ಯಾರ್ಥಿನಿಯರನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಆಯಾ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ಸುಪರ್ದಿಗೆ ಭಾನುವಾರ ಒಪ್ಪಿಸಿದೆ.

ಆ ವಿದ್ಯಾರ್ಥಿನಿಯರ ಶಿಕ್ಷಣ ಮತ್ತು ವಸತಿಯ ಜವಾಬ್ದಾರಿಯನ್ನು ಸಮಿತಿಗೆ ವಹಿಸಲಾಗಿದೆ.

ಲೈಂಗಿಕ ದೌರ್ಜನ್ಯ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಹಾಸ್ಟೆಲ್‌ನಲ್ಲಿದ್ದ ಎಲ್ಲ ವಿದ್ಯಾರ್ಥಿನಿಯರನ್ನೂ ಆಗಸ್ಟ್ 31ರಂದು ಮಠದ ಆವರಣದಿಂದ ಬೇರೆಡೆಗೆ ಸ್ಥಳಾಂತರಿಸಲಾಗಿತ್ತು.

'5ರಿಂದ 10ನೇ ತರಗತಿ ವರೆಗೆ ವ್ಯಾಸಂಗ ಮಾಡುತ್ತಿದ್ದ 105 ವಿದ್ಯಾರ್ಥಿನಿಯರು ಹಾಸ್ಟೆಲ್‌ನಲ್ಲಿದ್ದರು. ಗಣೇಶ ಹಬ್ಬದ ಹಿಂದಿನ ದಿನ 54 ಮಕ್ಕಳು ಪಾಲಕರೊಂದಿಗೆ ಊರಿಗೆ ತೆರಳಿದ್ದರು. ಉಳಿದವರಲ್ಲಿ 12 ಮಕ್ಕಳಿಗೆ ಬಾಲಕಿಯರ ಬಾಲಮಂದಿರ ಹಾಗೂ 37 ಮಕ್ಕಳಿಗೆ ಗೂಳಯ್ಯನಹಟ್ಟಿಯ ಮೊರಾರ್ಜಿ ವಸತಿ ಶಾಲೆಯಲ್ಲಿ ಆಶ್ರಯ ಕಲ್ಪಿಸಲಾಗಿತ್ತು. ಇಬ್ಬರು ಸಂತ್ರಸ್ತ ವಿದ್ಯಾರ್ಥಿನಿಯರನ್ನು ಬಾಲಕಿಯರ ಬಾಲಮಂದಿರಕ್ಕೆ ಕಳುಹಿಸಲಾಗಿತ್ತು' ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪಿ. ಲೋಕೇಶ್ವರಪ್ಪ ತಿಳಿಸಿದ್ದಾರೆ.

ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ • ಪೊಲೀಸರಿಂದ ಕೆಲ ವಸ್ತುಗಳ ಜಪ್ತಿ

ಮುರುಘಾಶ್ರೀ ಕೊಠಡಿಯ ಮಹಜರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಸೆ. 1ರಂದು ಬಂಧನಕ್ಕೆ ಒಳಗಾಗಿರುವ ಶಿವಮೂರ್ತಿ ಮುರುಘಾ ಶರಣರನ್ನು ಭಾನುವಾರ ಮುರುಘಾ ಮಠಕ್ಕೆ ಕರೆತಂದ ಪೊಲೀಸರು, ಅವರು ತಂಗುತ್ತಿದ್ದ ಕೊಠಡಿಯ ಮಹಜರು ನಡೆಸಿದರು.

ಪೊಲೀಸ್ ವಾಹನದಲ್ಲಿ ಭಾನುವಾರ ಆರೋಪಿಯನ್ನು ಮಠಕ್ಕೆ ಕರೆದೊಯ್ದ ತನಿಖಾ ತಂಡ, ಅವರು ತಂಗುತ್ತಿದ್ದ ಕೊಠಡಿಗೆ ಸಂಪರ್ಕ ಕಲ್ಪಿಸುವ ಮಾರ್ಗಗಳನ್ನೂ ಪರಿಶೀಲಿಸಿದೆ. ಅಂದಾಜು ಎರಡೂವರೆ ಗಂಟೆ ಮಹಜರು ನಡೆಯಿತು.

'ಪ್ರಕರಣದ ಪ್ರಮುಖ ಆರೋಪಿಯಾದ ಮುರುಘಾ ಶರಣರನ್ನು ಮಠಕ್ಕೆ ಕರೆದೊಯ್ದು ಮಹಜರು ಮಾಡಲಾಗಿದೆ. ಅವರು ತಂಗುತ್ತಿದ್ದ ಕೊಠಡಿಯಲ್ಲಿ ದೋಷಾರೋಪಕ್ಕೆ ಪೂರಕವಾಗಿ ಲಭ್ಯವಾದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ವಿಚಾರಣೆ ಇನ್ನೂ ಮುಂದುವರಿದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ಹೇಳಿದ್ದಾರೆ.

ಸಿಆರ್‌ಪಿಸಿ ಸೆಕ್ಷನ್ 164ರ ಅಡಿ, ಸಂತ್ರಸ್ತ ಬಾಲಕಿಯರು ನ್ಯಾಯಾಲಯದಲ್ಲಿ ದಾಖಲಿಸಿದ ಹೇಳಿಕೆಯ ಪ್ರತಿಯು ಮುಚ್ಚಿದ ಲಕೋಟೆಯಲ್ಲಿ ತನಿಖಾಧಿಕಾರಿಯ ಕೈಸೇರಿದೆ. ಇದರಲ್ಲಿರುವ ಅಂಶಗಳ ಆಧಾರದಲ್ಲಿ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಲೈಂಗಿಕ ದೌರ್ಜನ್ಯ ಎಸಗಿದ್ದರು ಎನ್ನಲಾದ ಸ್ಥಳಕ್ಕೆ ಆರೋಪಿಯೊಂದಿಗೆ ತೆರಳಿ ಮಹಜರು ಮಾಡಿದರು.

ತನಿಖಾ ತಂಡದೊಂದಿಗೆ ವಿಧಿವಿಜ್ಞಾನ ತಜ್ಞರು ಇರಲಿಲ್ಲ. ಜಪ್ತಿ ಮಾಡಿದ ವಸ್ತುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವ ಸಾಧ್ಯತೆ ಇದೆ. ಮಹಜರು ಸಂದರ್ಭ ಮಠದ ಆವರಣದಲ್ಲಿ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಎಲ್ಲ ಪ್ರವೇಶ ದ್ವಾರಗಳನ್ನು ಮುಚ್ಚಿ, ಭಕ್ತರು, ಪ್ರವಾಸಿಗರು ಬಾರದಂತೆ ನಿರ್ಬಂಧಿಸಲಾಗಿತ್ತು.

ಆರೋಪಿಯನ್ನು ಸೆ.2ರಂದು ವಿಚಾರಣೆಗಾಗಿ ವಶಕ್ಕೆ ಪಡೆದಿರುವ ತನಿಖಾ ತಂಡ ಡಿವೈಎಸ್‌ಪಿ ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಿದೆ. ತನಿಖಾಧಿಕಾರಿ ಆಗಿರುವ ಡಿವೈಎಸ್‌ಪಿ ಅನಿಲ್ ಕುಮಾರ್ ನೇತೃತ್ವದ ತಂಡ ಕೇಳಿದ ಪ್ರಶ್ನೆಗಳಿಗೆ ಆರೋಪಿಯಿಂದ ಸಮರ್ಪಕ ಉತ್ತರ ಲಭ್ಯವಾಗಿಲ್ಲ ಎಂದು ಪೊಲೀಸ್ ಇಲಾಖೆಯ ಮೂಲಗಳು ಮಾಹಿತಿ ನೀಡಿವೆ.

ವಿಚಾರಣೆ ನಡೆಸುತ್ತಿರುವ ಡಿವೈಎಸ್‌ಪಿ ಕಚೇರಿ ಆವರಣದಲ್ಲಿಯೇ ವೈದ್ಯರ ತಂಡ ಬೀಡುಬಿಟ್ಟಿದೆ. ಆರೋಪಿಯನ್ನು ಆಗಾಗ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಆರೋಗ್ಯದ ಮೇಲೆ ನಿಗಾ ಇಟ್ಟಿದೆ. ಪೊಲೀಸ್ ಕಸ್ಟಡಿ ಅವಧಿಯು ಸೆ.5ರಂದು ಮುಕ್ತಾಯವಾಗಲಿದೆ. ತನಿಖಾ ತಂಡವು ಆರೋಪಿಯನ್ನು ಸೋಮವಾರ ನ್ಯಾಯಾಲಯದ ಎದುರು ಹಾಜರುಪಡಿಸಲಿದೆ.

ಆರೋಪಿ ಶಿವಮೂರ್ತಿ ಮುರುಘಾ ಶರಣರ ಸಮ್ಮುಖದಲ್ಲಿ ಚಿತ್ರದುರ್ಗದ ಮುರುಘಾ ಮಠದಲ್ಲಿ ಭಾನುವಾರ ಮಹಜರು ಮುಗಿಸಿ ಹೊರಬಂದ ಪೊಲೀಸರು

'ಸರ್ಕಾರ ಸಂತ್ರಸ್ತೆಯರ ಪರವೋ, ಸ್ವಾಮೀಜಿ ಪರವೋ?'

ಆರೋಪಿಯ ಪರವಾಗಿಯೇ ಹಲವು ಸ್ವಾಮೀಜಿಗಳು, ಜನಪ್ರತಿನಿಧಿಗಳು ಮಾತನಾಡುತ್ತಿದ್ದಾರೆ. ಅವರನ್ನೂ ಪ್ರಕರಣದಡಿ ಬಂಧಿಸಬೇಕು.

ಎಚ್.ವಿಶ್ವನಾಥ್

ಮೈಸೂರು: 'ಮುರುಘಾ ಶರಣರ ವಿರುದ್ಧದ ಪೋಕ್ಸೊ ಪ್ರಕರಣವನ್ನು ಲಘುವಾಗಿ ಪರಿಗಣಿಸಿದ್ದರಿಂದಲೇ ಸಾಕ್ಷ್ಯಗಳು ನಾಶವಾಗಿವೆ. ಸರ್ಕಾರ ಸಂತ್ರಸ್ತೆಯರ ಪರವಾಗಿದೆಯೋ, ಆರೋಪಿ ಸ್ವಾಮೀಜಿ ಪರವಾಗಿದೆಯೋ' ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪ್ರಶ್ನಿಸಿದರು.

'ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾದಾಗ ಆರೋಪಿಯೇ ಅಪರಾಧಿಯಾಗುತ್ತಾನೆ. ಆದರೆ, ಚಿತ್ರದುರ್ಗ ಎಸ್ಪಿ ಆರೋಪಿಯನ್ನು ಕೂಡಲೇ ಬಂಧಿಸಲು ಕ್ರಮ ಕೈಗೊಳ್ಳಲಿಲ್ಲ. ಬೆಡ್‌ಶೀಟ್, ಹಾಸಿಗೆ, ಹೊದಿಕೆಗಳೆಲ್ಲ ಬದಲಾದ ಮೇಲೆ, ಮಠದಲ್ಲಿದ್ದ ಸಾಕ್ಷ್ಯಗಳು ನಾಶವಾದ ನಂತರ ಬಂಧಿಸಲಾಗಿದೆ. ಎಷ್ಟು ಉದಾಸೀನ?' ಎಂದು ಆಕ್ರೋಶ ವ್ಯಕ್ತಪಡಿಸಿದರು.

ವರದಿ ಸಲ್ಲಿಕೆಗೆ ಆಯೋಗ ಸೂಚನೆ

ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ತನಿಖಾ ಕ್ರಮಗಳ ಕುರಿತು ರಾಜ್ಯ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಆಯೋಗ ವಿವರವಾದ ವರದಿ ಕೇಳಿದೆ.

ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಿಗೆ ಆಯೋಗದ ಕಾರ್ಯದರ್ಶಿ ಈ ಸಂಬಂಧ ಪತ್ರ ಬರೆದಿದ್ದಾರೆ.

'ಪರಿಶಿಷ್ಟ ಜಾತಿಯ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇರೆಗೆ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದೂರು ದಾಖಲಾಗಿರುವುದಾಗಿ ವರದಿಯಾಗಿದೆ. ಬಾಲಕಿಯ ಭವಿಷ್ಯದ ಮೇಲೆ ಇದು ಪರಿಣಾಮ ಬೀರಲಿದೆ. ಈ ಬಗ್ಗೆ ವಿವರವಾದ ವರದಿ ನೀಡಿ' ಎಂದು ಪತ್ರದಲ್ಲಿ ಸೂಚಿಸಲಾಗಿದೆ.

ಸಾಮೂಹಿಕ ವಿವಾಹ ಇಂದು

ಮುರುಘಾ ಮಠದಲ್ಲಿ ನಡೆಯಲಿರುವ ಮಾಸಿಕ ಸಾಮೂಹಿಕ ವಿವಾಹ ಸಮಾರಂಭಕ್ಕೆ ಸಿದ್ಧತೆಗಳು ನಡೆದಿವೆ. ಸೆ.5ರಂದು ಸಾಮೂಹಿಕ ವಿವಾಹ ಕಾರ್ಯಕ್ರಮ ಹಾಗೂ ಶಿಕ್ಷಕರ ದಿನಾಚರಣೆಯು ಪ್ರಭಾರ ಪೀಠಾಧಿಪತಿ ಮಹಾಂತ ರುದ್ರೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ನಡೆಯಲಿದೆ.

ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡಲು ಏಳು ಜೋಡಿ ವಧು–ವರರು ನೋಂದಣಿ ಮಾಡಿಕೊಂಡಿದ್ದಾರೆ. ಗುರುಮಠಕಲ್ ಶಾಖಾ ಮಠದ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮೀಜಿ ಭಾಗವಹಿಸಲಿದ್ದಾರೆ.

ಮಠದಲ್ಲಿ 32 ವರ್ಷಗಳಿಂದ ಪ್ರತಿ ತಿಂಗಳ 5ರಂದು ಸಾಮೂಹಿಕ ವಿವಾಹ ನಡೆಸಲಾಗುತ್ತಿದೆ. ಗ್ರಹಣ, ಅಮಾವಾಸ್ಯೆ ಎದುರಾದ ದಿನವೂ ಸಾಮೂಹಿಕ ವಿವಾಹ ಸ್ಥಗಿತಗೊಂಡಿರಲಿಲ್ಲ. ಶಿವಮೂರ್ತಿ ಮುರುಘಾ ಶರಣರು ಬಂಧಿತರಾಗಿದ್ದರಿಂದ ಈ ಕಾರ್ಯ ನೆರವೇರುವ ಬಗ್ಗೆ ಅನುಮಾನಗಳು ವ್ಯಕ್ತವಾಗಿದ್ದವು.

'ಆರೆಸ್ಸೆಸ್ ತತ್ವ ಅಳವಡಿಸಿಕೊಂಡರೆ ಕಾಂಗ್ರೆಸ್ ಪರವಾಗಿಯೂ ಕೆಲಸ'

ಪ್ರಜಾವಾಣಿ ವಾರ್ತೆ

ಧಾರವಾಡ: 'ರಾಷ್ಟ್ರೀಯ ಸ್ವಯಂ ಸೇವಕ ಸಂಘ ಅಪೇಕ್ಷಿಸುವ ನಿಲುವು ಹಾಗೂ ಹಿಂದೂಪರ ನೀತಿಯನ್ನು ಕಾಂಗ್ರೆಸ್ ಪಕ್ಷ ಅಳವಡಿಸಿಕೊಂಡರೆ ಚುನಾವಣೆಯಲ್ಲಿ ಅವರ ಪರವಾಗಿಯೂ ಆರೆಸ್ಸೆಸ್ ಕೆಲಸ ಮಾಡಲಿದೆ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಪ್ರಚಾರ ಪ್ರಮುಖ ಅರುಣಕುಮಾರ ಹೇಳಿದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ನಾಯಕರು ರಾಮಮಂದಿರ ನಿರ್ಮಾಣದ ಪರವಾಗಿ ಹಾಗೂ ಜಮ್ಮು ಕಾಶ್ಮೀರಕ್ಕೆ ನೀಡಿದ್ದ 370ನೇ ವಿಧಿಯನ್ನು ಕಿತ್ತು ಹಾಕುವುದಾಗಿ ಘೋಷಣೆ ಮಾಡಿ, ಹಿಂದೂಪರ ನಿಲುವು ಹೊಂದಿದ್ದರೆ ಆರೆಸ್ಸೆಸ್ ಅವರ ಜೊತೆಗಿದ್ದು ಅವರ ಪರವಾಗಿ ಕೆಲಸ ಮಾಡುತ್ತಿತ್ತು. ಈ ಹಿಂದೆಯೇ ಸಂಘದ ಸರಸಂಚಾಲಕರು ಈ ಹೇಳಿಕೆ ನೀಡಿದ ಉದಾಹರಣೆಗಳಿವೆ' ಎಂದರು.

'ನಮ್ಮ ನಿಲುವುಗಳನ್ನು ಬಿಜೆಪಿ ಒಪ್ಪಿಕೊಂಡಿದ್ದರಿಂದ ಅದರ ಜೊತೆಗೆ ಕೆಲಸ ಮಾಡುತ್ತಿದ್ದೇವೆ. ಹೀಗಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ರಾಜೀನಾಮೆ ನೀಡಬೇಕಾದರೂ ಆರ್‌ಎಸ್‌ಎಸ್ ನೇಮಿಸಿದ ಪಕ್ಷದ ಸಂಘಟನಾ ಕಾರ್ಯದರ್ಶಿಗೆ ಪತ್ರ ನೀಡುವ ನಿಯಮವಿದೆ. ಆದ್ದರಿಂದ ಆರ್‌ಎಸ್‌ಎಸ್ ಹಾಕಿದ ಗೆರೆ ದಾಟುವ ಬಗ್ಗೆ ಬಿಜೆಪಿ ಯೋಚನೆ ಕೂಡ ಮಾಡುವುದಿಲ್ಲ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.53	13,538	13,267
ಹಾರಂಗಿ	2,859	2,856.55	1,800	1,800
ಕಬಿನಿ	2284	2,282.87	4,860	2,000
ಹೇಮಾವತಿ	2,922	2,921.75	6,617	4,320
ಲಿಂಗನಮಕ್ಕಿ	1,819	1,814	7,435	7,247
ಸೂಪಾ (ಮೀ)	564	550.70	2,104	1,316
ಮಾಣಿ	595	588	361	-
ತುಂಗಭದ್ರಾ	1,633	1,632.32	84,908	92,148
ಮಲಪ್ರಭಾ	2079.5	2,079.30	2,324	5,044
ಘಟಪ್ರಭಾ	2175	2,175	3,803	3,803
ಭದ್ರಾ	186	185	9,579	8,062
ಆಲಮಟ್ಟಿ (ಮೀ)	519.6	519.60	31,075	35,000
ನಾರಾಯಣಪುರ (ಮೀ)	492.25	492.11	55,000	58,200

* ನೆಲಮಟ್ಟದಿಂದ

ಮಲಪ್ರಭಾ ನದಿಯ ಪ್ರವಾಹದಿಂದಾಗಿ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಬೆಳಗಲ್ಲ ಕ್ರಾಸ್ ಹತ್ತಿರದ ಹೊಲಗಳಲ್ಲಿ ಬೆಳೆಗಳು ಜಲಾವೃತವಾಗಿವೆ

ಸಿಐಟಿ ರ್‍ಯಾಂಕಿಂಗ್ ಗೊಂದಲ: ಇಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:2020-21 ರಲ್ಲಿ ದ್ವಿತೀಯ ಪಿಯುಸಿ ತೇರ್ಗಡೆಯಾಗಿ ಪ್ರಸಕ್ತ ಸಾಲಿನಲ್ಲೂ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದಿರುವ 24 ಸಾವಿರ ವಿದ್ಯಾರ್ಥಿಗಳ ಪಿಯುಸಿ ಅಂಕವನ್ನೂ ಪರಿಗಣಿಸುವಂತೆ ಹೈಕೋರ್ಟ್ ನೀಡಿರುವ ಆದೇಶ ಕುರಿತು ಚರ್ಚಿಸಲು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಸೋಮವಾರ ಮಹತ್ವದ ಸಭೆ ಕರೆದಿದ್ದಾರೆ.

'ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಮತ್ತು ಕಾನೂನು ತಜ್ಞರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮುಂದೆ ತೆಗೆದುಕೊಳ್ಳಬೇಕಾದ ಕ್ರಮ ಕುರಿತು ನಿರ್ಧರಿಸಲಾಗುವುದು' ಎಂದು ಸಚಿವರು ತಿಳಿಸಿದ್ದಾರೆ.

ಕೋವಿಡ್ ಕಾರಣ 2020-21 ರಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ನಡೆಸದೆ, ತೇರ್ಗಡೆ ಮಾಡಲಾಗಿತ್ತು. ನಂತರ ಸಿಇಟಿ ನಡೆಸಿ ವೃತ್ತಿಪರ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗಿತ್ತು. ಹೀಗೆ ಪ್ರವೇಶ ಪಡೆದ 24 ಸಾವಿರ ವಿದ್ಯಾರ್ಥಿಗಳು ಈ ಬಾರಿಯೂ ಸಿಇಟಿ ಬರೆದಿದ್ದರು. ರ್‍ಯಾಂಕಿಂಗ್ ಪಟ್ಟಿಯಲ್ಲಿ ತಮ್ಮ ದ್ವಿತೀಯ ಪಿಯುಸಿ ಅಂಕ ಪರಿಗಣಿಸುವಂತೆ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಿಇಟಿ ರ್‍ಯಾಂಕಿಂಗ್ ಸಂಬಂಧಿಸಿದಂತೆ ಹೈಕೋರ್ಟ್ ಆದೇಶ ಅಧ್ಯಯನ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ಮೇಲ್ಮನವಿ ಸಲ್ಲಿಸುವ ಕುರಿತು ತಜ್ಞರೊಂದಿಗೆ ಚರ್ಚಿಸಲಾಗುವುದು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಉಚಿತ ವಿದ್ಯುತ್: ಮಾರ್ಗಸೂಚಿ ಪರಿಷ್ಕರಣೆಗೆ ನಿರ್ಧಾರ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ 'ಅಮೃತ ಜ್ಯೋತಿ' ಯೋಜನೆಯಡಿ 75 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಕಾರ್ಯಕ್ರಮದ ಮಾರ್ಗಸೂಚಿ ಪರಿಷ್ಕರಿಸಲು ಇಂಧನ ಇಲಾಖೆ ನಿರ್ಧರಿಸಿದೆ.

ಈ ಯೋಜನೆಯ ಜಾರಿಗೆ ಮೇ 18 ರಂದು ಆದೇಶ ಹೊರಡಿಸಲಾಗಿತ್ತು. ಫಲಾನುಭವಿಗಳ ಅರ್ಹತೆ, ಮಂಜೂರಾತಿ ಮತ್ತಿತರ ವಿಷಯಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳುಳ್ಳ ಸುತ್ತೋಲೆಯನ್ನು ಆಗಸ್ಟ್ 24 ರಂದು ನೀಡಲಾಗಿತ್ತು. ಆ. 24 ರ ಸುತ್ತೋಲೆಯನ್ನು ಹಿಂಪಡೆದು ಶನಿವಾರ (ಸೆಪ್ಟೆಂಬರ್ 3) ಆದೇಶ ಹೊರಡಿಸಲಾಗಿದೆ.

ಎಸ್‌ಸಿ ಮತ್ತು ಎಸ್‌ಟಿ ಕುಟುಂಬಗಳಿಗೆ ಉಚಿತ ವಿದ್ಯುತ್ ಪೂರೈಸುವ ಯೋಜನೆಯನ್ನೇ ಕೈಬಿಡಲಾಗುತ್ತಿದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಚರ್ಚೆ ಆರಂಭವಾಗಿತ್ತು. ಈ ಕುರಿತು ಸ್ಪಷ್ಟನೆ ನೀಡಿರುವ ಇಂಧನ ಸಚಿವ ವಿ. ಸುನಿಲ್ ಕುಮಾರ್, 'ಯೋಜನೆ ಅನುಷ್ಠಾನದ ಆದೇಶ ರದ್ದಾಗಿಲ್ಲ. ಮಾರ್ಗಸೂಚಿಗಳನ್ನು ನೀಡಿದ್ದ ಸುತ್ತೋಲೆಯನ್ನು ಮಾತ್ರ ಹಿಂಪಡೆಯಲಾಗಿದೆ' ಎಂದು ತಿಳಿಸಿದ್ದಾರೆ.

'ಫಲಾನುಭವಿಗಳ ಆಯ್ಕೆಗೆ ನಿಗದಿಪಡಿಸಿದ್ದ ಕೆಲವು ಮಾನದಂಡಗಳನ್ನು ಪರಿಷ್ಕರಿಸಲು ನಿರ್ಧರಿಸಲಾಗಿದೆ. ಈ ಕಾರಣಕ್ಕಾಗಿ ಸುತ್ತೋಲೆ ರದ್ದು ಮಾಡಲಾಗಿದೆ' ಎಂದಿದ್ದಾರೆ.

ಸಮರ್ಥ ಕಾನೂನು ತಜ್ಞರ ತಂಡ ನೇಮಕ: ಸಿ.ಎಂ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸುಪ್ರೀಂಕೋರ್ಟ್‌ನಲ್ಲಿ ನ.23 ರಂದು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದದ ವಿಷಯ ವಿಚಾರಣೆಗೆ ಬರಲಿದೆ. ರಾಜ್ಯದ ಪರವಾಗಿ ವಾದ ಮಂಡಿಸಲು ಸಮರ್ಥ ಕಾನೂನು ತಜ್ಞರ ತಂಡ ನೇಮಕ ಮಾಡಲು ಅಡ್ವೊಕೇಟ್ ಜನರಲ್ ಅವರಿಗೆ ಸೂಚಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಗಡಿ ವಿವಾದದ ಕುರಿತು ಈಗಾಗಲೇ ಅಡ್ವೊಕೇಟ್ ಜನರಲ್ ಅವರನ್ನು ಸಂಪರ್ಕಿಸಿ, ಅಗತ್ಯ ಸಲಹೆ ಸೂಚನೆ ನೀಡಲಾಗಿದೆ. ಸಾಕಷ್ಟು ಅಧ್ಯಯನ ಸಹ ನಡೆಸಲಾಗಿದೆ. ವಾದ ಮಂಡಿಸಲು ನುರಿತ ಹಿರಿಯ ವಕೀಲರನ್ನು ನಿಯೋಜಿಸಬೇಕು ಎಂದು ನಿರ್ದೇಶನ ನೀಡಲಾಗಿದೆ. ಸರ್ಕಾರ ಈ ಕುರಿತು ನಿರ್ಲಕ್ಷ್ಯ ವಹಿಸಿಲ್ಲ. ರಾಜ್ಯದ ಪರ ಸಮರ್ಥವಾಗಿ ವಾದ ಮಂಡಿಸಲಿದೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

'ಒಟಿಎಸ್' ಆಗ್ರಹಿಸಿ ಶಿಕ್ಷಕರಿಂದ ಪ್ರತಿಭಟನೆ ಇಂದು

ಬೆಂಗಳೂರು: ಸೇವಾ ಅವಧಿಯಲ್ಲಿ ಬಯಸಿದ, ಸ್ವಂತ ಜಿಲ್ಲೆಗೆ ಒಮ್ಮೆ ವರ್ಗಾವಣೆಗೆ (ಒನ್ ಟೈಮ್ ಸೆಟ್ಲಮೆಂಟ್‌- ಒಟಿಎಸ್) ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ನೂರಾರು ಶಿಕ್ಷಕರು 'ಶಿಕ್ಷಕರ ದಿನಾಚರಣೆ' ದಿನವಾದ ಸೋಮವಾರ (ಸೆ. 5) ಬೀದಿಗಿಳಿಯಲು ನಿರ್ಧರಿಸಿದ್ದಾರೆ.

ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಈ ಪ್ರತಿಭಟನೆಯಲ್ಲಿ ಭಾಗವಹಿಸಲು ಬೀದರ್, ರಾಯಚೂರು, ಯಾದಗಿರಿ ಮುಂತಾದ ಜಿಲ್ಲೆಗಳಿಂದ ಹಲವು ಶಿಕ್ಷಕರು ಭಾನುವಾರವೇ ನಗರಕ್ಕೆ ಬಂದು ಮೊಕ್ಕಾಂ ಹೂಡಿದ್ದಾರೆ.

'10 ವರ್ಷ ಒಂದೇ ಶಾಲೆಯಲ್ಲಿ ಕರ್ತವ್ಯ ಸಲ್ಲಿಸಬೇಕೆಂಬ ನಿಯಮವೂ ಸೇರಿದಂತೆ ವರ್ಗಾವಣೆಗೆ ಅಗತ್ಯವಾದ ಎಲ್ಲ ನಿಯಮ, ಷರತ್ತುಗಳನ್ನು ನಾವು ಪೂರೈಸಿದ್ದೇವೆ. ಆದರೆ, ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ. ಹೀಗಾಗಿ, ಪ್ರತಿಭಟನೆಗಿಳಿಯುವುದು ಅನಿವಾರ್ಯವಾಗಿದೆ' ಎಂದು ಶಿಕ್ಷಕರೊಬ್ಬರು ಹೇಳಿದರು.

'ತುಳು ಅಕಾಡೆಮಿ: ಬಹುಮಾನವಿಲ್ಲದ 'ಗೌರವ' ಬೇಡ'

ಮಂಗಳೂರು: 'ತುಳು ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನದ ಬದಲು ಕೇವಲ 'ಗೌರವ' ಸಲ್ಲಿಸುವುದಾದರೆ ಅದನ್ನು ಸ್ವೀಕರಿಸಲು ಸಿದ್ಧನಿಲ್ಲ' ಎಂದು ಸಂಶೋಧಕ ಡಾ.ಅಶೋಕ ಆಳ್ವ ತಿಳಿಸಿದ್ದಾರೆ.

'ತುಳು ಸಾಹಿತ್ಯ ಅಕಾಡೆಮಿ ಆಯ್ಕೆಯಲ್ಲಿ ಲೋಪ; ಪುಸ್ತಕ ಬಹುಮಾನ 'ಗೌರವ'ಕ್ಕೆ ಸೀಮಿತ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ ಪ್ರಕಟಗೊಂಡ ವರದಿಗೆ ಪ್ರತಿಕ್ರಿಯಿಸಿರುವ ಅವರು, 'ತುಳುನಾಡಿನ ಪ್ರಾಣಿ ಜಾನಪದ' ಎಂಬ ನನ್ನ ಸಂಶೋಧನ ಕೃತಿಗೆ ಅಕಾಡೆಮಿ ಪುಸ್ತಕ ಬಹುಮಾನ ಘೋಷಣೆಯಾಗಿತ್ತು. ನಂತರ, ಇದು ಪಿಎಚ್‌ಡಿ ಸಂಶೋಧನಾ ಕೃತಿ ಎಂಬ ಹಿನ್ನೆಲೆಯಲ್ಲಿ ಗೊಂದಲಗಳು ಸೃಷ್ಟಿಯಾದವು. ವಾಸ್ತವದಲ್ಲಿ ಇದು ಪಿಎಚ್‌ಡಿ ಸಂಶೋಧನಾ ಕೃತಿಯಾದರೂ 28 ವರ್ಷಗಳ ನಂತರ ಬಹಳಷ್ಟು ಪರಿಷ್ಕರಿಸಿ ಪ್ರಕಟಿಸಲಾಗಿದೆ' ಎಂದು ತಿಳಿಸಿದ್ದಾರೆ.

ಸಿಡಿಲು ಬಡಿದು ಬಾಲಕ ಸಾವು
ವಿವಿಧೆಡೆ ಧಾರಾಕಾರ ಮಳೆ

ಬೆಂಗಳೂರು: ಬೆಂಗಳೂರು ನಗರ ಹಾಗೂ ಬೆಳಗಾವಿ, ಹುಬ್ಬಳ್ಳಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳ ಹಲವೆಡೆ ಭಾನುವಾರ ರಭಸದ ಮಳೆಯಾಗಿದೆ. ಬಾಗಲಕೋಟೆ, ವಿಜಯಪುರಗಳಲ್ಲಿ ಗುಡುಗು, ಸಿಡಿಲಿನೊಂದಿಗೆ ಅಬ್ಬರದ ಮಳೆಯಾಗಿದೆ.

ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಇವಣಗಿ ಗ್ರಾಮದ ಜನತಾ ಪ್ಲಾಟ್‌ನಲ್ಲಿ ಭಾನುವಾರ ಸಂಜೆ ಸಿಡಿಲು ಬಡಿದು ಕುರಿಗಾಹಿ ಪ್ರತಾಪ ಬಸವರಾಜ ಮಾದರ(12) ಎಂಬ ಬಾಲಕ ಮೃತಪಟ್ಟಿದ್ದಾನೆ. ಆತ ಕುರಿಗಳನ್ನು ಮೇಯಿಸಿಕೊಂಡು, ದೊಡ್ಡಿಗೆ ವಾಪಸ್ ಆಗುವಾಗ ಸಿಡಿಲು ಬಡಿದಿದೆ.

ಬೆಳಗಾವಿ, ಮೂಡಲಗಿ ಹಾಗೂ ಸವದತ್ತಿ ತಾಲ್ಲೂಕಿನ ವಿವಿಧೆಡೆ ಸಂಜೆ ಒಂದು ತಾಸಿಗೂ ಹೆಚ್ಚು ಸಮಯ ಧಾರಾಕಾರ ಮಳೆ ಸುರಿಯಿತು. ಮೂಡಲಗಿ ಪಟ್ಟಣದಲ್ಲಿ ಏಕಾಏಕಿ ಸುರಿದ ಮಳೆಯಿಂದಾಗಿ ತಗ್ಗು ಪ್ರದೇಶದ 11 ಮನೆಗಳಿಗೆ ನೀರು ನುಗ್ಗಿತು.

ಬಾಗಲಕೋಟೆ ಜಿಲ್ಲೆಯ ಕುಳಗೇರಿ ಹೋಬಳಿಯ ಕೆಲವು ಗ್ರಾಮಗಳಲ್ಲಿ ಗುಡುಗು-ಸಿಡಿಲು ಸಹಿತ ಧಾರಾಕಾರ ಮಳೆ ಸುರಿಯಿತು. ಸೂರ್ಯಕಾಂತಿ ಬೆಳೆ ಕೊಯ್ಲು ನಡೆಯುತ್ತಿದ್ದು ಬೆಳೆಗಳಿಗೆ ಹಾನಿಯಾಗಿದೆ.

ಘಟಪ್ರಭಾ ನದಿ ಉಕ್ಕಿ ಹರಿಯುತ್ತಿರುವುದರಿಂದ ಮಹಾಲಿಂಗಪುರ ಸಮೀಪದ ನಂದಗಾಂವ-ಅವರಾದಿ ಸೇತುವೆ ಜಲಾವೃತಗೊಂಡಿದೆ. ಮಲಪ್ರಭಾ ನದಿ ಹೊರ ಹರಿವು ಹೆಚ್ಚಾಗಿದೆ. ನದಿಯ ಎಡ ಮತ್ತು ಬಲ ಭಾಗದಲ್ಲಿರುವ ತೀರ ಪ್ರದೇಶದ ಕೆಲ ಜಮೀನುಗಳು ಪ್ರವಾಹಕ್ಕೆ ತುತ್ತಾಗಿ ಬೆಳೆಗಳು ಜಲಾವೃತವಾಗಿವೆ.

ಬಳ್ಳಾರಿ ಜಿಲ್ಲೆಯ ಸಂಡೂರು, ಕಂಪ್ಲಿ ತಾಲ್ಲೂಕಿನ ವಿವಿಧೆಡೆ ಶನಿವಾರ ರಾತ್ರಿ ಮಳೆಯಾಗಿದ್ದು, ಕಂಪ್ಲಿ ತಾಲ್ಲೂಕಿನಲ್ಲಿ ಎರಡು ಮನೆಗಳಿಗೆ ಹಾನಿಯಾಗಿದೆ.

ಡಾ.ಬಿ.ಆರ್‌.ಅಂಬೇಡ್ಕರ್ ಅವರ ಮೊಮ್ಮಗಳು ರಮಾಬಾಯಿ ತೇಲ್ತುಂಬ್ಡೆ ವಿಷಾದ

'ಪರಿಶಿಷ್ಟರಲ್ಲೂ ಲಿಂಗತ್ವ ಅಸಮಾನತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯಲ್ಲೂ ಲಿಂಗತ್ವ ಅಸಮಾನತೆ ಹಾಸುಹೊಕ್ಕಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯನ್ನೇ ಒಪ್ಪಿಕೊಂಡು ಜೀವಿಸುತ್ತಿದೆ' ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಮೊಮ್ಮಗಳು ರಮಾಬಾಯಿ ತೇಲ್ತುಂಬ್ಡೆ ಭಾನುವಾರ ಇಲ್ಲಿ ವಿಷಾದ ವ್ಯಕ್ತಪಡಿಸಿದರು.

ತಮಟೆ ಕರ್ನಾಟಕ ಹಾಗೂ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ದು.ಸರಸ್ವತಿ ಅನುವಾದಿಸಿದ 'ನಾವೂ ಇತಿಹಾಸ ಕಟ್ಟಿದೆವು' (ಮೂಲ ಲೇಖಕರು: ಊರ್ಮಿಳಾ ಪವಾರ್ ಮತ್ತು ಮೀನಾಕ್ಷಿ ಮೂನ್) ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

'ಲಿಂಗ ತಾರತಮ್ಯ ನಿವಾರಣೆ ಆಗಬೇಕು. ದಲಿತ ಸಮುದಾಯದಲ್ಲಿನ ಪುರುಷ ಪ್ರಧಾನ ವ್ಯವಸ್ಥೆ ಬದಲಾಗಿ ಸಮಾನತೆ ಮೂಡಬೇಕು' ಎಂದು ಅವರು ಪ್ರತಿಪಾದಿಸಿದರು.

'ಮಹಿಳೆಯರಿಗೆ ಶಿಕ್ಷಣ ಲಭಿಸಿದರೆ ಕುಟುಂಬ, ಸಮಾಜ ಬೆಳಗುತ್ತದೆ ಎಂದು ಅಂಬೇಡ್ಕರ್ ಬಲವಾಗಿ ನಂಬಿದ್ದರು. ಸ್ವಾಭಿಮಾನಕ್ಕೆ ಧಕ್ಕೆ ತರುವ ಯಾವುದೇ ಕೆಲಸವನ್ನೂ ಮಹಿಳೆಯರು ಮಾಡಬಾರದೆಂದು ಸದಾ ಎಚ್ಚರಿಸುತ್ತಿದ್ದರು' ಎಂದು ಸ್ಮರಿಸಿದರು.

'ಅಂಬೇಡ್ಕರ್ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ 44 ಮಹಿಳೆಯರ ಕುರಿತು ಇಬ್ಬರು ಲೇಖಕಿಯರು 1989ರಲ್ಲಿ ಮರಾಠಿಯಲ್ಲಿ ಈ ಕೃತಿ ಹೊರತಂದಿದ್ದರು. ಕನ್ನಡಕ್ಕೂ ಇದು ಅನುವಾದಗೊಂಡಿದ್ದು ಸಂತೋಷವಾಗಿದೆ. ಕೃತಿಯಲ್ಲಿ ಎರಡು ಭಾಗಗಳಿವೆ' ಎಂದು ವಿವರಿಸಿದರು.

ಅಕ್ಕಮಹಾದೇವಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಸಬೀಹಾ ಭೂಮಿಗೌಡ ಮಾತನಾಡಿ, 'ವಿಶಿಷ್ಟ ಸನ್ನಿವೇಶದಲ್ಲಿ ಮೂಲ ಲೇಖಕರು ಈ ಕೃತಿ ಬರೆದಿದ್ದರು. ಈ ಹಿಂದೆ ಮಹಿಳೆಯರಿಗೆ ಕೆಟ್ಟ ಪರಿಸ್ಥಿತಿಯಿತ್ತು. ಅದರ ನಡುವೆಯೂ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಇಂದು ಮಹಿಳೆಯರಿಗೆ ಅನುಕೂಲಕರ ಪರಿಸ್ಥಿತಿಯಿದ್ದರೂ ಹೋರಾಟದ ಮನೋಭಾವ ಕ್ಷೀಣಿಸಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಲೇಖಕ ಪೀರ್ ಬಾಷಾ ಮಾತನಾಡಿ, 'ಈ ಕೃತಿ ದಲಿತ ಚಳವಳಿಯ ಮಹಾ ಅಧ್ಯಯನ. ಮಹಿಳಾ ಚಳವಳಿಗಳನ್ನು ಭಾಗವಾಗಿ ಕಾಣದೇ ಪ್ರಧಾನ ಭೂಮಿಕೆಯಲ್ಲೇ ನೋಡಬೇಕು' ಎಂದು ನುಡಿದರು.

ಅನುವಾದಕಿ ದು.ಸರಸ್ವತಿ ಮಾತನಾಡಿ, 'ಬರವಣಿಗೆ ಏಕಾಂಗಿ ಕ್ರಿಯೆ. ನನಗೆ ಹೋರಾಟವೇ ಇಷ್ಟ. ಆದರೂ ಬರವಣಿಗೆ ಮಾಡುವುದು ಇಂದಿನ ಅನಿವಾರ್ಯ. ಅಂಬೇಡ್ಕರ್ ಅವರ ಹೆಜ್ಜೆ ಗುರುತುಗಳನ್ನು ಮುಂದಕ್ಕೆ ಕೊಂಡೊಯ್ಯಲು ಬರವಣಿಗೆ ಮುಖ್ಯ' ಎಂದರು.

'ದೇಶದಾದ್ಯಂತ ಇಂದು ಕೋಮುವಾದ ಪ್ರಜ್ವಲಿಸುತ್ತಿದೆ. ಅತ್ಯಾಚಾರ, ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಸೇರಿದ್ದವರನ್ನು ಬಿಡುಗಡೆ ವೇಳೆ ಹೂವಿನ ಹಾರ ಹಾಕಿ ಸ್ವಾಗತಿಸಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಇಬ್ಬರು ಲೇಖಕಿಯರು ಮಹಾರಾಷ್ಟ್ರದಿಂದ ದೆಹಲಿ ತನಕ ಸಂಚಾರ ಮಾಡಿ, ಈ ಕೃತಿ ರಚಿಸಿದ್ದಾರೆ. ಇದು ಸತ್ಯಶೋಧನ ಕೃತಿ. ಅದೃಶ್ಯದಲ್ಲಿದ್ದವರನ್ನು ಶೋಧಿಸಿ ಮುನ್ನೆಲೆಗೆ ತಂದಿದ್ದಾರೆ' ಎಂದು ಹೇಳಿದರು.

ಹೋರಾಟಗಾರ ಎನ್.ವೆಂಕಟೇಶ್, ಪ್ರಕಾಶಕಿ ಡಾ.ಎಚ್.ಎಸ್.ಅನುಪಮಾ, ವೆಂಕಮ್ಮ ಹಾಜರಿದ್ದರು.

ಸಮಾರಂಭದಲ್ಲಿ 'ನಾವೂ ಇತಿಹಾಸ ಕಟ್ಟಿದೆವು' ಪುಸ್ತಕವನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗಳು ರಮಾಬಾಯಿ ತೇಲ್ತುಂಬ್ಡೆ (ಎಡದಿಂದ ನಾಲ್ಕನೆಯವರು) ಬಿಡುಗಡೆ ಮಾಡಿದರು. ಅಕ್ಕಮಹಾದೇವಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಸಬೀಹಾ ಭೂಮಿಗೌಡ, ವೆಂಕಮ್ಮ, ಎನ್.ವೆಂಕಟೇಶ್, ಕೃತಿ ಅನುವಾದಿಸಿದ ದು.ಸರಸ್ವತಿ ಮತ್ತು ಎಚ್.ಎಸ್.ಅನುಪಮಾ ಇದ್ದರು
ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಕೃತಿ: 'ನಾವೂ ಇತಿಹಾಸ ಕಟ್ಟಿದೆವು'
ಅನುವಾದಕಿ: ದು.ಸರಸ್ವತಿ
ಪ್ರಕಾಶನ: ಕವಿ ಪ್ರಕಾಶನ
ಪುಟಗಳು: 421
ಬೆಲೆ: ₹ 450

ಸೋಮವಾರ, ಸೆಪ್ಟೆಂಬರ್ 5, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 246 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಗುರುವಿಲ್ಲದ ಶಿಕ್ಷಣವಿಲ್ಲ. ಎಲ್ಲರೂ ಗುರು ಮುಖೇನವೇ ಸಮಾಜದ ಅಂಗಳಕ್ಕೆ ಕಾಲಿಡಬೇಕು. ಜೀವನ ಪೂರ್ತಿ ಅಂಥ ಗುರುವಿಗೆ ಕೃತಜ್ಞರಾಗಿರಬೇಕು. ಇಂದು ಅಂಥ ಶಿಕ್ಷಕರನ್ನು ನೆನೆವ ದಿನ.

ಗುರುನಮನ 7

ಶಿಕ್ಷಕರ ದಿನಾಚರಣೆಯ ಶುಭಾಶಯಗಳು

‘ಕೈ’ ಅಧಿಕೃತ ಬಣದ ಅಭ್ಯರ್ಥಿ ಘೋಷಣೆ

ಸೋನಿಯಾ ವಾಪಸ್ ಬಳಿಕ ನಿರ್ಧಾರ 8

ಸುದರ್ಶನ್ ಜ್ಯುವೆಲರ್ಸ್

ಚಿನ್ನ ◆ ಬೆಳ್ಳಿ ◆ ಚಿನ್ನದ ಆಭರಣಗಳು

ವಿಶೇಷ ಕೊಡುಗೆ
ವೇಸ್ಟೇಜ್ 4% ಮಾತ್ರ

₹4810/-gm

ಬೆಳ್ಳಿ ₹ 50,000/- *CA

ಚಿಕ್ಕಪೇಟೆ: 41300355

Gangothri

ಒಳ ಪುಟಗಳು

ಹೊಸ ಪಕ್ಷಕ್ಕೆ ಜನರೇ ಹೆಸರಿಡಲಿದ್ದಾರೆ: ಆಜಾದ್ 8

ಮ್ಯಾಗ್ಸೆಸೆ ಪ್ರಶಸ್ತಿ ತಿರಸ್ಕರಿಸಿದ ಶೈಲಜಾ 4

ಭವಿಷ್ಯ, ನಿರುದ್ಯೋಗ, ಬೆಲೆ ಏರಿಕೆ ಭಯ ಜನರನ್ನು ಕಾಡುತ್ತಿದೆ: ರಾಹುಲ್

‘ಮೋದಿಯಿಂದ ಭಯ ಬಿತ್ತನೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ದೇಶದಲ್ಲಿ ದ್ವೇಷ ಮತ್ತು ಕ್ರೋಧ ಹೆಚ್ಚಾಗುತ್ತಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಉದ್ದೇಶಪೂರ್ವಕವಾಗಿ ದ್ವೇಷ ಹರಡುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಆರೋಪಿಸಿದ್ದಾರೆ.

ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸುವ ಸಲುವಾಗಿ ಕಾಂಗ್ರೆಸ್ ಇಲ್ಲಿನ ರಾಮ ಲೀಲಾ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ‘ಮಹಂಗಾಯಿ ಪೆ ಹಲ್ಲಾ ಬೋಲ್’ (ಬೆಲೆ ಏರಿಕೆ ವಿರುದ್ಧ ದನಿ ಏರಿಕೆ) ರ್‍ಯಾಲಿಯಲ್ಲಿ ರಾಹುಲ್ ಈ ಮಾತನ್ನು ಹೇಳಿದ್ದಾರೆ.

ಸಾವಿರಾರು ಜನರು ಸೇರಿದ್ದ ಈ ರ್‍ಯಾಲಿಯಲ್ಲಿ ಕಾಂಗ್ರೆಸ್‌ನ ಮುಖಂಡರು, ಮುಖ್ಯಮಂತ್ರಿಗಳು, ಸಂಸದರು ಭಾಗಿಯಾಗಿದ್ದರು. ಈ ಎಲ್ಲರೂ ಕೇಂದ್ರದ ವಿರುದ್ಧ ಹರಿಹಾಯ್ದರು.

4ನೇ ಪುಟ ನೋಡಿ

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ರಾಹುಲ್ ಗಾಂಧಿ ಅವರು ಬೆಲೆ ಏರಿಕೆ ವಿರುದ್ಧದ ರ್‍ಯಾಲಿಯಲ್ಲಿ ಭಾಗವಹಿಸಿದ್ದರು –ಪಿಟಿಐ ಚಿತ್ರ

ಯುಪಿಎ ಅವಧಿಯಲ್ಲಿ 27 ಕೋಟಿ ಜನರನ್ನು ಬಡತನದಿಂದ ಮೇಲಕ್ಕೆ ತಂದಿದ್ದೆವು. ಮೋದಿ ಆಡಳಿತದಲ್ಲಿ 23 ಕೋಟಿ ಜನರನ್ನು ಬಡತನದ ಕೂಪಕ್ಕೆ ತಳ್ಳಲಾಗಿದೆ

ರಾಹುಲ್ ಗಾಂಧಿ
ಕಾಂಗ್ರೆಸ್ ನಾಯಕ

ಅಗತ್ಯ ವಸ್ತುಗಳ ಬೆಲೆ 2014ರಲ್ಲಿ ಎಷ್ಟಿತ್ತು ಮತ್ತು ಈಗ ಎಷ್ಟಿದೆ ಎಂಬುದನ್ನು ನೋಡಿ. ಮೋದಿ ಸರ್ಕಾರಕ್ಕೆ ಸಂವೇದನೆಯೇ ಇಲ್ಲ ಎಂಬುದು ಗೊತ್ತಾಗುತ್ತದೆ

ಕೆ.ಸಿ.ವೇಣುಗೋಪಾಲ್
ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ

ಕುಟುಂಬ ರಕ್ಷಣೆ ಉದ್ದೇಶ: ಬಿಜೆಪಿ

ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆ ವಹಿಸಿಕೊಳ್ಳಲು ಯಾರೂ ಮುಂದೆ ಬರುತ್ತಿಲ್ಲ. ಹಾಗಾಗಿ, ರಾಹುಲ್ ಗಾಂಧಿ ಅವರನ್ನೇ ನಾಲ್ಕನೇ ಬಾರಿಗೆ ಮುನ್ನೆಲೆಗೆ ತರುವುದಕ್ಕಾಗಿ ರ್‍ಯಾಲಿ ನಡೆಸಲಾಗಿದೆ ಎಂದು ಬಿಜೆಪಿ ಹೇಳಿದೆ.

ರಾಮಲೀಲಾ ಮೈದಾನದಲ್ಲಿ ನಡೆದ ಸಮಾವೇಶದ ಮುಖ್ಯ ಉದ್ದೇಶವೇ ಗಾಂಧಿ–ನೆಹರೂ ಕುಟುಂಬವನ್ನು ರಕ್ಷಿಸುವುದಾಗಿದೆ. ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಅಲ್ಲ. ರಾಹುಲ್ ಅವರನ್ನು ಹಲವು ಬಾರಿ ಮುನ್ನೆಲೆಗೆ ತರಲಾಗಿದೆ. ಈಗಿನದ್ದು ನಾಲ್ಕನೇ ಯತ್ನ ಎಂದು ಬಿಜೆಪಿ ವಕ್ತಾರ ರಾಜ್ಯವರ್ಧನ ಸಿಂಗ್ ರಾಥೋಡ್ ಹೇಳಿದ್ದಾರೆ.

2014ರ ನಂತರ ನಡೆದ ಚುನಾವಣೆಗಳಲ್ಲಿ ಶೇ 90ರಷ್ಟನ್ನು ಕಾಂಗ್ರೆಸ್ ಸೋತಿದೆ ಎಂದು ಅವರು ಹೇಳಿದ್ದಾರೆ.

ಜಲಧಾರೆ... ಬೆಂಗಳೂರು ಹೊರವಲಯದ ಕನಕಪುರ ರಸ್ತೆಯ ಕಗ್ಗಲಿಪುರ ಬಳಿಯ ತೊಟ್ಟಿಕಲ್ಲು ಜಲಪಾತ ಮೈದುಂಬಿ ಹರಿಯುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದೆ –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಭೆಯಲ್ಲಿ ಚರ್ಚೆ

ಕಾಂಗ್ರೆಸ್ ಸರ್ಕಾರದ ಹಗರಣಗಳ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಬಿಜೆಪಿ ಸರ್ಕಾರದ ವಿರುದ್ಧದ ಶೇಕಡ 40 ರಷ್ಟು ಲಂಚದ ಆರೋಪವನ್ನು ಎದುರಿಸಲು ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದಿರುವ ಹಗರಣಗಳನ್ನು ಪತ್ತೆ ಮಾಡಿ ತನಿಖೆಗೆ ಆದೇಶಿಸುವ ಕುರಿತು ಭಾನುವಾರ ನಡೆದ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಭೆಯಲ್ಲಿ ಚರ್ಚೆ ನಡೆಯಿತು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸಭೆಯ ನೇತೃತ್ವ ವಹಿಸಿದ್ದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಶಾಸಕ ಜಗದೀಶ ಶೆಟ್ಟರ್, ಸಂಸದ ಡಿ.ವಿ. ಸದಾನಂದ ಗೌಡ, ಬಿಜೆಪಿ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ ರಾಜೇಶ್ ಜೆ.ವಿ., ಸಚಿವರಾದ ಗೋವಿಂದ ಕಾರಜೋಳ, ಆರ್. ಅಶೋಕ ಮತ್ತು ಶಾಸಕ ಕೆ.ಎಸ್. ಈಶ್ವರಪ್ಪ ಸಭೆಯಲ್ಲಿದ್ದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿ.ಟಿ. ರವಿ, ‘ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ ನಡೆದ ಅನೇಕ ಹಗರಣಗಳನ್ನು ಮುಚ್ಚಿ ಹಾಕಲಾಗಿದೆ. ಅಂತಹ ಹಗರಣಗಳನ್ನು ಬಯಲಿಗೆಳೆದು ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸುವ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ’ ಎಂದರು.

ಚುನಾವಣಾ ಸಿದ್ಧತೆ ಕುರಿತು ವಿಸ್ತೃತವಾಗಿ ಚರ್ಚೆ ನಡೆಸಲಾಗಿದೆ. ಜನಸಂವಾದ, ಜನೋತ್ಸವ ಕಾರ್ಯಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ನಡೆಸುವ ಕುರಿತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಮತ್ತು ಮುಖ್ಯಮಂತ್ರಿ ನೇತೃತ್ವದಲ್ಲಿ ಯೋಜನೆ ರೂಪಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳನ್ನು ಸಂಪರ್ಕಿಸುವ ಕಾರ್ಯಕ್ರಮವನ್ನೂ ರೂಪಿಸಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಈ ಕಾರ್ಯಕ್ರಮ ಯಶಸ್ವಿಗೊಳಿಸುವ ನಿರ್ಧಾರವನ್ನೂ ಕೈಗೊಳ್ಳಲಾಗಿದೆ ಎಂದು ಹೇಳಿದರು.

4ನೇ ಪುಟ ನೋಡಿ

ಕಾರು ಅಪಘಾತ ಸೈರಸ್ ಮಿಸ್ತ್ರಿ ಸಾವು

ಮುಂಬೈ (ಪಿಟಿಐ): ಟಾಟಾ ಸನ್ಸ್‌ನ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ (54) ಅವರು ಕಾರು ಅಪಘಾತದಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

ಮರ್ಸಿಡಿಸ್ ಬೆಂಜ್ ಕಾರಿನಲ್ಲಿ ಅಹಮದಾಬಾದ್‌ನಿಂದ ಮುಂಬೈಗೆ ಪ್ರಯಾಣಿಸುತ್ತಿದ್ದಾಗ, ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಬಳಿ ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ ಹೊಡೆದಿದ್ದರಿಂದ ಅವರು ಸಾವನ್ನಪ್ಪಿದರು ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಸೂರ್ಯ ನದಿಯ ಸೇತುವೆ ಮೇಲೆ ಅಪರಾಹ್ನ 3.15ರ ಸುಮಾರಿಗೆ ಅಪಘಾತ ಸಂಭವಿಸಿದೆ ಎಂದು ಪಾಲ್ಘರ್ ಜಿಲ್ಲೆಯ ಎಸ್‌ಪಿ ಬಾಳಾಸಾಹೇಬ್ ಪಾಟೀಲ್ ಮಾಹಿತಿ ನೀಡಿದ್ದಾರೆ.

ಮುಂಬೈನ ಸ್ತ್ರೀರೋಗತಜ್ಞೆ ಅನಾಹಿತಾ ಪಾಂಡೋಲೆ ಅವರು

ಕಾರನ್ನು ಚಲಾಯಿಸುತ್ತಿದ್ದರು. ಕಾರು ಅತ್ಯಂತ ವೇಗವಾಗಿ ಚಲಿಸುತ್ತಿತ್ತು. ಈ ವೇಳೆ ಎಡಗಡೆಯಿಂದ ಇನ್ನೊಂದು ವಾಹನವನ್ನು ಓವರ್‌ಟೇಕ್ ಮಾಡಲು ಯತ್ನಿಸಿದಾಗ ನಿಯಂತ್ರಣ ತಪ್ಪಿ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ ಎನ್ನುವುದು ಪ್ರಾಥಮಿಕ ಮಾಹಿತಿಯಿಂದ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

9ನೇ ಪುಟ ನೋಡಿ

ರಾಜ್ಯದಲ್ಲಿ ಮತ್ತೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೆ.5 ರಿಂದ ನಾಲ್ಕು ದಿನಗಳ ಕಾಲ ಮತ್ತೆ ಭಾರಿ ಮಳೆ ಸುರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಸೆ.5ರಂದು ಕೊಡಗು ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಹಾಗೂ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು, ಮೈಸೂರು, ಚಿಕ್ಕಬಳ್ಳಾಪುರ, ಮಂಡ್ಯ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಅಪರಿಚಿತ ಲಿಂಕ್ **ಮೇಲೆ ಕ್ಲಿಕ್ ಮಾಡಬೇಡಿ**

ಬ್ಯಾಂಕ್ ಡೀಟೇಲ್ಸ್ **ಶೇರ್ ಮಾಡಬೇಡಿ**



ಇಂಟರ್ನೆಟ್ ಸುರಕ್ಷತೆಗಾಗಿ

ಎರಡು ಹೆಜ್ಜೆ ಮುಂದೆ ಇರಿ

Google ಸುರಕ್ಷತಾ ಕೇಂದ್ರ

ಸಾರ್ವಜನಿಕ ಹಿತಾಸಕ್ತಿಗಾಗಿ ಪ್ರಕಟಿಸಲಾಗಿದೆ

Google | Ministry of Electronics & Information Technology, Government of India | Digital India, Power To Empower

ಇದರಿಂದ ಬೆಂಬಲಿತವಾಗಿದೆ: SBI The banker to every Indian | ICICI Bank | kotak Kotak Mahindra Bank | AXIS BANK | HDFC BANK | airtel

Google ಮತ್ತು ಎರಡು ಹೆಜ್ಜೆ ಮುಂದೆ ಇರಿ ಎಂಬುದು Google LLC ಯ ಟ್ರೇಡ್‌ಮಾರ್ಕ್ ಆಗಿವೆ. ಅಭಿಯಾನದಲ್ಲಿ ಉಲ್ಲೇಖ ಮಾಡಲಾಗಿರುವ ಎಲ್ಲಾ ಥರ್ಡ್-ಪಾರ್ಟಿ ಕಂಪನಿ ಹೆಸರುಗಳು ಮತ್ತು ಲೋಗೋಗಳು ಆಯಾ ಥರ್ಡ್-ಪಾರ್ಟಿಗಳ ಮಾಲೀಕತ್ವದಲ್ಲಿವೆ ಮತ್ತು ಅವು ಆಯಾ ಮಾಲೀಕರ ಸ್ವತ್ತಾಗಿ ಇರುತ್ತವೆ.

ಪ್ರಮುಖ ಜಂಕ್ಷನ್‌ಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭೇಟಿ, ಪರಿಶೀಲನೆ

ನವೆಂಬರ್‌ಗೆ ಎಲ್ಲೆಡೆ ರಸ್ತೆ ದುರಸ್ತಿ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಲ್ಲಾ ರಸ್ತೆಗಳು ನವೆಂಬರ್ ವೇಳೆಗೆ ಸರಿಯಾಗಲಿವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭರವಸೆ ನೀಡಿದರು.

ನಗರದಲ್ಲಿ ಸೆ. 7ರ ತನಕ ಮಳೆಯಾಗಲಿದೆ. ಈ ಅವಧಿಯಲ್ಲಿ ತಾತ್ಕಾಲಿಕವಾಗಿ ಸರಿಪಡಿಸಲಾಗುವುದು. ಎರಡನೇ ವಾರದಿಂದ ಒಣ ಹವೆ ನಿರೀಕ್ಷಿಸಲಾಗಿದ್ದು, ಬಳಿಕ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದರು.

'ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಕ್ಟೋಬರ್ ಮೊದಲ ಅಥವಾ ಎರಡನೇ ವಾರದಲ್ಲಿ ಕಾಮಗಾರಿ ಆರಂಭಿಸಲಾಗುವುದು. ನವೆಂಬರ್ ವೇಳೆಗೆ ಎಲ್ಲೆಡೆ ಹೊಸ ರಸ್ತೆಗಳು ಇರಲಿವೆ. ಗುಂಡಿಗಳಿಂದ ಮುಕ್ತವಾಗಲಿವೆ' ಎಂದು ಹೇಳಿದರು.

ಹೊರ ವರ್ತುಲ ರಸ್ತೆಯಲ್ಲಿ ರಾಜಕಾಲುವೆ ಕಾಮಗಾರಿಯನ್ನು ತುಷಾರ್ ಗಿರಿನಾಥ್ ಪರಿಶೀಲನೆ ನಡೆಸಿದರು

ಮುಖ್ಯಮಂತ್ರಿಗಳ ನವ ನಗರೋತ್ಥಾನ ಕಾರ್ಯಕ್ರಮದಡಿ ಬಿಡುಗಡೆಯಾದ ₹6 ಸಾವಿರ ಕೋಟಿ ಅನುದಾನದಲ್ಲಿ ₹3,698 ಕೋಟಿಯನ್ನು ವಾರ್ಡ್ ಮಟ್ಟದ ಬಡಾವಣೆ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಪ್ರಮುಖ ರಸ್ತೆಗಳಿಗೆ ಡಾಂಬರ್ ಹಾಕಲು ₹700 ಕೋಟಿ ನಿಗದಿ ಮಾಡಲಾಗಿದೆ ಎಂದು ವಿವರಿಸಿದರು.

ಪ್ರಮುಖ ಜಂಕ್ಷನ್‌ಗಳಿಗೆ ಭೇಟಿ: ವಾಹನಗಳ ಸುಗಮ ಸಂಚಾರ ಮತ್ತು ಮಳೆ ನೀರು ರಸ್ತೆ ಮೇಲೆ ನಿಲ್ಲುವುದನ್ನು ತಪ್ಪಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಲು ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ತುಷಾರ್ ಗಿರಿನಾಥ್ ಶನಿವಾರ ರಾತ್ರಿ ಪರಿಶೀಲನೆ ನಡೆಸಿದರು.

ಹೊರವರ್ತುಲ ರಸ್ತೆಯಲ್ಲಿ ಇಕೊಸ್ಪೇಸ್ ಬಳಿ ರಾಜ ಕಾಲುವೆಯ ಪುನರ್ ವಿನ್ಯಾಸ ಕಾಮಗಾರಿ ಪ್ರಗತಿಯಲ್ಲಿದ್ದು, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಬೇಕು. ಮಳೆ ನೀರು ಸರಾಗವಾಗಿ ಹರಿಯಲು ಪರ್ಯಾಯವಾಗಿ ಕ್ರಾಸ್ ಕಲ್ವರ್ಟ್‌ಗಳನ್ನು ನಿರ್ಮಿಸಬೇಕು ಎಂದು ಸೂಚಿಸಿದರು.

ಸದ್ಯ ಇರುವ ಪ್ರಮುಖ ನೀರು ಗಾಲುವೆಗೆ ಅಳವಡಿಸಿರುವ ಮೂರು ಕೊಳವೆಗಳು ಚಿಕ್ಕದಾಗಿವೆ. ಅದನ್ನು ವಿಸ್ತರಿಸಬೇಕು. ಮೇಲ್ಸೇತುವೆ ಬಳಿ ನೀರು ಕೆಳಭಾಗದಲ್ಲಿ ಸರಾಗವಾಗಿ ಹರಿದು ಹೋಗಲು ಕಾಮಗಾರಿ ಕೈಗೆತ್ತಿಕೊಳ್ಳಬೇಕು. ಇಕೊಸ್ಪೇಸ್ ಆವರಣದ ಕೆಇಬಿ ಸ್ಟೇಷನ್ ಬಳಿ ರಾಜಕಾಲುವೆ ಒತ್ತುವರಿ ತೆರವಾಗಿದೆ. ನೀರು ಸರಾಗವಾಗಿ ಹರಿದು ಹೋಗಲು ಕಾಲುವೆಯ ಮೇಲೆ ಅಳವಡಿಸಿರುವ ಸ್ಲ್ಯಾಬ್‌ಗಳನ್ನೂ ತೆಗೆಯಬೇಕು ಎಂದು ತಿಳಿಸಿದರು.

ಮುಖ್ಯಾಂಶಗಳು
- ನವ ನಗರೋತ್ಥಾನ ಕಾರ್ಯಕ್ರಮದಡಿ ಅಭಿವೃದ್ಧಿ
- ಅಕ್ಟೋಬರ್ ಮೊದಲಾರ್ಧದಲ್ಲಿ ಕಾಮಗಾರಿ ಆರಂಭ
- ಇಕೊಸ್ಪೇಸ್ ಬಳಿ ರಾಜ ಕಾಲುವೆ ಪುನರ್ ವಿನ್ಯಾಸ

ಬಳಿಕ ಇಬ್ಲೂರು ಜಂಕ್ಷನ್ ಪರಿಶೀಲನೆ ನಡೆಸಿದ ಅವರು, ಪಾದಚಾರಿ ಮಾರ್ಗ ಅಭಿವೃದ್ಧಿ ಪಡಿಸಲು ಸೂಚನೆ ನೀಡಿದರು. ಜೆಡಿ ಮರ ಜಂಕ್ಷನ್‌ನಲ್ಲಿ ರಸ್ತೆ ಬದಿಯ ಸಣ್ಣ ಕಾಲುವೆಗಳನ್ನು ಸ್ವಚ್ಛಗೊಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸುಮನಹಳ್ಳಿ ಜಂಕ್ಷನ್‌ನಲ್ಲಿ ಶೌಚಾಲಯವನ್ನು ಸಾರ್ವಜನಿಕರ ಸೇವೆಗೆ ಕೂಡಲೇ ಒದಗಿಸಬೇಕು. ಪಾದಚಾರಿ ಮೇಲ್ಸೇತುವೆ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಬೇಕು. ಮೇಲ್ಸೇತುವೆ ಕೆಳಭಾಗದಲ್ಲಿ ಕಿರು ಉದ್ಯಾನ ನಿರ್ಮಾಣ ಮಾಡಬೇಕು ಎಂದು ಸೂಚನೆ ನೀಡಿದರು.

ಕೆ.ಆರ್.ಪುರ, ಗೊರಗುಂಟೆ ಪಾಳ್ಯ, ಸಾರಕ್ಕಿ ಜಂಕ್ಷನ್‌ಗಳಲ್ಲೂ ಪರಿಶೀಲನೆ ನಡೆಸಿದರು. ವಲಯ ಆಯುಕ್ತರಾದ ತ್ರಿಲೋಕ್ ಚಂದ್ರ, ಹರೀಶ್ ಕುಮಾರ್, ರಾಮ್ ಪ್ರಸಾದ್ ಮನೋಹರ್, ವಲಯ ಜಂಟಿ ಆಯುಕ್ತರಾದ ಪೂರ್ಣಿಮಾ, ವೆಂಕಟಾ ಚಲಪತಿ, ನಾಗರಾಜ್, ಮುಖ್ಯ ಎಂಜಿನಿಯರ್ ಲೋಕೇಶ್, ಬಸವರಾಜ್ ಕಬಾಡೆ, ಶಶಿಕುಮಾರ್, ವಿಜಯಕುಮಾರ್ ಇದ್ದರು.

ಸುದ್ದಿ 2 ನಿಮಿಷ

'ಬರಗೂರು ವಿರುದ್ಧ ದೂರು: ಸದುದ್ದೇಶದ ನಡವಳಿಕೆಯಲ್ಲ'

ಬೆಂಗಳೂರು: 'ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ವಿರುದ್ಧ ದೂರು ದಾಖಲಿಸಿ ಕ್ರಮಕ್ಕೆ ಬಯಸುತ್ತಿರುವುದು ಸದುದ್ದೇಶದ ನಡವಳಿಕೆಯಲ್ಲ' ಎಂದು ರಾಜ್ಯಸಭೆ ಸದಸ್ಯ ಎಲ್.ಹನುಮಂತಯ್ಯ ಅಭಿಪ್ರಾಯಪಟ್ಟಿದ್ದಾರೆ.

ನಗರ ಪೊಲೀಸ್ ಕಮಿಷನರ್ ಅವರಿಗೆ ಪತ್ರ ಬರೆದಿರುವ ಅವರು, '40 ವರ್ಷಗಳ ಹಿಂದೆ ಬರೆದಿದ್ದ 'ಭರತನಗರಿ' ಕಾದಂಬರಿಯಲ್ಲಿ ರಾಷ್ಟ್ರ ಗೀತೆಯ ವಿಡಂಬನೆ ಮಾಡಿದ್ದಾರೆ ಎಂಬ ದೂರಿನಲ್ಲಿ ರಾಷ್ಟ್ರ ದ್ರೋಹ ಹೇಗೆ ಆಗುತ್ತದೆ, ಸಮುದಾಯಗಳ ಭಾವನೆಯನ್ನು ಹೇಗೆ ಕೆಡಿಸುತ್ತದೆ ಎಂಬುದನ್ನು ವಿವರಿಸಿಲ್ಲ. ಆದ್ದರಿಂದ ದೇಶದ್ರೋಹದ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದಿದ್ದಾರೆ.

'ಸಾಹಿತ್ಯದ ಒಡನಾಡಿಯಾಗಿ 48 ವರ್ಷಗಳಿಂದ ಬರಗೂರು ರಾಮಚಂದ್ರಪ್ಪ ಅವರನ್ನು ಕಂಡಿದ್ದೇನೆ. ಸಮುದಾಯಗಳ ನಡುವೆ ಅಶಾಂತಿ ಉಂಟುಮಾಡುವ ಬರಹವನ್ನು ಅವರು ಎಂದೂ ರಚಿಸಿಲ್ಲ' ಎಂದು ತಿಳಿಸಿದ್ದಾರೆ.

ಇಷ್ಟಾದರೂ ಬರಹ ಅಪಾರ್ಥ ಉಂಟು ಮಾಡಬಹುದೆಂದು ಊಹಿಸಿ ಮರು ಮುದ್ರಣದಲ್ಲಿ ಅನುಮಾನಕ್ಕೆ ಅವಕಾಶವಿಲ್ಲದಂತೆ ಪುನರ್ ರಚಿಸಿದ್ದಾರೆ. ಅಲ್ಲದೆ, ಸಾರ್ವಜನಿಕವಾಗಿ ವಿಷಾದ ಕೂಡ ವ್ಯಕ್ತಪಡಿಸಿದ್ದಾರೆ. ಲೇಖಕನೊಬ್ಬ ಈ ರೀತಿ ವಿಷಾದ ವ್ಯಕ್ತಪಡಿಸಿದ ಬಳಿಕವೂ ಅವರ ಮೇಲೆ ದೂರು ದಾಖಲಿಸಿ ಕ್ರಮವಹಿಸಬೇಕೆಂದು ಬಯಸುವುದು ವಸ್ತುನಿಷ್ಠ ನಡೆಯಲ್ಲ' ಎಂದು ಹೇಳಿದ್ದಾರೆ.

ಗೂಡ್ಸ್ ವಾಹನ ಡಿಕ್ಕಿ: ಬಾಲಕ ಸಾವು

ಕನಕಪುರ: ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದು ಅಂಗಡಿ ಮುಂದೆ ನಿಂತಿದ್ದ ರಾಚೇನಮಡು ಗ್ರಾಮದ ಜೀವನ್ (13) ಮೃತಪಟ್ಟಿದ್ದಾನೆ. ರಾಚೇನಮಡು ಗ್ರಾಮದಲ್ಲಿ ಶನಿವಾರ ಈ ಘಟನೆ ನಡೆದಿದೆ. ತಲಗಟ್ಟಪುರದಿಂದ ಕಗ್ಗಲೀಪುರ ಕಡೆಗೆ ಕಬ್ಬಿಣ ತುಂಬಿಕೊಂಡು ಹೋಗುತ್ತಿದ್ದ ವೇಳೆ ನಿಯಂತ್ರ ತಪ್ಪಿ ಅಂಗಡಿಗೆ ನುಗ್ಗಿ ಅವಘಡ ಸಂಭವಿಸಿದೆ.

ಬಿಬಿಎಂಪಿ: ಗುತ್ತಿಗೆದಾರರು ಬಿಲ್‌ಗೆ ಕಾಯಬೇಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ ಪಾವತಿಸಲು ₹3 ಸಾವಿರ ಕೋಟಿ ಬಾಕಿ ಉಳಿಸಿಕೊಂಡಿರುವ ಬಿಬಿಎಂಪಿ, ಗುತ್ತಿಗೆದಾರರ ಒತ್ತಡ ಕಡಿಮೆ ಮಾಡಲು ಹೊಸ ಯೋಜನೆಯೊಂದನ್ನು ರೂಪಿಸಿದೆ.

ಬಿಬಿಎಂಪಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು ಬಿಲ್ ಪಡೆದುಕೊಳ್ಳಲು ಕನಿಷ್ಠ 2 ವರ್ಷ ಬೇಕಾಗುತ್ತಿದೆ. ರಿಯಾಯಿತಿ ಯೋಜನೆಯಡಿ ರೂಪಿಸಿರುವ ಹೊಸ ಯೋಜನೆ 15 ದಿನಗಳಲ್ಲಿ ಜಾರಿಗೆ ಬರಲಿದ್ದು, ಗುತ್ತಿಗೆದಾರರು ಇನ್ನು ಎರಡು ವರ್ಷ ಕಾಯಬೇಕಿಲ್ಲ.

ಬಿಡುಗಡೆ ಆಗಬೇಕಿರುವ ಮೊತ್ತಕ್ಕೆ ಎರಡು ವರ್ಷದ ಬಡ್ಡಿಯನ್ನು ಬ್ಯಾಂಕ್‌ಗಳಿಗೆ ಪಾವತಿಸಿ ತಕ್ಷಣವೇ ಬ್ಯಾಂಕ್‌ನಿಂದ ಸಾಲದ ರೂಪದಲ್ಲಿ ಹಣ ಪಡೆಯಬಹುದಾಗಿದೆ. ಇದಕ್ಕೆ ಬಿಬಿಎಂಪಿ ಖಾತರಿ ನೀಡಲಿದೆ. ಇದು ಎಲ್ಲಾ ಗುತ್ತಿಗೆದಾರರಿಗೂ ಕಡ್ಡಾಯವಲ್ಲ, ತುರ್ತು ಹಣದ ಅಗತ್ಯ ಇಲ್ಲದವರು ಎರಡು ವರ್ಷ ಕಾಯಬಹುದು. ಈ ಯೋಜನೆ ಗುತ್ತಿಗೆದಾರರಿಗೆ ಅನುಕೂಲ ಆಗಲಿದ್ದು, ಶೇ 70ರಷ್ಟು ಬಾಕಿ ಬಿಲ್ ಸಮಸ್ಯೆ ಪರಿಹಾರವಾಗಲಿದೆ ಎಂದು ಬಿಬಿಎಂಪಿ ನಿರೀಕ್ಷಿಸಿದೆ.

ತನ್ನ ಬಜೆಟ್‌ಗಿಂತ ಹೆಚ್ಚಿನ ಖರ್ಚು ಮಾಡುವುದರಲ್ಲಿ ಎತ್ತಿದ ಕೈ ಎನಿಸಿಕೊಂಡಿರುವ ಬಿಬಿಎಂಪಿ, ಬಿಲ್‌ಗಳನ್ನು ಎರಡು ವರ್ಷ ತಡವಾಗಿ ಪಾವತಿಸುತ್ತಿದೆ. ಕಾಮಗಾರಿ ಪೂರ್ಣಗೊಳಿಸಿದ ಸಮಯದ ಜೇಷ್ಠತೆ ಆಧರಿಸಿ ಬಿಲ್‌ಗಳನ್ನು ಪಡೆದುಕೊಳ್ಳುತ್ತಿದ್ದು, ಸದ್ಯ 2020ರಲ್ಲಿ ನಿರ್ವಹಿಸಿದ ಕಾಮಗಾರಿಯ ಬಿಲ್‌ಗಳು ಪಾವತಿಯಾಗುತ್ತಿವೆ.

ಇದು ಗುತ್ತಿಗೆದಾರರಲ್ಲಿ ಹತಾಶೆಯ ಸ್ಥಿತಿ ನಿರ್ಮಿಸಿದ್ದು, ಕಳಪೆ ಕಾಮಗಾರಿಗೂ ಕಾರಣವಾಗುತ್ತಿದೆ. ಬಿಲ್ ಪಡೆಯುವಷ್ಟರಲ್ಲಿ ಕಾಮಗಾರಿ ನಿರ್ವಹಿಸಿದ ಕುರುಹೇ ಇಲ್ಲದಾಗುತ್ತಿದ್ದು, ಇದು ತಾಂತ್ರಿಕ ಸಮಸ್ಯೆಯನ್ನೂ ಉಂಟು ಮಾಡುತ್ತಿದೆ. ಕಾಮಗಾರಿ ನಿರ್ವಹಿಸದೆ ಬಿಲ್ ಪಡೆಯುವ ಅವ್ಯವಹಾರಕ್ಕೂ ಇದು ದಾರಿ ಮಾಡಿಕೊಡುತ್ತಿದೆ. ಬಿಲ್ ಪಾವತಿ ಅವಧಿ ಕಡಿಮೆ ಮಾಡಬೇಕು ಎಂಬುದು ಪಾಲಿಕೆ ಗುತ್ತಿಗೆದಾರರು ಆಗಾಗ ಮನವಿ ಸಲ್ಲಿಸುತ್ತಲೇ ಇದ್ದಾರೆ. ಈ ಸಮಸ್ಯೆಗಳಿಗೆ ಹೊಸ ಯೋಜನೆ ಪರಿಹಾರವಾಗಲಿದೆ ಎಂದು ಬಿಬಿಎಂಪಿ ಅಂದಾಜಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್, 'ತಕ್ಷಣಕ್ಕೆ ಹಣದ ಅಗತ್ಯ ಇದ್ದವರಿಗೆ ಈ ಯೋಜನೆ ಸಹಾಯವಾಗುತ್ತದೆ. ಬಿಬಿಎಂಪಿಗೆ ಯಾವುದೇ ನಷ್ಟ ಇಲ್ಲ' ಎಂದರು.

10 ಮಂದಿಗೆ ಸದ್ಭಾವನಾ ಪ್ರಶಸ್ತಿ

ಬೆಂಗಳೂರು: ಇಲ್ಲಿನ ಕಲಾಬಂಧು ಫೌಂಡೇಶನ್ ವತಿಯಿಂದ ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ 10 ಮಂದಿ ಸಾಧಕರಿಗೆ ಕರ್ನಾಟಕ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ತಾರಿಹಳ್ಳಿ ಹನುಮಂತಪ್ಪ, ಕೆಪಿಸಿಸಿ ಮಹಿಳಾ ವಿಭಾಗದ ಪ್ರಧಾನ ಕಾರ್ಯದರ್ಶಿ ಶುಭಾ ವೇಣುಗೋಪಾಲ್, ಚಲನಚಿತ್ರ ನಟಿ ಸುಧಾ ನರಸಿಂಹರಾಜು, ನಿವೃತ್ತ ಪ್ರಾಧ್ಯಾಪಕರಾದ ಮಲ್ಲಾಜಮ್ಮ ಬಿ. ಮೈಸೂರು ಮಹದೇವಪ್ಪ, ಸಮಾಜ ಸೇವಕ ಲಿಂಗಣ್ಣಗೌಡ ಹೇರೂರು, ಲೆಕ್ಕ ಪರಿಶೋಧಕ ಶಾಂತಾರಾಂ, ಕ್ರೀಡಾಪಟು ಗೋವಿಂದನಾಯಕ್, ರಂಗಕರ್ಮಿ ಟಿ.ಎನ್.ರುದ್ರಪ್ಪ, ಸಮಾಜ ಸೇವಕರಾದ ರಾಜಮಣಿ, ಮುಶಬ್ಬೀರ್‌ಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಮಾತನಾಡಿ, ಸಮಾಜದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿ ರುದ್ಧ ಯುವ ಸಮೂಹ ಧ್ವನಿಯೆತ್ತಬೇಕು; ಹೋರಾಟ ನಡೆಸಬೇಕು. ಹಿಂದೆ ಅಲ್ಪಪ್ರಮಾಣದಲ್ಲಿದ್ದ ಭ್ರಷ್ಟಾಚಾರ ಇದೀಗ ಮಿತಿಮೀರಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನ್ಯೂ ಹಾರ್ಡ್ವಿಕ್ ಇಂಡಿಯನ್ ಸ್ಕೂಲ್‌ನ ವಿ.ಕೃಷ್ಣಮೂರ್ತಿ, ಆಡಳಿತ ಸುಧಾರಣಾ ವೇದಿಕೆ ಅಧ್ಯಕ್ಷ ಬಿ.ಎಚ್. ಸುರೇಶ್, ನಳಪಾಕ ಹೋಟೆಲ್ ಮಾಲೀಕ ಲಿಂಗಯ್ಯ ಬಿ. ಕಾಡದೇವರಮಠ, ಎಚ್.ನರಸಿಂಹರಾಜು ಹಾಜರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Engg/ Production Technical

ELECTRICAL SUPERVISORS and Electricians, are required for software /BPO /property maintenance in Bangalore, Handsome salary along with PF, ESI, bonus Candidates with ITI/ Diploma pls Contact: 9731105253, 8867619227, 9740496632

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

REAL ESTATE SELLING

Flat

Malleshwaram

2 AND 3 BHK Flat for Sale at Malleshwaram Link Road 1 KM From Mantri Mall Metro Station, OC Received Only few Units Left Ready to Occupy Starts From 1.35Cr Contact: 9901556699

BUSINESS

Business Offers

General

"TUITION SPACE available revenue sharing furnished No Rent,No Advance,No Maintenance,near Bommanahalli bus-stop. Contact-Owner: 9741536976"

PERSONAL

Change of Name

I, K.CHARUMATHI Dorthy alias Charumathi Krishnamurthy Rao W/o P. Sawaria Vincent Raj Periya Nayagam Residing at #1502, B-38, 3rd Stage, BDA, Austin Town, Bangalore-560047.declare that both above names pertain to same person Only. vide affidavit dated 25.08.2022 before notary A.S.Narayana Reddy, Bangalore

Book Your Classifieds Ads Online Log in to dhclassifieds.com

DH Deccan Herald | ಪ್ರಜಾವಾಣಿ
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಆರ್‌.ವಿ. ಪ್ರಣವ ವಿದ್ಯಾರತ್ನ ಪ್ರಶಸ್ತಿ ಪಡೆದ ಹರೇಕಳ ಹಾಜಬ್ಬ ಅಭಿಮತ

'ಮಕ್ಕಳು ಶಿಕ್ಷಣ ಪಡೆದು ಉತ್ತಮ ಬದುಕು ನಡೆಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡತನದಿಂದ ನನಗೆ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ಬೇರೆ ಮಕ್ಕಳು ಶಿಕ್ಷಣ ಪಡೆದು ಉತ್ತಮ ಬದುಕು ನಡೆಸಲಿ ಎಂದು ಶಾಲೆ ಕಟ್ಟಿದೆ' ಎಂದು 'ಅಕ್ಷರ ಸಂತ' ಹರೇಕಳ ಹಾಜಬ್ಬ ಹೇಳಿದರು.

ಪ್ರಣವ್ ಫೌಂಡೇಶನ್, ಆರ್.ವಿ.ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಹಾಗೂ ಆರ್.ವಿ.ದಂತ ಮಹಾವಿದ್ಯಾಲಯದಲ್ಲಿ ಭಾನುವಾರ ಆಯೋಜಿಸಿದ್ದ ಗುರು ವಂದನೆ ಕಾರ್ಯಕ್ರಮದಲ್ಲಿ ಆರ್.ವಿ. ಪ್ರಣವ ವಿದ್ಯಾರತ್ನ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಗುರು ವಂದನೆ ಕಾರ್ಯಕ್ರಮದಲ್ಲಿ ಹರೇಕಳ ಹಾಜಬ್ಬ ಅವರಿಗೆ 'ಆರ್‌.ವಿ. ಪ್ರಣವ ವಿದ್ಯಾರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಂಜಮ್ಮ ಜೋಗತಿ, ಸಂಸದ ತೇಜಸ್ವಿ ಸೂರ್ಯ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಎಂ.ಪಿ.ಶ್ಯಾಮ್, ಪ್ರಣವ್ ಫೌಂಡೇಶನ್ ಗೌರವ ಸಲಹೆಗಾರ ಆರ್. ಪ್ರಸಾದ್ ಇದ್ದಾರೆ

'ಮುಂದಿನ ಪೀಳಿಗೆಯ ಮಕ್ಕಳಿಗಾಗಿ ಶಾಲೆ ಕಟ್ಟಬೇಕೆಂದು ಕನಸು ಕಂಡೆ. ಅದರಂತೆ ಅನೇಕ ದಾನಿಗಳು, ಸರ್ಕಾರಿ ಅಧಿಕಾರಿಗಳ ಸಹಾಯ ಪಡೆದು ಶಾಲೆ ನಿರ್ಮಿಸಿದೆ' ಎಂದು ಹೇಳಿದರು

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, 'ಗಣಿತ ವಿಷಯದಲ್ಲಿ ಬಹಳ ಹಿಂದುಳಿದಿದ್ದೆ. ಆಗ ಗಣಿತ ಶಿಕ್ಷಕರು ತರಗತಿಯ ಕೊನೆಯ ಅವಧಿಯಲ್ಲಿ ಆತ್ಮವಿಶ್ವಾಸ ಮೂಡಿಸಿದರು. ನಾನು ಸಂಸದನಾಗಿ ಗೌರವ ಪಡೆದಿರುವುದಕ್ಕೆ ಅಂತಹ ಶಿಕ್ಷಕರೇ ಕಾರಣ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಹೆಚ್ಚು ವಿದ್ಯಾವಂತರು ನೆಲೆಸಿದ್ದಾರೆ. ಆದರೆ ಕೆಲ ವರ್ಷಗಳಿಂದ ಈ ಕ್ಷೇತ್ರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದಾರೆ. ಹೀಗಾಗಿ, ಈ ಕ್ಷೇತ್ರದಲ್ಲಿ ಮಕ್ಕಳಿಗೆ ಉಚಿತ ವಿಶೇಷ ತರಬೇತಿ ನೀಡುವ ಕಾರ್ಯಕ್ರಮ ಜಾರಿಗೊಳಿಸಲಾಗಿದೆ' ಎಂದು ತಿಳಿಸಿದರು. ಮಂಜಮ್ಮ ಜೋಗತಿ ಇದ್ದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಎಂ.ಪಿ.ಶ್ಯಾಮ್ ಅವರು, ಹರೇಕಳ ಹಾಜಬ್ಬ ಅವರ ಮಂಗಳೂರಿನ ನ್ಯೂಪಡ್ಪು ಸರ್ಕಾರಿ ಶಾಲೆಗೆ ₹5 ಲಕ್ಷ ನೆರವು ನೀಡುವುದಾಗಿ ಭರವಸೆ ನೀಡಿದರು.

'ಸಿಂಪಲ್ ತಿಂಡಿ'ಗೆ ಅನುಮತಿ ರದ್ದು: ಹೈಕೋರ್ಟ್‌ಗೆ ಹೇಳಿಕೆ

ಬೆಂಗಳೂರು: ನಗರದ ಕೆ.ಆರ್. ವೃತ್ತದಲ್ಲಿರುವ ಲೋಕೋಪಯೋಗಿ ಇಲಾಖೆ ಕಟ್ಟಡದ ಆವರಣದಲ್ಲಿ 'ಸಿಂಪಲ್ ತಿಂಡಿ' ಹೆಸರಿನ ಹೋಟೆಲ್ ಆರಂಭಿಸುವುದಕ್ಕೆ ನೀಡಲಾಗಿದ್ದ ಅನುಮತಿಯನ್ನು ಹಿಂಪಡೆಯಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಸಾಮಾಜಿಕ ಹೋರಾಟಗಾರ ಸಾಯಿದತ್ತಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು, ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈಚೆಗೆ ವಿಚಾರಣೆ ನಡೆಸಿತು.

ಸರ್ಕಾರದ ಪರ ವಕೀಲರು, ಕೆ.ಆರ್. ವೃತ್ತದಲ್ಲಿರುವ ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯುಡಿ) ಕಟ್ಟಡದ ಆವರಣದಲ್ಲಿನ 'ಸಿಂಪಲ್ ತಿಂಡಿ' ಹೆಸರಿನಲ್ಲಿ ಹೋಟೆಲ್‌ಗೆ ಅನುಮತಿ ನೀಡಲಾಗಿತ್ತು. ಆದರೆ, ಆವರಣದಲ್ಲಿ ಇಲಾಖೆಯ ವಿವಿಧ ಕಚೇರಿಗಳಿರುವ ಕಾರಣ ಜನದಟ್ಟಣೆ ಉಂಟಾಗಿ ವಾಹನಗಳ ನಿಲುಗಡೆಗೆ ತೊಂದರೆಯಾಗಲಿದೆ ಎಂಬ ಉದ್ದೇಶದಿಂದ ಅನುಮೋದನೆ ರದ್ದುಪಡಿಸಲಾಗಿದೆ' ಎಂದು ತಿಳಿಸಿ ದರು.

ಏನಿದು ಪ್ರಕರಣ?: ಕೆ.ಆರ್. ವೃತ್ತದಲ್ಲಿರುವ ಲೋಕೋಪಯೋಗಿ ಇಲಾಖೆ ಕಚೇರಿ ಆವರಣದಲ್ಲಿ 'ಸಿಂಪಲ್ ತಿಂಡಿ' ಆರಂಭಿಸಲು ಅನುಮತಿ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ಸಾಯಿದತ್ತಾ ಕೋರ್ಟ್ ಮೆಟ್ಟಿಲೇರಿದ್ದರು.

ಸಂತ ಭದ್ರಗಿರಿ ಅಚ್ಯುತದಾಸ ಮತ್ತು ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್ ಸ್ಮರಣಾರ್ಥ ಷಡ್ಜ ಕಲಾ ಕೇಂದ್ರ ಹಾಗೂ ಭಾರತೀಯ ವಿದ್ಯಾ ಭವನ ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದೇ.ಸು.ವೆಂಕಟೇಶದಾಸ್ ಮತ್ತು ಕಲೈಮಾಮಣಿ ವಿಶಾಖಾ ಹರಿ ಅವರಿಗೆ 'ಅಚ್ಯುತಶ್ರೀ' ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಾಜ್ಯಸಭಾ ಸದಸ್ಯ ಜಗ್ಗೇಶ್, ಭಾರತೀಯ ವಿದ್ಯಾ ಭವನ ಜಂಟಿ ನಿರ್ದೇಶಕ ಪಿ. ವೇಣುಗೋಪಾಲ್, ಸ್ವಾಮಿ ಮಂಗಳನಾಥನಂದಜೀ, ಭಾರತೀಯ ವಿದ್ಯಾ ಭವನದ ನಿರ್ದೇಶಕ ಎಚ್.ಎನ್. ಸುರೇಶ್, ದತ್ತಾತ್ರೇಯ ಎಲ್. ವೇಲಣಕರ್ ಮತ್ತು ಭಾರತೀಯ ವಿದ್ಯಾ ಭವನ ಜಂಟಿ ನಿರ್ದೇಶಕರು ನಾಗಲಕ್ಷ್ಮಿ ಕೆ.ರಾವ್ ಇದ್ದರು – ಪ್ರಜಾವಾಣಿ ಚಿತ್ರ

ಸಂಗೀತ ಸಂಜೆ

ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದ ಆವರಣದಲ್ಲಿ ಭಾನುವಾರ 'ಶ್ರೀ ವಿದ್ಯಾರಣ್ಯ ಯುವಕ ಸಂಘ' ಆಯೋಜಿಸಿದ್ದ 'ಬೆಂಗಳೂರು ಗಣೇಶ ಉತ್ಸವ' ಕಾರ್ಯಕ್ರಮದಲ್ಲಿ ಚಲನಚಿತ್ರ ಹಿನ್ನೆಲೆ ಗಾಯಕಿ ಶ್ರೇಯಾ ಘೋಷಾಲ್ ಸಂಗೀತ ಸಂಜೆ ನಡೆಸಿಕೊಟ್ಟರು -ಪ್ರಜಾವಾಣಿ ಚಿತ್ರ

ಬಿಬಿಎಂಪಿ ಕಸದ ಲಾರಿ ಡಿಕ್ಕಿ, ಯುವಕ ಬಲಿ

ದೊಡ್ಡಬೆಳವಂಗಲ (ದೊಡ್ಡಬಳ್ಳಾಪುರ): ಬಿಬಿಎಂಪಿ ಕಸ ಸಾಗಣೆ ಲಾರಿ ಹಾಗೂ ದ್ವಿಚಕ್ರ ವಾಹನದ ನಡುವೆ ದಾಬಸ್‌ಪೇಟೆ-ದೊಡ್ಡಬಳ್ಳಾಪುರ ರಾಷ್ಟ್ರೀಯ ಹೆದ್ದಾರಿ ಮೂಗೇನಹಳ್ಳಿ ಗೇಟ್ ಬಳಿ ಭಾನುವಾರ ಅಪಘಾತ ಸಂಭವಿಸಿದ್ದು, ಸವಾರ ಮಾವಿನಕುಂಟೆ ಗ್ರಾಮದ ನಿವಾಸಿ ರಾಜು (28) ಸ್ಥಳದಲ್ಲೇ ಮೃತಪಟ್ಟರು.

ಗ್ರಾಮಸ್ಥರು ಬಿಬಿಎಂಪಿ ಯುವಕನ ಕುಟುಂಬಕ್ಕೆ ಪರಿಹಾರ ನೀಡ ಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ನಗರದಲ್ಲಿ ಇಂದು

ಏಳನೇ ಬೆಂಗಳೂರು ಬಾಹ್ಯಾಕಾಶ ಪ್ರದರ್ಶನ ಮತ್ತು ಅಂತರರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಎಸ್. ಸೋಮನಾಥ್, ಪವನ್ ಗೋಯೆಂಕಾ, ಆಯೋಜನೆ: ಇಸ್ರೊ, ಇನ್‌ಸ್ಪೇಸ್, ಎನ್‌ಎಸ್‌ಐಎಲ್, ಸಿಐಐ. ಸ್ಥಳ: ಬೆಂಗಳೂರು ಇಂಟರ್‌ನ್ಯಾಷನಲ್ ಎಕ್ಸಿಬಿಷನ್ ಸೆಂಟರ್ (ಬಿಐಇಸಿ), ಬೆಳಿಗ್ಗೆ 9.45

ಶಿಕ್ಷಕರ ದಿನಾಚರಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಬಿ.ಸಿ. ನಾಗೇಶ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಶಿಕ್ಷಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10

ಶಿಕ್ಷಕರ ದಿನಾಚರಣೆ: ಅತಿಥಿಗಳು: ಡಾ.ಕೆ.ಸುಧಾಕರ್, ಅಧ್ಯಕ್ಷತೆ: ಡಾ.ಎಂ. ಕೆ.ರಮೇಶ್, ಆಯೋಜನೆ ಮತ್ತು ಸ್ಥಳ: ರಾಜೀವ್ ಗಾಂಧಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧನ್ವಂತರಿ ಸಭಾಂಗಣ, ಬೆಳಿಗ್ಗೆ 10.30

ಶಿಕ್ಷಕರ ದಿನಾಚರಣೆ: ಬಸರಾಜ ಬೊಮ್ಮಾಯಿ, ಉಪಸ್ಥಿತಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 11

ಕಲಾ ಗಂಗೋತ್ರಿಗೆ 50ರ ಸಂಭ್ರಮ, 'ಮತ್ತೆ ಮುಖ್ಯಮಂತ್ರಿ' ನಾಟಕ ಪ್ರದರ್ಶನ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಕೆ. ಆರ್. ರಮೇಶ್ ಕುಮಾರ್, ಕೃತಿ ಬಿಡುಗಡೆ: ಬಿ.ಎಲ್. ಶಂಕರ್, ಅತಿಥಿಗಳು: ವೈ.ಎಸ್.ವಿ. ದತ್ತ, ಡಾ.ಮಂಜುನಾಥ್, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

ಶಿಕ್ಷಕರ ದಿನಾಚರಣೆ: ಭಾಷಣಕಾರರು: ಲಿಂಗರಾಜ ಗಾಂಧಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸಿ.ವಿ. ರಾಮನ್ ಸಭಾಂಗಣ, ಬೆಳಿಗ್ಗೆ 11

ಶಿಕ್ಷಕರ ದಿನಾಚರಣೆ: ಅತಿಥಿಗಳು: ಜಯರಾಮ್.ಎಸ್.ಎಂ., ಎಂ.ಕೊಟ್ರೇಶ್, ಜೆ.ಟಿ.ದೇವರಾಜು, ಅಧ್ಯಕ್ಷತೆ: ಮುರಳಿಧರ್.ಬಿ.ಎಲ್., ಆಯೋಜನೆ: ಬೆಂಗಳೂರು ಯೂನಿವರ್ಸಿಟಿ ಟೀಚರ್ಸ್ ಕೌನ್ಸಿಲ್, ಸ್ಥಳ: ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಗೌರಿ ಲಂಕೇಶ್ ನೆನಪಿನ ಉಪನ್ಯಾಸ: ಅರುಂಧತಿ ರಾಯ್, ಪ್ರಕಾಶ್ ರೈ, ಮಹಮ್ಮದ್ ಝುಬೇರ್, ಆಯೋಜನೆ: ಗೌರಿ ಮೆಮೋರಿಯಲ್ ಟ್ರಸ್ಟ್, ಸ್ಥಳ: ಸ್ಕೌಟ್ ಆ್ಯಂಡ್ ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಸಂಜೆ 5

ಶಿಕ್ಷಕರ ದಿನಾಚರಣೆ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಉಪನ್ಯಾಸ: ಉದ್ಘಾಟನೆ: ಎಸ್.ಎಚ್. ಭುವನೇಶ್ವರ್, ಎಸ್.ಜಿ. ಸಿದ್ದರಾಮಯ್ಯ, ಅಧ್ಯಕ್ಷತೆ: ಎ.ಎಸ್. ನಾಗರಾಜಸ್ವಾಮಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಕುವೆಂಪು ಸಭಾಂಗಣ, ಸಂಜೆ 5.30

ಶಿಕ್ಷಕರ ದಿನಾಚರಣೆ: ಅತಿಥಿಗಳು: ಎಂ.ಎನ್. ಶೀಲವಂತರ್, ನಿರ್ಮಲ್ ಕುಮಾರ್ ಕೆ.ಆರ್., ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಭಾರತ್ ವಿದ್ಯಾಸಂಸ್ಥೆ, ಸ್ಥಳ: ವಿಚಾರಸಂಕಿರಣ, ಭಾರತ್ ವಿದ್ಯಾಸಂಸ್ಥೆ, ಮಧ್ಯಾಹ್ನ 3

के आई ओ सी एल लिमिटेड
ಕೆಐಓಸಿಎಲ್ ಲಿಮಿಟೆಡ್
(ಭಾರತ ಸರ್ಕಾರದ ಒಂದು ಉದ್ಯಮ)
CIN: L13100KA1976GOI002974
ನೋಂದಾಯಿತ ಕಚೇರಿ : 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560034
ಟೆಲಿಫ್ಯಾಕ್ಸ್ – 080-25531525, ಇಮೇಲ್ : cs@kioclltd.in, ವೆಬ್ : www.kioclltd.in,
KUDREMUKH

46ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಗೆ ಸೇರ್ಪಡೆ

ಇದು ಆಗಸ್ಟ್ 3, 2022 ರಂದು ನಡೆಯಬೇಕಾದ ಕಂಪನಿಯ 46ನೇ ವಾರ್ಷಿಕ ಸಭೆಗೆ ಸದಸ್ಯರಿಗೆ ಕಳುಹಿಸಲಾದ ಸೂಚನೆಗೆ ಸಂಬಂಧಿಸಿದೆ. 46ನೇ ವಾರ್ಷಿಕ ಸಾಮಾನ್ಯ ಸಭೆಯು (AGM) ಶನಿವಾರ, ಸೆಪ್ಟೆಂಬರ್ 17, 2022 ರಂದು ಮಧ್ಯಾಹ್ನ 12.00 ಗಂಟೆಗೆ (IST) ವೀಡಿಯೋ ಕಾನ್ಫರೆನ್ಸ್ (VC)/ಇತರ ಆಡಿಯೋ-ವಿಷುಯಲ್ ಮೀನ್ಸ್ (OAVM) ಮೂಲಕ ನಡೆಸಲಾಗುವುದು. 46ನೇ AGM ಬಗ್ಗೆ ಈಗಾಗಲೇ ಕಂಪನಿ ಸದಸ್ಯರಿಗೆ ಇಮೇಲ್ ಮೂಲಕ ಆಗಸ್ಟ್ 22, 2022 ರಂದು ಸೂಚನೆಯನ್ನು ಕಳುಹಿಸಲಾಗಿದೆ.

AGM ಸೂಚನೆಯನ್ನು ನೀಡಿದ ನಂತರ ಉಕ್ಕಿನ ಸಚಿವಾಲಯ ದಿನಾಂಕ 24.08.2022 ರ ತನ್ನ ಆದೇಶ ಸಂ. 5/1/2021-BLA ಮೂಲಕ ಶ್ರೀ ಬಿನಯ್ ಕೃಷ್ಣ ಮಹಾಪಾತ್ರ ಅವರನ್ನು ಅವರ ಕರ್ತವ್ಯ ನಿರ್ವಹಣೆಯ ದಿನಾಂಕ ಅಂದರೆ., 30.08.2022 ರಿಂದ ಅವರ ನಿವೃತ್ತಿಯ ದಿನಾಂಕ ಅಂದರೆ., 31.05.2026 ವರೆಗೆ ಅಥವಾ ಮುಂದಿನ ಆದೇಶ ನೀಡುವವರೆಗೆ, ಯಾವುದು ಮೊದಲಿದೆಯೋ ಅದರ ಪ್ರಕಾರ ಕಂಪನಿಯ ನಿರ್ದೇಶಕರಾಗಿ (ಕಮರ್ಷಿಯಲ್) ನೇಮಿಸಿದೆ. ಇದಕ್ಕನುಸಾರವಾಗಿ ನಾಮಿನೇಷನ್ ಮತ್ತು ರೆಮನರೇಷನ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಕಂಪನಿಯ ನಿರ್ದೇಶಕ ಮಂಡಳಿ ಅವರನ್ನು ಅಡಿಷನಲ್ ಡೈರೆಕ್ಟರ್ ಆಗಿ ಹಾಗೂ ಕಂಪನಿಯ ನಿರ್ದೇಶಕ (ಕಮರ್ಷಿಯಲ್) ಎಂದು, ಕಂಪನಿಯ ಷೇರುಹೋಲ್ಡರುಗಳ ಅನುಮೋದನೆಗೆ ಒಳಪಟ್ಟು ಅನುಮೋದಿಸಿದೆ.

ಅದರಂತೆ SEBI (LODR) ನಿಯಮಗಳು, 2015 ರ ನಿಯಮ 17(1C) ಅನುಸಾರವಾಗಿ ಶ್ರೀ ಬಿನಯ್ ಕೃಷ್ಣ ಮಹಾಪಾತ್ರ ಅವರ ನೇಮಕಾತಿಯ ಪ್ರಸ್ತಾವನೆಯನ್ನು 46ನೇ AGM ನ ಸೂಚನೆಗೆ ಅನುಬಂಧದ ಐಟಂ ಸಂಖ್ಯೆ 7ರಲ್ಲಿ ನಿಗದಿಪಡಿಸಿದಂತೆ ವಿಶೇಷ ವ್ಯವಹಾರದ ಹೆಚ್ಚುವರಿ ಕಾರ್ಯಸೂಚಿಯಾಗಿ ಇರಿಸಲಾಗಿದೆ. ಕಂಪನಿಯು 03/09/2022 ರಂದು 46ನೇ AGM ನ ಸೂಚನೆಗೆ ಅನುಬಂಧವನ್ನು ಕಂಪನಿ /ಆರ್‌ಟಿಎ /ಡಿಪಾಸಿಟರಿ ಭಾಗಿಗಳೊಂದಿಗೆ ಆಗಸ್ಟ್ 12, 2022 ರಂತೆ ನೋಂದಾಯಿಸಿದ ಸದಸ್ಯರಿಗೆ, ಅಂದರೆ ಖಚಿತಪಡಿಸಿರುವ ಸದಸ್ಯರ ಇಮೇಲ್‌ಗಳಿಗೆ ಕಳುಹಿಸಲಾಗಿದೆ. ಈ ಸೂಚನೆಯ ಅನುಬಂಧವು ಕಂಪನಿಯ ವೆಬ್‌ಸೈಟ್ https://kioclltd.in ನಲ್ಲಿ ಹಾಗೂ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ಸ್ ಆಗಿರುವ BSE, NSE ಮತ್ತು MSEI www.bseindia.com, www.nseindia.com ಮತ್ತು www.msei.in ಅನುಕ್ರಮವಾಗಿ ಲಭ್ಯವಿದೆ. ಹಾಗೂ CDSL ನ ವೆಬ್‌ಸೈಟ್ www.evotingindia.com ರಲ್ಲೂ ಲಭ್ಯವಿದೆ.

ಈ ಮೂಲಕ ಸದಸ್ಯರು 46ನೇ AGMನ ಸೂಚನೆಯಲ್ಲಿ ಐಟಂ ಸಂ.7 ಅನ್ನು ಸದರಿ ಸೂಚನೆಗೆ ಅನುಬಂಧದ ಮೂಲಕ ಸೇರ್ಪಡೆ ಮಾಡಿರುವುದನ್ನು ಗಮನಿಸಿ ಮತ್ತು ರಿಮೋಟ್ ಇ-ವೋಟಿಂಗ್ ಸೌಲಭ್ಯ ಅಥವಾ 46ನೇ AGM ನ ಸಮಯದಲ್ಲಿ ಲಭ್ಯವಿರುವ ಇ-ವೋಟಿಂಗ್ ಸೌಲಭ್ಯದ ಮೂಲಕ ತಮ್ಮ ಮತವನ್ನು ಚಲಾಯಿಸಲು ವಿನಂತಿಸಲಾಗಿದೆ.

ರಿಮೋಟ್ ಇ-ವೋಟಿಂಗ್‌ಗೆ ಸಂಬಂಧಿಸಿದ ಎಲ್ಲಾ ಇತರ ಟಿಪ್ಪಣಿಗಳು, ಪ್ರಕ್ರಿಯೆಗಳು ಮತ್ತು ಸೂಚನೆಗಳು, AGMನಲ್ಲಿ ಇ-ವೋಟಿಂಗ್ ಮತ್ತು 46ನೇ AGMನ ಸೂಚನೆಯಲ್ಲಿ ನಿಗದಿಪಡಿಸಿದಂತೆ VC ಮೂಲಕ AGMಗೆ ಹಾಜರಾಗುವುದು ಸೂಚನೆಗೆ ಅನುಬಂಧದಲ್ಲಿ ಪ್ರಸ್ತಾಪಿಸಲಾದ ಬದಲಾವಣೆಗಳು ಅನ್ವಯವಾಗುತ್ತವೆ.

ಧನ್ಯವಾದಗಳೊಂದಿಗೆ,
KIOCL ಲಿಮಿಟೆಡ್
(ಪಿ.ಕೆ.ಮಿಶ್ರಾ)
ಕಂಪನಿ ಸೆಕ್ರೆಟರಿ

ಸ್ಥಳ : ಬೆಂಗಳೂರು
ದಿನಾಂಕ : 05.09.2022

ESTD : 1920
MCBL LTD 100 Year Bank
ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿ.,
#102, 7ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003 Email: mcb_mall@yahoo.com

102ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಸೂಚನಾ ಪತ್ರ

ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ನಂ.102, 7ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ಇದರ 102ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ದಿನಾಂಕ 11-09-2022ರ ಭಾನುವಾರ ಬೆಳಗ್ಗೆ 10 ಗಂಟೆಗೆ ಸರಿಯಾಗಿ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, 4ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ರಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಬಿ. ರಮೇಶ್‌ರವರ ಅಧ್ಯಕ್ಷತೆಯಲ್ಲಿ ಜರುಗಲಿದೆ.

ಈ ಮಹಾಸಭೆಗೆ ಸದಸ್ಯರ ಗುರುತಿನ ಚೀಟಿಯೊಂದಿಗೆ ನಿಯತ ಸದಸ್ಯರೆಲ್ಲರೂ ಸಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ. ಸೂಚನಾ ಪತ್ರ ತಲುಪದಿದ್ದಲ್ಲಿ ಇದನ್ನೇ ಮಹಾಸಭೆಯ ಆಹ್ವಾನವೆಂದು ತಿಳಿಯಬೇಕಾಗಿ ವಿನಂತಿ.

ದಿನಾಂಕ: 25-08-2022
ಸ್ಥಳ: ಬೆಂಗಳೂರು

ಕಾರ್ಯನಿರ್ವಾಹಕ ಮಂಡಳಿಯ ಅಪ್ಪಣೆಯ ಮೇರೆಗೆ
ಎಂ. ಶೋಭ
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ವಿ.ಸೂ : ಸದಸ್ಯರು ಕೋವಿಡ್ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕಾಗಿ ವಿನಂತಿ.

ಮಳೆ, ಚಳಿಗೆ ಜಗ್ಗದೇ ನಿತ್ಯ ಸಕಾಲಕ್ಕೆ ದಿನಪತ್ರಿಕೆ ತಲುಪಿಸುವ ಶ್ರಮಿಕರು • ಕೇಕ್ ಕತ್ತರಿಸಿ ಆಚರಣೆ, ಸಂಭ್ರಮ

ಪತ್ರಿಕಾ ವಿತರಕರ ಸೇವೆ ಮೆಲುಕು, ಶ್ಲಾಘನೆ

ಪ್ರಜಾವಾಣಿ ವಾರ್ತೆ

ಬಸವನಗುಡಿ ದಿನಪತ್ರಿಕೆ ವಿತರಕರ ಸಂಘವು ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿದ ಎಎಪಿ ಮುಖಂಡ ಭಾಸ್ಕರ್ ರಾವ್ ಅವರನ್ನು ಸನ್ಮಾನಿಸಲಾಯಿತು

ಯಡಿಯೂರು ದಿನಪತ್ರಿಕೆ ವಿತರಕರ ಸಂಘದಿಂದ ನಡೆದ ವಿಶ್ವ ದಿನಪತ್ರಿಕೆ ವಿತರಕರ ದಿನಾಚರಣೆಯಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು

ಬೆಂಗಳೂರು: ನಗರದಲ್ಲಿ ಭಾನುವಾರ ವಿಶ್ವ ದಿನಪತ್ರಿಕಾ ವಿತರಕರ ದಿನಾಚರಣೆಯು ಸಂಭ್ರಮದಿಂದ ನಡೆಯಿತು. ಮುಂಜಾನೆಯ ಶ್ರಮಜೀವಿಗಳಿಗೆ ಗಣ್ಯರು ಶುಭಾಶಯ ಕೋರಿ ಸಿಹಿ ಹಂಚಿದರು.

ಮಳೆ, ಗಾಳಿ, ಚಳಿ ಎನ್ನದೇ ಬೆಳಿಗ್ಗೆಯೇ ಮನೆಮನೆಗೂ ದಿನಪತ್ರಿಕೆ ವಿತರಿಸುವ ಕಾಯಕ ಜೀವಿಗಳು. ದಿನಪತ್ರಿಕೆ ಮನೆಗೆ ತಲುಪುವುದು ಸ್ವಲ್ಪ ತಡವಾದರೆ ಚಡಪಡಿಸುವ ಓದುಗರಿದ್ದಾರೆ. ಸಕಾಲಕ್ಕೆ ದಿನ ಪತ್ರಿಕೆಗಳನ್ನು ಮನೆ ಬಾಗಿಲಿಗೆ ತಲುಪಿಸಿ ಓದುಗರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ.

ಕೋವಿಡ್ ಸಾಂಕ್ರಾಮಿಕ ರೋಗದ ಭೀತಿ, ಲಾಕ್‌ಡೌನ್‌ನಲ್ಲಿ ಪತ್ರಿಕಾ ವಿತರಕರ ಕಾರ್ಯವನ್ನು ನಗರದ ವಿವಿಧೆಡೆ ನಡೆದ ವಿತರಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮೆಲುಕು ಹಾಕಲಾಯಿತು.

ಯಡಿಯೂರು ದಿನಪತ್ರಿಕೆ ವಿತರಕರ ಸಂಘದಿಂದ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಬಸವನಗುಡಿ ದಿನಪತ್ರಿಕೆ ವಿತರಕರ ಸಂಘದಿಂದ ನಡೆದ ಕಾರ್ಯಕ್ರಮದಲ್ಲಿ ಎಎಪಿ ಮುಖಂಡ ಭಾಸ್ಕರ್ ರಾವ್ ಕೇಕ್ ಕತ್ತರಿಸುವ ಮೂಲಕ ಎಲ್ಲ ವಿತರಕರಿಗೂ ಶುಭ ಹಾರೈಸಿದರು.

ಕೊರೆಯುವ ಚಳಿಯಿರಲಿ, ಸುರಿಯುವ ಮಳೆ ಇರಲಿ, ಮನೆಯಲ್ಲಿ ಕಹಿ-ಸಿಹಿ ಘಟನೆ ಇರಲಿ, ಇವರ ಕಾಯಕ ಮಾತ್ರ ನಿರಂತರ. ನಸುಕಿನಲ್ಲಿ ಎದ್ದು, ಪತ್ರಿಕೆ ವಿತರಿಸುವ ಮೂಲಕ ಪ್ರಚಲಿತ ಘಟನೆಗಳನ್ನು ಜನರಿಗೆ ತಲುಪಿಸುವ ಕಾರ್ಯದಲ್ಲಿ ತೊಡಗಿರುವ ವಿತರಕರ ಭವಿಷ್ಯ ಸುಧಾರಣೆಯಾಗಲಿ ಎಂದು ಆಶಿಸಿದರು.

ಪತ್ರಿಕೆಗಳ ಬೆನ್ನೆಲುಬಾಗಿರುವ ಪತ್ರಿಕೆ ವಿತರಕರು ಎದುರಿಸುತ್ತಿರುವ ತಾಪತ್ರಯಗಳಿಗೆ ಲೆಕ್ಕವಿಲ್ಲ. ವಿತರಕರ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಸಂಘಟಿತರಾಗಿ, ತಮ್ಮ ಹಕ್ಕುಗಳಿಗೆ ಹೋರಾಟ ರೂಪಿಸಬೇಕು ಎಂದರು.

ಬೇಡಿಕೆ ಈಡೇರಿಕೆಗೆ ಆಗ್ರಹ: ಪತ್ರಿಕಾ ವಿತರಕರಿಗೂ ವಿಮಾ ಸೌಲಭ್ಯ ಕಲ್ಪಿಸಬೇಕು, ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಬೇಕು, ಕೆಲಸದ ವೇಳೆಯಲ್ಲಿ ಮೃತಪಟ್ಟರೆ ಕುಟುಂಬಕ್ಕೆ ₹10 ಲಕ್ಷ ಪರಿಹಾರ ನೀಡಬೇಕು, ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ನೀಡಬೇಕು. ವೈದ್ಯಕೀಯ ಚಿಕಿತ್ಸೆ ಮತ್ತು ಅಪಘಾತದ ಪರಿಹಾರ ಮತ್ತು ಪ್ರಮುಖ ಕಾಯಿಲೆಗಳಿಗೆ ಚಿಕಿತ್ಸೆಗಾಗಿ ಸರ್ಕಾರದಿಂದ ಪರಿಹಾರ ಕಂಡುಕೊಳ್ಳಲು ಸಹಾಯ ನೀಡಬೇಕು ಮತ್ತು ಪತ್ರಿಕೆ ಹಂಚುವ ವಿತರಕರಿಗೆ ಎಲೆಕ್ಟ್ರಿಕ್ ಬೈಕ್ ಖರೀದಿಸಲು ಸಬ್ಸಿಡಿ ರೂಪದಲ್ಲಿ ಸಹಾಯಧನ ನೀಡಬೇಕು ಹಾಗೂ ಶೂನ್ಯ ಬಡ್ಡಿ ದರದಲ್ಲಿ ವಾಹನ ಖರೀದಿಸಲು ಸಹಾಯಧನ ನೀಡಬೇಕು ಎಂದು ಪತ್ರಿಕಾ ವಿತರಕರು ಆಗ್ರಹಿಸಿದರು.

ಸರ್ಕಾರ ನೆರವಿಗೆ ಬರಲಿ

ವೃತ್ತಿ ಉತ್ತಮವಾಗಿದೆ. 32 ವರ್ಷದಿಂದ ಇದೇ ವೃತ್ತಿಯನ್ನೇ ನಂಬಿದ್ದೇನೆ. ಸರ್ಕಾರವು ಪತ್ರಿಕಾ ವಿತರಕರಿಗೆ ನೆರವು ನೀಡಬೇಕು. ವಿತರಕರಿಗೆ ವಿಮೆಯಂತಹ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಬೇಕು.

ಡಿ.ಎಸ್.ವೆಂಕಟೇಶ್, ವಿತರಕ ಹೊಸಹಳ್ಳಿ

22 ವರ್ಷದಿಂದ ಪತ್ರಿಕೆ ವಿತರಣೆ ಮಾಡುತ್ತಿದ್ದೇನೆ. ಓದುಗರ ಸ್ಪಂದನ ಉತ್ತಮವಾಗಿದೆ. ವೃತ್ತಿಯಲ್ಲಿ ಲಾಭವಿದ್ದರೂ ಪತ್ರಿಕೆ ಹಂಚಲು ಹುಡುಗರು ಆಸಕ್ತಿ ತೋರುತ್ತಿಲ್ಲ. ಕಂಪನಿಯಿಂದ ವೃತ್ತಿ ಪ್ರೋತ್ಸಾಹ ಸಿಗುತ್ತಿದೆ

ನಾಗರಾಜ್, ತಲಘಟ್ಟಪುರ

40 ವರ್ಷದಿಂದ ಪತ್ರಿಕೆ ವಿತರಿಸುತ್ತಿದ್ದೇನೆ. ಆರಂಭದಲ್ಲಿ ಮತ್ತೊಬ್ಬರ ಜತೆಗೂಡಿ ಕೆಲಸ ಮಾಡುತ್ತಿದ್ದೆ. ಈಗ ನಾನೇ ಏಜೆನ್ಸಿ ಪಡೆದಿರುವೆ. ಎಂಟು ಹುಡುಗರು ಮನೆಮನೆಗೆ ಪತ್ರಿಕೆ ವಿತರಿಸುತ್ತಿದ್ದಾರೆ. ಓದುಗರಿಂದಲೂ ಪ್ರೋತ್ಸಾಹ ಸಿಗುತ್ತಿದೆ.

ರಂಗನಾಥ್, ಜಯನಗರ

36 ವರ್ಷದಿಂದ ಪತ್ರಿಕಾ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ಓದುಗರು ಸಕಾಲಕ್ಕೆ ಪತ್ರಿಕೆಯ ಹಣವನ್ನು ಪಾವತಿಸಿ ಪ್ರೋತ್ಸಾಹಿಸಬೇಕಿದೆ. ಈ ವೃತ್ತಿಯಿಂದಲೇ ನನಗೆ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ

ರವೀಂದ್ರ ನಾಯಕ್, ಟಿ.ದಾಸರಹಳ್ಳಿ ಪತ್ರಿಕಾ ವಿತರಕ

ಸಂರಕ್ಷಿತ ಪ್ರದೇಶವಾಗಿ ‘ಹೆಸರಘಟ್ಟ ಹುಲ್ಲುಗಾವಲು’: ಘೋಷಣೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವನ್ಯಜೀವಿ ಮಂಡಳಿಯು ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ‘ಸಂರಕ್ಷಿತ ಪ್ರದೇಶ’ವಾಗಿ ಘೋಷಿಸಲು ಪ್ರಯತ್ನಿಸುತ್ತಿದೆ ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪಟ್ಟಭದ್ರ ಹಿತಾಸಕ್ತಿ ಒತ್ತಡಕ್ಕೆ ಮಣಿದು ಈ ಹಿಂದೆ ತೆಗೆದುಕೊಂಡಿದ್ದ ತೀರ್ಮಾನ ರದ್ದು ಮಾಡಿ ಹುಲ್ಲುಗಾವಲಿಗೆ ಹೊಂದಿಕೊಂಡಂತಿರುವ ಜಾಗವನ್ನು ಸಂರಕ್ಷಿತ ಪ್ರದೇಶವನ್ನಾಗಿ ಘೋಷಣೆ ಮಾಡುವ ತರಾತುರಿ ತೋರುತ್ತಿದ್ದಾರೆ ಎಂದು ದೂರಿದ್ದಾರೆ.

ಹೆಸರಘಟ್ಟ, ಶಿವಕೋಟೆ, ಹುರಳಿಚಿಕ್ಕನಹಳ್ಳಿ, ಅರಕೆರೆ ಮತ್ತು ಸೊಣ್ಣೇನಹಳ್ಳಿ ಪಂಚಾಯಿತಿ ವ್ಯಾಪ್ತಿಯ 45ಕ್ಕೂ ಹೆಚ್ಚು ಗ್ರಾಮಗಳ ಜನತೆ ತಲತಲಾಂತರದಿಂದಲೂ ಈ ಪ್ರದೇಶದೊಂದಿಗೆ ಒಡನಾಟ ಇಟ್ಟುಕೊಂಡಿದ್ದಾರೆ. ಈ ಪ್ರದೇಶವನ್ನು ಒತ್ತುವರಿದಾರರ ಕೈಗೆ ಸಿಗದಂತೆ ಕಾಪಾಡಿಕೊಂಡು ಬಂದಿದ್ದಾರೆ. ಆದರೆ, ಇದೀಗ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಈ ಪ್ರದೇಶವನ್ನು ಸಂರಕ್ಷಿತ ಪ್ರದೇಶವನ್ನಾಗಿ ಮಾಡಲು ಮುಂದಾಗಿರುವ ಪ್ರಯತ್ನದ ಹಿಂದೆ ಕಾಣದ ಕೈಗಳು ಕೆಲಸ ಮಾಡುತ್ತಿರುವಂತೆ ಕಾಣುತ್ತಿದೆ ಎಂದು ದೂರಿದ್ದಾರೆ.

ಹೋರಾಟದ ಹೆಸರಿನಲ್ಲಿ ಈ ಕಾನೂನು ಬಾಹಿರ ನಿರ್ಣಯ ತೆಗೆದುಕೊಳ್ಳುವಂತೆ ಮಾಡಲು ಪ್ರಯತ್ನ ಮಾಡುತ್ತಿರುವವರಿಗೆ ಸಂಸದ ತೇಜಸ್ವಿ ಸೂರ್ಯ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ತೇಜಸ್ವಿ ಸೂರ್ಯ ಅವರು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಪ್ರತಿನಿಧಿ. ಅವರಿಗೆ ಹೆಸರಘಟ್ಟ ಹುಲ್ಲುಗಾವಲು ಮತ್ತು ಅದಕ್ಕೆ ಹೊಂದಿಕೊಂಡಿರುವ 45ಕ್ಕೂ ಹೆಚ್ಚು ಗ್ರಾಮಗಳ ಲಕ್ಷಾಂತರ ಕುಟುಂಬಗಳ ನಾಡಿಮಿಡಿತದ ಬಗ್ಗೆ ಅರಿವಿಲ್ಲದಂತೆ ಕಾಣುತ್ತದೆ. ಅವರು ಸ್ಥಳೀಯ ವಾಸ್ತವಾಂಶ ಅರಿತು ನಿರ್ಧಾರ ಪ್ರಕಟಿಸಬೇಕು. ಯಾರೋ ಟ್ವೀಟ್ ಮಾಡಿದ ಕೂಡಲೇ ಬೆಂಬಲಿಸುವುದು ಸೂಕ್ತವಲ್ಲ ಎಂದು ಹೇಳಿದ್ದಾರೆ.

‘ಸಚಿವರಿಂದ ಕ್ರೀಡಾ ಸ್ಫೂರ್ತಿಗೆ ತಿಲಾಂಜಲಿ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಸಚಿವ ಆನಂದ್ ಸಿಂಗ್ ಅವರು ನಗರದ ಜಿಲ್ಲಾ ಕ್ರೀಡಾಂಗಣವನ್ನು ಅಭಿವೃದ್ಧಿ ಹೆಸರಿನಲ್ಲಿ ಕ್ರೀಡೆಗಳಿಗೆ ಆಸ್ಪದ ಇಲ್ಲದಂತೆ ಮಾಡಿ, ಕ್ರೀಡಾ ಸ್ಫೂರ್ತಿಗೆ ತಿಲಾಂಜಲಿ ಹಾಡುತ್ತಿದ್ದಾರೆ’ ಎಂದು ವಿಜಯನಗರ ಬ್ಯಾಸ್ಕೆಟ್‌ಬಾಲ್ ಕ್ಲಬ್ ಅಧ್ಯಕ್ಷ ವಿಷ್ಣುವರ್ಧನ್ ಆರೋಪಿಸಿದರು.

’ನಗರದ ಮೈದಾನಕ್ಕೆ ಇತಿಹಾಸ, ಪರಂಪರೆ ಇದೆ. ದಿವಂಗತ ನಟ ಪುನೀತ್ ರಾಜಕುಮಾರ ಹೆಸರು ಹೇಳಿಕೊಂಡು, ಧ್ವಜಸ್ತಂಭ ನಿರ್ಮಿಸುವುದಾಗಿ ಹೇಳಿ, ಸಚಿವರು ಜನರೊಂದಿಗೆ ಭಾವನಾತ್ಮಕ ತಂತ್ರಗಾರಿಕೆಯ ಆಟವಾಡುತ್ತಿದ್ದಾರೆ. ದೇಶದ ಪ್ರಧಾನಿ ಯುವ ಜನತೆಗೆ ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಿ ದೇಶದ ಕೀರ್ತಿ ಹೆಚ್ಚಿಸಲು ಹೇಳುತ್ತಿದ್ದಾರೆ. ಆದರೆ, ಸಚಿವರು ಯುವ ಜನಾಂಗವನ್ನು ಭಾವನಾತ್ಮಕವಾಗಿ ಹಾಳು ಮಾಡುತ್ತಿದ್ದಾರೆ’ ಎಂದು ಭಾನುವಾರ ನಗರದಲ್ಲಿ ಆರೋಪ ಮಾಡಿದರು.

ಕ್ರೀಡಾಂಗಣದಲ್ಲಿ ಮೂರು ದಶಕಗಳಿಂದ ದಕ್ಷಿಣ ಏಷಿಯಾ ಮಟ್ಟದ ಬ್ಯಾಸ್ಕೆಟ್‌ಬಾಲ್ ಕ್ರೀಡೆಗೆ ಪ್ರೋತ್ಸಾಹಿಸುತ್ತ ಬಂದಿರುವ ವಿಜಯನಗರ ಬ್ಯಾಸ್ಕೆಟ್‌ಬಾಲ್ ಕ್ಲಬ್ ಸ್ವಂತ ಆಸ್ತಿ ಅಲ್ಲವಾದರೂ ಲಕ್ಷಾಂತರ ಹಣ ಖರ್ಚು ಮಾಡಿ, ಅನೇಕರಿಗೆ ವೇದಿಕೆ ಒದಗಿಸಿದೆ. ಸಂಘದವರೊಂದಿಗೆ ಚರ್ಚಿಸದೆಯೇ ಜೆ.ಸಿ.ಬಿ.ಯಿಂದ ಹಾಳು ಮಾಡಲಾಯಿತು. ಅಭಿವೃದ್ಧಿಗೆ ಮಾರಕವಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ನೀರಿನ ಬಾಟಲ್ ವಿತರಣೆ

ರಾಜರಾಜೇಶ್ವರಿ ನಗರ: ಲಗ್ಗೆರೆ ವಾರ್ಡ್ ವ್ಯಾಪ್ತಿಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳ 8,500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಜಾ ಸೇವಾ ಟ್ರಸ್ಟ್ ವತಿಯಿಂದ ಉಚಿತ ಕುಡಿಯುವ ನೀರಿನ ಬಾಟಲ್, ನೋಟ್ ಬುಕ್ ವಿತರಿಸಲಾಯಿತು.

ಟ್ರಸ್ಟ್ ಸಂಸ್ಥಾಪಕ ಆರ್.ರಮೇಶ್ ಗೌಡ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಕಾಲೇಜು ಪ್ರವೇಶ ಪಡೆಯಲು ತಲಾ ₹ 5 ಸಾವಿರ ಪ್ರೋತ್ಸಾಹಧನ ನೀಡಲಾಗಿದ್ದು, ಮುಂದಿನ ವರ್ಷದಿಂದ ಶೇ 90 ಮೇಲ್ಪಟ್ಟ ಅಂಕಪಡೆದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ಅಗತ್ಯವಿರುವ ಶಾಲಾ ಕಾಲೇಜುಗಳ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗುವುದು ಎಂದರು.

ಲಗ್ಗೆರೆ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಹನುಮೇಗೌಡ, ಕಾರ್ಮಿಕ ಘಟಕದ ಅಧ್ಯಕ್ಷ ಶಶಿಕುಮಾರ್, ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯ ಚಾಂದ್ ಪಾಷಾ, ಪ್ರಜಾ ಸೇವಾ ಟ್ರಸ್ಟ್ ಅಧ್ಯಕ್ಷ ಯೋಗೇಶ್, ಮುಖಂಡ ಮಂಜುನಾಥ್ ಹಾಜರಿದ್ದರು.



ಸೋಮವಾರ • ಸೆಪ್ಟೆಂಬರ್ 5, 2022 ಪ್ರಜಾವಾಣಿ

ಕೋಣನಕುಂಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೊಲೆ ಪ್ರಕರಣ • ಗಾಯ ನೀಡಿದ ಸುಳಿವು

ಪತಿ ಕೊಂದು ನಾಟಕ: ಮಂಡ್ಯದಲ್ಲಿ ಸಿಕ್ಕಿಬಿದ್ದ ಪತ್ನಿ

ಪ್ರಜಾವಾಣಿ ವಾರ್ತೆ

ಮಹೇಶ್

ಶಿಲ್ಪಾ

ಕೆಂಪದೇವಮ್ಮ

ಬೆಂಗಳೂರು: ಕೋಣನಕುಂಟೆ ಠಾಣೆ ವ್ಯಾಪ್ತಿಯಲ್ಲಿ ಮಹೇಶ್ (33) ಎಂಬುವರನ್ನು ಕೊಲೆ ಮಾಡಲಾಗಿದ್ದು, ಆರೋಪಿ ಎನ್ನಲಾದ ಪತ್ನಿ ಶಿಲ್ಪಾ (26) ಅವರನ್ನು ಮಂಡ್ಯದಲ್ಲಿ ಪೊಲೀಸರು ಬಂಧಿಸಿದ್ದಾರೆ.

'ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಪೂರಿಗಾಲಿಯ ಮಹೇಶ್, ಬೆಂಗಳೂರಿನ ಕೊಕೊನಟ್ ಗಾರ್ಡನ್‌ನಲ್ಲಿ ವಾಸವಿದ್ದರು. ಅವರನ್ನು ಸೆ. 1ರಂದು ಕೊಲೆ ಮಾಡಿದ್ದ ಶಿಲ್ಪಾ, ಅಸಹಜ ಸಾವೆಂದು ಹೇಳಿ ನಾಟಕವಾಡಿದ್ದಳು. ಮಹೇಶ್ ಅವರ ಸಹೋದರ ನೀಡಿದ್ದ ದೂರು ಆಧರಿಸಿ, ಶಿಲ್ಪಾ ಹಾಗೂ ಕೃತ್ಯಕ್ಕೆ ಸಹಾಯ ಮಾಡಿದ್ದ ಆರೋಪಿ ಕೆಂಪದೇವಮ್ಮ ಎಂಬುವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಎಂಟು ವರ್ಷದ ಹಿಂದೆ ಮದುವೆ: 'ಕೃಷಿಕ ಕುಟುಂಬದ ಮಹೇಶ್, ಶಿಲ್ಪಾ ಅವರನ್ನು ಎಂಟು ವರ್ಷದ ಹಿಂದೆ ಮದುವೆಯಾಗಿದ್ದರು. ದಂಪತಿಗೆ 6 ವರ್ಷದ ಗಂಡು ಮಗುವಿದೆ. ಶಿಲ್ಪಾ ಅವರ ತಂದೆ-ತಾಯಿ ಬೆಂಗಳೂರಿನ ಗೌಡನಪಾಳ್ಯದಲ್ಲಿ ನೆಲೆಸಿದ್ದರು. ಮಹೇಶ್-ಶಿಲ್ಪಾ ಸಹ ಮೂರು ತಿಂಗಳ ಹಿಂದೆ ಯಷ್ಟೇ ಬೆಂಗಳೂರಿಗೆ ಬಂದು ಕೊಕೊನಟ್ ಗಾರ್ಡನ್ ಪ್ರದೇಶ ದಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ದಂಪತಿ ಒಟ್ಟಿಗೆ ಕೆಲಸಕ್ಕೆ ಸೇರಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ

'ಮದ್ಯವ್ಯಸನಿ ಆಗಿದ್ದ ಮಹೇಶ್, ನಿತ್ಯವೂ ಕುಡಿದು ಬಂದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದನೆಂದು ಗೊತ್ತಾಗಿದೆ. ಶೀಲ ಶಂಕಿಸಿ ಪತ್ನಿ ಮೇಲೆ ಹಲ್ಲೆ ಮಾಡುತ್ತಿದ್ದ. ಇದರಿಂದ ಬೇಸತ್ತ ಶಿಲ್ಪಾ, ಪತಿಯನ್ನೇ ಕೊಲೆ ಮಾಡಲು ಸಂಚು ರೂಪಿಸಿದ್ದರೆಂದು ಹೇಳಲಾಗಿದೆ' ಎಂದೂ ತಿಳಿಸಿವೆ.

ಹಲ್ಲೆ ಮಾಡಿ ಕೊಲೆ: 'ಸೆ. 1ರಂದು ಮಹೇಶ್ ಮದ್ಯ ಕುಡಿದು ಮನೆಗೆ ಬಂದಿದ್ದರು. ಅವರಿಗೆ ಶಿಲ್ಪಾ, ಕೆಂಪದೇವಮ್ಮ ಹಾಗೂ ಇತರರು ತೀವ್ರವಾಗಿ ಹೊಡೆದಿದ್ದರು. ತೀವ್ರ ಗಾಯದಿಂದ ಮಹೇಶ್ ಮೃತಪಟ್ಟಿದ್ದರೆಂಬ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಂಡ್ಯದಲ್ಲಿರುವ ಮಹೇಶ್ ಸಂಬಂಧಿಕರಿಗೆ ಕರೆ ಮಾಡಿದ್ದ ಶಿಲ್ಪಾ, ಬೆಂಗಳೂರಿನಲ್ಲಿ ವಿಪರೀತ ಮಳೆ. ಮದ್ಯ ಕುಡಿದು ಬರುವಾಗ ಪತಿ, ನೀರಿನಲ್ಲಿ ನೆನೆದಿದ್ದಾರೆ. ಅನಾರೋಗ್ಯ ಸಮಸ್ಯೆ ಉಂಟಾಗಿ, ಮೂರ್ಛೆ ಬಂದು ಬಿದ್ದು ಮೃತಪಟ್ಟಿದ್ದಾರೆ' ಎಂದಿದ್ದರು. ಬಳಿಕ, ಮೃತದೇಹವನ್ನು ಆಂಬುಲೆನ್ಸ್‌ನಲ್ಲಿ ಮಂಡ್ಯಕ್ಕೆ ತೆಗೆದುಕೊಂಡು ಹೋಗಿದ್ದರು' ಎಂದೂ ತಿಳಿಸಿವೆ.

ಗಾಯ ನೀಡಿದ ಕೊಲೆ ಸುಳಿವು: 'ಸೆ. 1ರಂದು ರಾತ್ರಿ ಮೃತದೇಹ ಮಂಡ್ಯ ತಲುಪಿತ್ತು. ಕೊಲೆ ಬಗ್ಗೆ ಯಾರಿಗೂ ಅನುಮಾನ ಬಂದಿರಲಿಲ್ಲ. ಸೆ. 2ರಂದು ಬೆಳಿಗ್ಗೆ ಮೃತದೇಹ ಮೇಲಿನ ಬಟ್ಟೆ ಬಿಚ್ಚಿದ್ದ ಕುಟುಂಬಸ್ಥರಿಗೆ, ಕೈ-ಕಾಲು, ಸೊಂಟ ಹಾಗೂ ಇತರೆ ರಕ್ತ ಹೆಪ್ಪುಗಟ್ಟಿದ ಗಾಯದ ಗುರುತುಗಳು ಕಂಡಿದ್ದವು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕುಟುಂಬಸ್ಥರೇ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿದ್ದ ಪೊಲೀಸರು ಶವವನ್ನು ಆಸ್ಪತ್ರೆಗೆ ಸಾಗಿಸಿದ್ದರು. ಮಾಹಿತಿ ತಿಳಿಯುತ್ತಿದ್ದಂತೆ ಮಂಡ್ಯಕ್ಕೆ ಹೋದ ವಿಶೇಷ ತಂಡ, ಆರೋಪಿ ಶಿಲ್ಪಾ ಅವರನ್ನು ಬಂಧಿಸಿ ಬೆಂಗಳೂರಿಗೆ ಕರೆತಂದಿದೆ. ಶೀಲ ಶಂಕಿಸುತ್ತಿದ್ದ ಪತಿ, ಪದೇ ಪದೇ ಜಗಳ ಮಾಡುತ್ತಿದ್ದ. ದೈಹಿಕ, ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದ. ಇದರಿಂದ ಬೇಸತ್ತು ಕೊಲೆ ಮಾಡಿರುವುದಾಗಿ ಶಿಲ್ಪಾ ಹೇಳುತ್ತಿದ್ದಾರೆ. ಕೊಲೆ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿವೆ.

ಅಪಘಾತ: ಮೆಕ್ಯಾನಿಕ್ ಸಾವು

ಬೆಂಗಳೂರು: ಮೇಡಹಳ್ಳಿ- ಟಿ.ಸಿ.ಪಾಳ್ಯ ರಸ್ತೆಯಲ್ಲಿ ಶನಿವಾರ ರಾತ್ರಿ ಬೈಕ್ ಉರುಳಿ ಸವಾರ, ಹೋಂಡಾ ಕಂಪನಿಯ ನರಸಾಪುರ ಘಟಕದಲ್ಲಿ ಮೆಕ್ಯಾನಿಕ್ ಆಗಿದ್ದ ಎಚ್.ವಿ.ದರ್ಶನ್ ಗೌಡ (28) ಎಂಬುವರು ಮೃತಪಟ್ಟಿದ್ದಾರೆ.

'ಟಿ.ಸಿ.ಪಾಳ್ಯದ ಕಡೆಗೆ ಹಳೇ ಮದ್ರಾಸ್ ರಸ್ತೆಯಲ್ಲಿ ದರ್ಶನ್ ಹೊರಟಿದ್ದರು. ನಿರ್ಲಕ್ಷ್ಯದಿಂದ ವೇಗವಾಗಿ ವಾಹನ ಚಲಾಯಿಸಿದ್ದು, ಭಗಿನಿ ಹೋಟೆಲ್ ಬಳಿ ಅವಘಡ ಸಂಭವಿಸಿ, ಅವರ ತಲೆ, ಮುಖ, ಹೊಟ್ಟೆಗೆ ತೀವ್ರ ಪೆಟ್ಟು ಬಿದ್ದಿತ್ತು' ಕೆ.ಆರ್.ಪುರ ಸಂಚಾರ ಪೊಲೀಸರು ಹೇಳಿದರು.

'ಗಾಯಾಳುವನ್ನು ಸ್ಥಳೀಯರೇ ಕೆ.ಆರ್.ಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಅವರು ಮಾರ್ಗಮಧ್ಯೆಯೇ ಮೃತಪಟ್ಟಿರುದ್ದಾರೆ ಎಂದು ವೈದ್ಯರು ತಿಳಿಸಿದರು. ಸಂಬಂಧಿಕರು ಈ ಕುರಿತು ದೂರು ನೀಡಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಸಂಚಾರ ಪೊಲೀಸರು– ಸಿಎಆರ್ ಇನ್‌ಸ್ಪೆಕ್ಟರ್ ಗಲಾಟೆ: ಪ್ರತ್ಯೇಕ ದೂರು

ಬೆಂಗಳೂರು: ಚಾಮರಾಜಪೇಟೆ 6ನೇ ಮುಖ್ಯರಸ್ತೆಯಲ್ಲಿ ಕರ್ತವ್ಯ ನಿರತ ಸಂಚಾರ ಪೊಲೀಸರು ಹಾಗೂ ಪತ್ನಿ ಜೊತೆ ಕಾರಿನಲ್ಲಿ ಹೊರಟಿದ್ದ ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಇನ್‌ಸ್ಪೆಕ್ಟರ್ ಸಂಜೀವ್ ನಡುವೆ ಗಲಾಟೆ ಆಗಿದ್ದು, ಈ ಬಗ್ಗೆ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

'ಪಾನಮತ್ತರಾಗಿ ಕಾರು ಚಲಾಯಿಸಿ ಅಪಘಾತವನ್ನುಂಟು ಮಾಡಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಇನ್‌ಸ್ಪೆಕ್ಟರ್ ಸಂಜೀವ್ ಹಾಗೂ ಅವರ ಪತ್ನಿ ಉಷಾ ವಿರುದ್ಧ ಪ್ರಕರಣ ದಾಖಲಾಗಿದೆ. ತಮ್ಮ ಮೇಲೆ ಪೊಲೀಸರು ಹಾಗೂ ಇತರರು ಹಲ್ಲೆ ಮಾಡಿರುವುದಾಗಿ ಹೇಳಿ ಉಷಾ ಅವರು ದೂರು ನೀಡಿದ್ದು, ಈ ಬಗ್ಗೆಯೂ ಪ್ರತ್ಯೇಕ ಪ್ರಕರಣ ದಾಖಲಾಗಿದೆ' ಎಂದು ಮೂಲಗಳು ಹೇಳಿವೆ.

ಆಗಿದ್ದೇನು: 'ಶನಿವಾರ ರಾತ್ರಿ 12 ಗಂಟೆ ಸುಮಾರಿಗೆ ಸಂಜೀವ್ ದಂಪತಿ ಕಾರಿನಲ್ಲಿ ಹೊರಟಿದ್ದರು. ಇಬ್ಬರೂ ಪಾನಮತ್ತರಾಗಿದ್ದರೆಂದು ಹೇಳಲಾಗಿದೆ. ಉಷಾ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದರು. ಇವರ ಕಾರು, ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದಿತ್ತು' ಎಂದು ಹೇಳಿವೆ.

'ಸ್ಥಳೀಯರು, ಸಂಜೀವ್ ದಂಪತಿಯನ್ನು ತರಾಟೆಗೆ ತೆಗೆದುಕೊಂಡಿದ್ದರು. ಸಂಚಾರ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಅವರ ವಿರುದ್ಧವೇ ಹರಿಹಾಯ್ದಿದ್ದ ಸಂಜೀವ್, 'ಪ್ರಶ್ನಿಸಲು ವಾರೆಂಟ್ ಇದೆಯಾ' ಎಂದು ಪೊಲೀಸರನ್ನು ಪ್ರಶ್ನಿಸಿದ್ದರು. ಈ ಸಂಬಂಧ ಮಾತಿನ ಚಕಮಕಿ ನಡೆದಿತ್ತು.'

'ಉಷಾ ಅವರನ್ನು ಆಲ್ಕೋಮೀಟರ್ ಮೂಲಕ ಪೊಲೀಸರು ಪರಿಶೀಲಿಸಿದಾಗ, ಮದ್ಯದ ಅಂಶ ಕಂಡುಬಂದಿತ್ತು. ಕಾರು ಜಪ್ತಿ ಮಾಡಿದ ಪೊಲೀಸರು, ನ್ಯಾಯಾಲಯದಲ್ಲಿ ದಂಡ ಪಾವತಿ ಮಾಡುವಂತೆ ಸಂಜೀವ್ ದಂಪತಿಗೆ ನೋಟಿಸ್ ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಒಂದೇ ವರ್ಷದಲ್ಲಿ 117 ಪೊಲೀಸ್ ಠಾಣೆ ನಿರ್ಮಾಣ: ಮುಖ್ಯಮಂತ್ರಿ

ಹುಬ್ಬಳ್ಳಿ: 'ಕರ್ನಾಟಕ ರಾಜ್ಯ ಹುಟ್ಟಿದ ನಂತರ ಇದೇ ಮೊದಲ ಬಾರಿಗೆ ಒಂದೇ ವರ್ಷದಲ್ಲಿ 117 ಪೊಲೀಸ್ ಠಾಣೆ ನಿರ್ಮಿಸಲಾಗಿದೆ. ರಾಜ್ಯದ ಇತಿಹಾಸದಲ್ಲಿಯೇ ಇದು ಮೈಲಿಗಲ್ಲು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿನ ಗೋಕುಲ ರಸ್ತೆ ಹೊಸ ಬಸ್ ನಿಲ್ದಾಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗೋಕುಲ ರಸ್ತೆ, ವಿದ್ಯಾನಗರ, ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಗಳ ಕಟ್ಟಡಗಳ ಶಂಕುಸ್ಥಾಪನೆ ಹಾಗೂ ಕಸಬಾಪೇಟೆ, ದಕ್ಷಿಣ ಸಂಚಾರ ಪೊಲೀಸ್ ಠಾಣೆಗಳ ಕಟ್ಟಡ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

'ಜನಸ್ನೇಹಿ ಪೊಲೀಸ್ ವ್ಯವಸ್ಥೆಗೆ ಸರ್ಕಾರ ಸಾಕಷ್ಟು ಸೌಲಭ್ಯ ಒದಗಿಸುತ್ತಿದೆ. ಅಧಿಕಾರಿಗಳು ನೆಪ ಹೇಳದೆ ಸಕಾರಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು. ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಲು ಯಾರಿಗೂ ಭಯಪಡಬೇಕಿಲ್ಲ' ಎಂದು ಹೇಳಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಮಾತನಾಡಿ, ಪ್ರಸಕ್ತ ವರ್ಷ 5 ಸಾವಿರ ಪೊಲೀಸ್ ಕಾನ್‌ಸ್ಟೆಬಲ್ ಮತ್ತು 900 ಪಿಎಸ್‌ಐಗಳ ನೇಮಕಾತಿಗೆ ಶೀಘ್ರ ಚಾಲನೆ ನೀಡಲಾಗುವುದು' ಎಂದರು.



ಮಹಿಳೆಗೆ ಅಗೌರವ– ಬಿಜೆಪಿಯ ಸಂಸ್ಕೃತಿ: ಡಾ. ಜಿ. ಪರಮೇಶ್ವರ

ಕೋಲಾರ/ಮುಳಬಾಗಿಲು: 'ಅರವಿಂದ ಲಿಂಬಾವಳಿ ಸೇರಿ ಬಿಜೆಪಿಯ ಹಲವು ಮುಖಂಡರು ಮಹಿಳೆಯರ ಕುರಿತು ಗೊಂದಲಕಾರಿ ಹೇಳಿಕೆ ನೀಡಿ ಅವಮಾನಕ್ಕೆ ಒಳಗಾಗಿದ್ದಾರೆ. ಇದು ಬಿಜೆಪಿಯವರ ಸಂಸ್ಕೃತಿ ತೋರಿಸುತ್ತದೆ' ಎಂದು ಶಾಸಕ ಡಾ.ಜಿ.ಪರಮೇಶ್ವರ ವಾಗ್ದಾಳಿ ನಡೆಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಹಿಳೆಯರ ಮೇಲೆ ಬಿಜೆಪಿಯವರಿಗೆ ಎಷ್ಟು ಗೌರವವಿದೆ ಎಂಬುದನ್ನು ಇದು ಸೂಚಿಸಲಿದೆ. ಮಹಿಳೆಯರ ವಿಚಾರದಲ್ಲಿ ಅವರು ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ' ಎಂದರು.

'15 ವರ್ಷಗಳಿಂದ ಕೊರಟಗೆರೆ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದೇನೆ. ಅದಕ್ಕೂ ಮೊದಲು ಮಧುಗಿರಿಯಲ್ಲಿ ಸ್ಪರ್ಧಿಸಿದ್ದೆ. ನಾನೇಕೆ ಮುಳಬಾಗಿಲು ಕ್ಷೇತ್ರಕ್ಕೆ ಬಂದು ಸ್ಪರ್ಧಿಸಲಿ? ಈ ಪ್ರಶ್ನೆ ಏಕೆ ಉದ್ಭವಿಸಿತು' ಎಂದು ಕೇಳಿದರು.

'ಕಾಂಗ್ರೆಸ್ ಪಕ್ಷವು ದಲಿತರನ್ನು ಕಡೆಗಣಿಸಿಲ್ಲ. ನನ್ನನ್ನು ಸೇರಿದಂತೆ ಎಲ್ಲರನ್ನೂ ಸರಿಯಾಗಿಯೇ ನಡೆಸಿಕೊಳ್ಳುತ್ತಿದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸ್ವಾಮೀಜಿ ಮೇಲೆ ದಾಖಲಾಗಿರುವ ಲೈಂಗಿಕ ಕಿರುಕುಳ ಪ್ರಕರಣ ಕುರಿತು 'ನ್ಯಾಯಯುತ ತನಿಖೆ ನಡೆಸಬೇಕು ಎಂದು ಆಗ್ರಹಿಸುತ್ತೇನೆ' ಎಂದರು.

ಬಾರ್ ಮೇಲೆ ದಾಳಿ: 104 ಮಂದಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಯಮಬಾಹಿರವಾಗಿ ನೃತ್ಯ ಹಾಗೂ ಮದ್ಯದ ಪಾರ್ಟಿ ನಡೆಸುತ್ತಿದ್ದ ಆರೋಪದಡಿ ರಾಯಲ್ ಆರ್ಕಿಡ್‌ನ ಜೆಪ್ ಬಾರ್‌ನ ಮೇಲೆ ಸಿಸಿಬಿ ಪೊಲೀಸರು ಶನಿವಾರ ದಾಳಿ ಮಾಡಿದ್ದು, ₹ 1.83 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

'ಜೀವನ್‌ಬಿಮಾನಗರ ಠಾಣೆ ವ್ಯಾಪ್ತಿಯ ಕೋಡಿಹಳ್ಳಿ ಬಳಿಯ ಹೋಟೆಲ್‌ನಲ್ಲಿ ಬಾರ್ ಇದೆ. ಅಬಕಾರಿ, ವಹಿವಾಟು ಪರವಾನಗಿ ನಿಯಮ ಉಲ್ಲಂಘಿಸಿ ಪಾರ್ಟಿ ನಡೆಸಲಾಗುತ್ತಿತ್ತು. ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ದಾಳಿ ಮಾಡಿದರು' ಎಂದು ಸಿಸಿಬಿ ಪೊಲೀಸರು ಹೇಳಿದರು.

'ವ್ಯವಸ್ಥಾಪಕ ಸೇರಿ ಏಳು ಮಂದಿ ಯನ್ನು ಬಂಧಿಸಲಾಗಿದೆ. ಪಾರ್ಟಿಯಲ್ಲಿದ್ದ 30 ಯುವತಿಯರು ಸೇರಿದಂತೆ 104 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದೂ ತಿಳಿಸಿದರು.

ಪಾರ್ಟಿಗೆ ಪ್ರವೇಶ ಶುಲ್ಕ: 'ಬಾರ್‌ನಲ್ಲಿ ಪಾರ್ಟಿ ಆಯೋಜನೆ ಬಗ್ಗೆ ಜಾಹೀರಾತು ನೀಡಲಾಗಿತ್ತು. ಯುವಕ-ಯುವತಿಯರು ಪ್ರವೇಶ ಶುಲ್ಕ ನೀಡಿ ಪಾಲ್ಗೊಂಡಿದ್ದರು. ಆದರೆ, ಪಾರ್ಟಿಗೆ ಯಾವುದೇ ಅನುಮತಿ ಇರಲಿಲ್ಲ' ಎಂದು ಪೊಲೀಸರು ಹೇಳಿದರು.

'ಡಿಜೆ ಸಂಗೀತ ಕಾರ್ಯಕ್ರಮ ನಡೆಸಲಾಗಿತ್ತು. ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಸಹ ಮಾಡಲಾಗುತ್ತಿತ್ತು. ಬಾರ್‌ನ ಮಾಲೀಕ ಹಾಗೂ ಇತರರ ವಿರುದ್ಧ ಜೀವನ್‌ಬಿಮಾನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದೂ ತಿಳಿಸಿದರು.

ಗುಂಪು ಗಲಾಟೆ, 6 ಮಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ನಗರದ ಸಂತೇಮರಹಳ್ಳಿ ವೃತ್ತದ ಬಳಿ ಶನಿವಾರ ರಾತ್ರಿ ವ್ಹೀಲಿಂಗ್ ವಿಚಾರವಾಗಿ ಮುಸ್ಲಿಂ ಹಾಗೂ ನಾಯಕ ಸಮಾಜದ ಗುಂಪುಗಳ ನಡೆದ ಗಲಾಟೆ ಸಂಬಂಧ ಪೊಲೀಸರು ಆರು ಯುವಕರ ವಿರುದ್ಧ ಪ್ರಕರಣ ದಾಖಲಿಸಿ, ಅವರನ್ನು ಭಾನುವಾರ ವಶಕ್ಕೆ ಪಡೆದಿದ್ದಾರೆ.

'ಮಹಮ್ಮದ್ ಅಸ್ಗರ್, ಬಾಬು ಅಶ್ರಫ್, ಅಸ್ಗರ್ ಪಾಷಾ, ಮಹೇಶ್, ಮನೋಜ್ ಮತ್ತು ಸಚಿನ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶನಿವಾರ ರಾತ್ರಿಯ ಘಟನೆಯ ಬಳಿಕ ನಗರದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಪೊಲೀಸರ ಮಧ್ಯಪ್ರವೇಶದಿಂದ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿತ್ತು. ಭಾನುವಾರ ಬೆಳಿಗ್ಗೆ ಸಹಜ ಸ್ಥಿತಿಗೆ ಬಂದಿತ್ತು. ಪಟ್ಟಣ ಪೊಲೀಸ್ ಠಾಣೆಯ ಮುಂದೆ ಜನ ಸಂದಣಿ ಇತ್ತು.

ಪ್ರಕರಣ ಸಂಬಂಧ ಪ್ರತಿಕ್ರಿಯಿಸಿದ ಎಸ್ಪಿ ಟಿ.ಪಿ.ಶಿವಕುಮಾರ್, 'ತನಿಖೆ ಮುಂದುವರಿದಿದೆ. ಎರಡೂ ಕಡೆಗಳ ತಲಾ ಮೂವರು ಯುವಕರ ವಿರುದ್ಧ ಶಾಂತಿಗೆ ಭಂಗ ತಂದ ಆರೋಪದಲ್ಲಿ ಪ್ರಕರಣ ದಾಖಲಿಸಿದ್ದೇವೆ. ವಶಕ್ಕೂ ಪಡೆದಿದ್ದೇವೆ. ಸೋಮವಾರ ಜಿಲ್ಲಾಧಿಕಾರಿ ಹಾಗೂ ಮುಖಂಡರೊಂದಿಗೆ ಸಭೆ ನಡೆಸಲು ತೀರ್ಮಾನಿಸಲಾಗಿದೆ' ಎಂದರು.

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ಕಲ್ಕೆರೆ ಕ್ರಾಸ್‌ನಿಂದ ಎನ್‌ಆರ್‌ಐ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯ ದುಸ್ಥಿತಿ

'ರಸ್ತೆ ದುರಸ್ತಿಗೊಳಿಸಿ'

ಕಲ್ಕೆರೆ ಕ್ರಾಸ್‌ನಿಂದ ಎನ್‌ಆರ್‌ಐ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ಈ ರಸ್ತೆ ಡಾಂಬರೀಕರಣ ಕಂಡು ದಶಕಗಳೇ ಕಳೆದಿವೆ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಅಲ್ಲದೇ ರಸ್ತೆಯುದ್ದಕ್ಕೂ ಬಿದ್ದಿರುವ ದೊಡ್ಡ ಗುಂಡಿಗಳು ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಪ್ರತಿನಿತ್ಯ ವಾಹನಗಳು ಈ ರಸ್ತೆಯ ಮೂಲಕ ಸಂಚರಿಸುತ್ತವೆ. ಮಳೆಗಾಲದಲ್ಲಿ ಗುಂಡಿಗಳಲ್ಲಿ ನೀರು ನಿಲ್ಲಲಿದ್ದು, ಸಂಚಾರಕ್ಕೆ ಸಮಸ್ಯೆಯಾಗಿದೆ. ರಸ್ತೆ ದುರಸ್ತಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ದುರಸ್ತಿಗೊಳಿಸಬೇಕು.

ಸುರೇಶ್ ಬಾಬು, ಸ್ಥಳೀಯ ನಿವಾಸಿ

ಬಿನ್ನಿಪೇಟೆಯ ಮುಖ್ಯರಸ್ತೆ

'ರಸ್ತೆ ಸರಿಪಡಿಸಿ'

ಬಿನ್ನಿಪೇಟೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದ್ದು, ಈ ಮಾರ್ಗದಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಇದರಿಂದ ಅಪಘಾತಗಳು ಸಂಭವಿಸುತ್ತಿವೆ. ಐದು ವರ್ಷಗಳಿಂದ ಈ ರಸ್ತೆ ಡಾಂಬರೀಕರಣ ಕಂಡಿಲ್ಲ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನಿರ್ಲಕ್ಷ್ಯದಿಂದ ರಸ್ತೆ ಈ ದುಸ್ಥಿತಿಗೆ ತಲುಪಿದೆ.

ಶ್ರೀನಿವಾಸ್, ಸ್ಥಳೀಯ ನಿವಾಸಿ

ಕಸದ ಕೊಂಪೆಯಾಗುತ್ತಿರುವ ಉದ್ಯಾನ

ಆರ್.ಟಿ.ನಗರದ ಫ್ಲಾರೆನ್ಸ್ ಶಾಲೆ ಎದುರಿನ ಉದ್ಯಾನ ಇತ್ತೀಚೆಗೆ ಕಸದ ಕೊಂಪೆಯಾಗುತ್ತಿದೆ. ಇಲ್ಲಿ ಮಕ್ಕಳಿಗೆ ಆಟವಾಡಲು ಸೌಲಭ್ಯಗಳಿಲ್ಲ. ಮಕ್ಕಳ ಆಟಕ್ಕೆ ಮೀಸಲಿರುವ ಜಾಗದಲ್ಲಿ ಕಸ ಬೆಳೆದಿದೆ. ಮಣ್ಣು, ಇತರೆ ತ್ಯಾಜ್ಯಗಳನ್ನು ಸುರಿಯಲಾಗುತ್ತಿದೆ. ಆಟದ ಸಾಮಗ್ರಿಗಳು ಸಹ ತುಕ್ಕು ಹಿಡಿಯುತ್ತಿವೆ. ಆದರೂ, ಇಲ್ಲಿನ ಸಮಸ್ಯೆಯನ್ನು ಬಗೆಹರಿಸಲು ಸಂಬಂಧಪಟ್ಟವರು ಕ್ರಮಕೈಗೊಳ್ಳುತ್ತಿಲ್ಲ. ಇನ್ನಾದರೂ ಇತ್ತ ಗಮನಿಸಿ ಮಕ್ಕಳಿಗೆ ಸೌಲಭ್ಯಗಳನ್ನು ಕಲ್ಪಿಸಲು ಕೈಗೊಳ್ಳಬೇಕು.

ವಿಜಯ, ಆರ್.ಟಿ.ನಗರ.

ಆರ್.ಟಿ.ನಗರದ ಉದ್ಯಾನದ ಸ್ಥಿತಿ

ಜಕ್ಕೂರು ರಸ್ತೆಯಲ್ಲಿ ಗುಂಡಿ ತೋಡಿರುವುದು

'ರಸ್ತೆ ಗುಂಡಿ ಮುಚ್ಚಿ'

ಬಿಬಿಎಂಪಿ ಯಲಹಂಕ ವಲಯದ ಜಕ್ಕೂರು ಗ್ರಾಮದ ನವ್ಯನಗರ, ಜಕ್ಕೂರು ಜೋಡಿ ರಸ್ತೆಯಲ್ಲಿ ಜಿಯೊ ಕಂಪನಿಯವರು ಬಿಬಿಎಂಪಿಯವರ ಅನುಮತಿ ಪಡೆಯದೇ ಕೇಬಲ್ ಅಳವಡಿಸಲು ಅಗೆದ ರಸ್ತೆಯನ್ನು ಸರಿಪಡಿಸಿಲ್ಲ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆಯಾಗಿದೆ. ಇಲಾಖೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು.

ನವೀನ್ ಗೌಡ, ನವ್ಯನಗರ, ಜಕ್ಕೂರು

'ರಸ್ತೆ ಸರಿಪಡಿಸಿ'

ಮಹದೇವಪುರ ಕ್ಷೇತ್ರದ ದೊಡ್ಡ ನೆಕ್ಕುಂದಿ ಮುಖ್ಯರಸ್ತೆಯಲ್ಲಿ ಗುಂಡಿಗಳಿಂದ ಬಿದ್ದಿವೆ. ಈ ಮಾರ್ಗದಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಬೇಸಿಗೆಯಲ್ಲಿ ವಾಹನಗಳ ಸಂಚಾರದಿಂದ ದೂಳಿನ ಮಜ್ಜನವಾದರೆ, ಮಳೆಗಾಲದಲ್ಲಿ ಗುಂಡಿಯಲ್ಲಿ ನೀರು ನಿಂತು ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಆದಷ್ಟು ಶೀಘ್ರವಾಗಿ ಗುಂಡಿಗಳನ್ನು ಮುಚ್ಚಿಸಿ ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಧರಣಿ ಜೆ, ಸ್ಥಳೀಯರು

ಮಹದೇವಪುರ ಕ್ಷೇತ್ರದ ದೊಡ್ಡ ನೆಕ್ಕುಂದಿ ಮುಖ್ಯ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು


ಕಾಳಿದಾಸ ರಸ್ತೆ ಹಾಗೂ ವಾಣಿಜ್ಯ ತೆರಿಗೆ ಮಂಡಳಿಯ ಪಕ್ಕದಲ್ಲಿ ನೀರು ಪೋಲಾಗುತ್ತಿರುವುದು

'ಪೋಲಾಗುತ್ತಿರುವ ಜೀವಜಲ'

ಗಾಂಧಿನಗರದಲ್ಲಿ ಕಾಳಿದಾಸ ರಸ್ತೆ ಹಾಗೂ ವಾಣಿಜ್ಯ ತೆರಿಗೆ ಮಂಡಳಿ ಕಚೇರಿಯ ಬಳಿ ಕುಡಿಯುವ ನೀರು ಪೋಲಾಗುತ್ತಿದೆ. ಗಾಂಧಿನಗರ ರಸ್ತೆ ಕಡೆಯಿಂದ ಕೆಂಪೇಗೌಡ ರಸ್ತೆಗೆ ನೀರು ಹರಿಯುತ್ತಿದೆ. ಈ ರಸ್ತೆಯು ದಟ್ಟಣೆಯಿಂದ ಕೂಡಿರಲಿದೆ. ಕೊಳವೆ ಒಡೆದು ನೀರು ಪೋಲಾಗುವುದನ್ನು ತಡೆಗಟ್ಟಲು ಸಂಬಂಧಿಸಿದವರು ಅಗತ್ಯ ಕ್ರಮ ಕೈಗೊಳ್ಳಬೇಕು. ಹಲವು ದಿನಗಳಿಂದ ಈ ಸಮಸ್ಯೆ ಇದ್ದರೂ ಯಾರು ಗಮನಹರಿಸಿ, ಸರಿಪಡಿಸುತ್ತಿಲ್ಲ.

ಶಿವಪ್ರಸಾದ, ಸ್ಥಳೀಯ ನಿವಾಸಿ

ಲಿಂಬಾವಳಿ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

'ಅರವಿಂದ ಲಿಂಬಾವಳಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ

ಬೆಂಗಳೂರು: 'ಮಹಿಳೆ ಬಗ್ಗೆ ಅಗೌರವವಾಗಿ ಮಾತನಾಡಿರುವ ಶಾಸಕ ಅರವಿಂದ ಲಿಂಬಾವಳಿ ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು. ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಮಹಿಳಾ ಘಟಕ ಹಾಗೂ ಪ್ರಚಾರ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಅರವಿಂದ ಲಿಂಬಾವಳಿ ಭಾವಚಿತ್ರಕ್ಕೆ ಹೊಡೆದು ಹಾಗೂ ಪ್ರತಿಕೃತಿ ಸುಟ್ಟು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಆನಂದರಾವ್ ವೃತ್ತದ ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತೆಯರನ್ನು ಪೊಲೀಸರು ವಶಕ್ಕೆ ಪಡೆದು, ಸಂಜೆ ಬಿಡುಗಡೆ ಮಾಡಿದರು.

'ನ್ಯಾಯ ಕೇಳಲು ಹೋದ ಮಹಿಳೆ ಜೊತೆ ಲಿಂಬಾವಳಿ ಅನುಚಿತವಾಗಿ ನಡೆದುಕೊಂಡಿದ್ದಾರೆ. ದೂರು ನೀಡಲು ಬಂದಿದ್ದವರನ್ನು ಹೀಯಾಳಿಸಿದ್ದಾರೆ. ಅವಾಚ್ಯವಾಗಿ ನಿಂದಿಸಿ ಅಗೌರವದಿಂದ ನಡೆದುಕೊಂಡಿದ್ದಾರೆ' ಎಂದು ಪ್ರತಿಭಟನಕಾರರು ದೂರಿದರು.

'ಲಿಂಬಾವಳಿ ಅವರು ನೈತಿಕ ಹೊಣೆ ಹೊತ್ತು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಸಾರ್ವಜನಿಕ ಸ್ಥಳದಲ್ಲಿ ಮಹಿಳೆ ಗೌರವಕ್ಕೆ ಧಕ್ಕೆ ತಂದಿರುವ ಆರೋಪದಡಿ ಶಾಸಕರ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದೂ ಪ್ರತಿಭಟನಕಾರರು ಆಗ್ರಹಿಸಿದರು.

ಕಲಹ: 3 ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ರಾಮನಗರ: ಮಾಗಡಿ ತಾಲ್ಲೂಕಿನ ಹೊಸಪಾಳ್ಯ ಗ್ರಾಮದಲ್ಲಿ ಭಾನುವಾರ ತಾಯಿ- ಮಕ್ಕಳು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಾಗಡಿ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಲೋಕೇಶ್ ಅವರ ಪತ್ನಿ ರೂಪಾ (32), ಮಕ್ಕಳಾದ ಹರ್ಷಿತಾ (6), ಸ್ಫೂರ್ತಿ (4) ಮೃತರು. ಕೌಟುಂಬಿಕ ಕಲಹದ ಕಾರಣಕ್ಕೆ ಈ ಘಟನೆ ನಡೆದಿದೆ ಎನ್ನಲಾಗಿದೆ.

ಶನಿವಾರ ತೋಟದ ಮನೆಯಲ್ಲಿ ರೂಪಾ ಮಕ್ಕಳಿಗೆ ವಿಷವುಣಿಸಿ ತಾವೂ ಆತ್ಮಹತ್ಯೆ ಮಾಡಿಕೊಂಡಿದ್ದರು. ಬೆಳಿಗ್ಗೆ ಗ್ರಾಮಸ್ಥರು ಗಮನಿಸಿ ಕುಟುಂಬದವರಿಗೆ ವಿಷಯ ಮುಟ್ಟಿಸಿದರು. ಮಾಗಡಿ ಆಸ್ಪತ್ರೆಯಲ್ಲಿ ಶವಗಳ ಮರಣೋತ್ತರ ಪರೀಕ್ಷೆ ನಡೆಸಿ ಸಂಬಂಧಿಕರಿಗೆ ಒಪ್ಪಿಸಲಾಯಿತು.

ಪ್ರತಿಭಟನೆ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಹಾಲು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಘಟಕದ ಸದಸ್ಯರು ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಮುಂಭಾಗ ಭಾನುವಾರ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

'ಹಸಿರು ಹೊದಿಕೆ ಉಳಿಸಲು ನಾಗರಿಕರ ಪ್ರಯತ್ನ ದೊಡ್ಡದು'

ಪೀಣ್ಯ ದಾಸರಹಳ್ಳಿ: 'ದಿನನಿತ್ಯ ಬೇಕಾಗುವ ತರಕಾರಿ ಮತ್ತು ಹಣ್ಣಿನ ಬೆಳೆಗಳನ್ನು ಯಶಸ್ವಿಯಾಗಿ ಚಿಕ್ಕ ತಾರಸಿತೋಟದಲ್ಲಿ ಬೆಳೆಯುವ ವಿಧಾನ ಮತ್ತು ಅದರ ಮಹತ್ವ ತಿಳಿಸಲಾಗುತ್ತಿದೆ' ಎಂದು ಬೆಂಗಳೂರು ಜಾಲಹಳ್ಳಿ ರೋಟರಿ ಅಧ್ಯಕ್ಷ ಸಿ.ಪ್ರಕಾಶ್ ತಿಳಿಸಿದರು.

ಜಾಲಹಳ್ಳಿಯ ಎಚ್‌ಎಂಟಿ ಮೈದಾನದಲ್ಲಿ ವಿಶ್ವ ಕೈತೋಟ ದಿನದ ಪ್ರಯುಕ್ತ ಗಾರ್ಡನ್ ಸಿಟಿ ಫಾರ್ಮರ್ಸ್ ಮತ್ತು ರೋಟರಿ ಜಾಲಹಳ್ಳಿ ಆಶ್ರಯದಲ್ಲಿ 'ಊಟ ಫ್ರಮ್ ಯುವರ್ ತೋಟ' ಎಂಬ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ತಾರಸಿ ತೋಟಗಳೆಂದರೆ ಕೇವಲ ಹೂವಿನ ಅಥವಾ ಅಲಂಕಾರಿಕ ಗಿಡಗಳನ್ನು ಬೆಳೆಯುವುದಕ್ಕಷ್ಟೇ ಸೀಮಿತವಾಗಬೇಕಿಲ್ಲ. ನಗರದಲ್ಲಿ ಹಸಿರಿನ ಹೊದಿಕೆಯನ್ನು ಉಳಿಸಲು ನಾಗರಿಕರ ಪ್ರಯತ್ನ ಅತಿದೊಡ್ಡದು. ಬಳಕೆಗೆ ತಾಜಾ, ಸುರಕ್ಷಿತ ಮತ್ತು ಪೌಷ್ಟಿಕ ಹಣ್ಣು ಮತ್ತು ತರಕಾರಿಗಳು ಬೆಳೆಯುವ ವಿಧಾನ ತಾರಸಿತೋಟದ ಬಗ್ಗೆ ತರಬೇತಿ ನೀಡಲಾಗುತ್ತದೆ' ಎಂದರು.

ಪರಿಸರವಾದಿ ರಾಮ್ ಪ್ರಸಾದ್ ಮಾತನಾಡಿ 'ರೈತರು ಹೆಚ್ಚು ಇಳುವರಿ ನೀಡುವ ಹೈಬ್ರಿಡ್ ತಳಿಗಳನ್ನು ಬೆಳೆಯುತ್ತಾರೆ. ಆದರೆ, ಈ ಎಲ್ಲಾ ಸುಧಾರಿತ ತಳಿಗಳು ಕೀಟ, ರೋಗಬಾಧೆಗೆ ತುತ್ತಾಗುತ್ತದೆ. ನಾವು ಬಳಸುವ ನೀರು, ಭೂಮಿ, ಗಾಳಿಗಳಲ್ಲಿಯೂ ವಿಷಕಾರಿ ರಾಸಾಯನಿಕಗಳ ಇರುವಿಕೆ ಪತ್ತೆ ಯಾಗಿದೆ. ಇದು ಜೀವಸಂಕುಲದ ಮೇಲೆ ದುಷ್ಪರಿಣಾಮ ಬೀರುತ್ತದೆ. ನಗರವಾಸಿಗಳು ಸಾಧ್ಯವಾದ ಎಲ್ಲಾ ರೀತಿಯ ತರಕಾರಿಗಳ ಮತ್ತು ಇತರ ಬೆಳೆಗಳನ್ನು ತಾರಸಿಯಲ್ಲಿ ಬೆಳೆಯು ವುದೊಂದೇ ಪರಿಹಾರ' ಎಂದು ತಿಳಿಸಿದರು.

ಪಾಲಿಕೆ ಮಾಜಿ ಸದಸ್ಯ ಶ್ರೀನಿವಾಸ್ ಮೂರ್ತಿ, ಹೊಸ ಚಿಗುರು ಸಂಸ್ಥೆ ಅಧ್ಯಕ್ಷ ಅಶೋಕ್ ಜಯಂತ್, ಲಘು ಉದ್ಯೋಗ ಭಾರತಿ ಬೆಂಗಳೂರು ನಾರ್ತ್ ಅಧ್ಯಕ್ಷ ಅಶ್ವತ್ ನಾರಾಯಣ, ಡಾ.ಎಸ್. ರಾಜೇಶ್, ಶ್ರೀನಿವಾಸ್ ಮೂರ್ತಿ ಹಾಜರಿದ್ದರು.

ಜಾಲಹಳ್ಳಿಯ ಎಚ್‌ಎಂಟಿ ಮೈದಾನದಲ್ಲಿ ವಿಶ್ವ ಕೈತೋಟ ದಿನದ ಪ್ರಯುಕ್ತ ಗಾರ್ಡನ್ ಸಿಟಿ ಫಾರ್ಮರ್ಸ್ ಮತ್ತು ರೋಟರಿ ಜಾಲಹಳ್ಳಿ ಆಶ್ರಯದಲ್ಲಿ 'ಊಟ ಫ್ರಮ್ ಯುವರ್ ತೋಟ' ಎಂಬ ಕಾರ್ಯಕ್ರಮವನ್ನು ರೋಟರಿ ಜಾಲಹಳ್ಳಿ ಅಧ್ಯಕ್ಷ ಸಿ. ಪ್ರಕಾಶ್ ಉದ್ಘಾಟಿಸಿದರು

ಭಾನುವಾರ ಸಂಜೆ ಸುರಿದ ಮಳೆಯಿಂದಾಗಿ ರೆಸಿಡೆನ್ಸಿ ರಸ್ತೆ ನೀರಿನಿಂದ ಆವೃತವಾಗಿರುವುದು (ಎಡ ಚಿತ್ರ). ಮಲ್ಲೇಶ್ವರಂನ ಸಂಪಿಗೆ ರಸ್ತೆಯಲ್ಲಿ ವಾಹನಗಳು ಭಾಗಶಃ ನೀರಿನಲ್ಲಿ ಮುಳುಗಿರುವುದು. –ಪ್ರಜಾವಾಣಿ ಚಿತ್ರಗಳು

ತಡರಾತ್ರಿವರೆಗೂ ವರ್ಷಧಾರೆ • ರಸ್ತೆಗಳು ಜಲಾವೃತ, ಚಾಲಕರ ಪರದಾಟ

ಗುಡುಗಿನ ಅಬ್ಬರ, ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಬಿಡುವು ನೀಡುತ್ತಲೇ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು, ಗುಡುಗು–ಸಿಡಿಲಿನ ಅಬ್ಬರವೂ ಜೋರಾಗಿದೆ.

ಶನಿವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಬಿಡುವು ನೀಡಿದ್ದ ಮಳೆ, ರಾತ್ರಿ ಜೋರಾಗಿ ಸುರಿಯಿತು. ಭಾನುವಾರವೂ ಬೆಳಿಗ್ಗೆಯಿಂದ ಸಂಜೆಯವರೆಗೂ ಮಳೆ ಇರಲಿಲ್ಲ. ರಾತ್ರಿ 8 ಗಂಟೆಯಿಂದ ಆರಂಭವಾದ ಮಳೆ, ತಡರಾತ್ರಿಯವರೆಗೂ ಸುರಿಯಿತು.

ಕಾಲುವೆಗಳು ತುಂಬಿ ಪ್ರಮುಖ ರಸ್ತೆಗಳ ಮೇಲೆಯೇ ನೀರು ಹೊಳೆಯಂತೆ ಹರಿಯಿತು. ತಗ್ಗು ಪ್ರದೇಶಗಳಲ್ಲಿ ನೀರು ನಿಂತುಕೊಂಡ ದೃಶ್ಯಗಳು ಕಂಡುಬಂದವು.

ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಪೀಣ್ಯ, ಲಗ್ಗೆರೆ, ನಂದಿನಿ ಲೇಔಟ್, ಮಲ್ಲೇಶ್ವರ, ಶೇಷಾದ್ರಿಪುರ, ಹೆಬ್ಬಾಳ, ಸಂಜಯನಗರ, ಆರ್.ಟಿ.ನಗರ, ನಾಗವಾರ, ಹೆಣ್ಣೂರು, ಬಾಣಸವಾಡಿ, ರಾಜರಾಜೇಶ್ವರಿನಗರ, ಕೆಂಗೇರಿ, ದೀಪಾಂಜಲಿನಗರ, ಚಾಮರಾಜಪೇಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಅಬ್ಬರವಿತ್ತು.

ಶಾಂತಿನಗರ, ವಿಲ್ಸನ್ ಗಾರ್ಡನ್, ಸಂಪಂಗಿರಾಮನಗರ, ಗಾಂಧಿನಗರ, ಮೆಜೆಸ್ಟಿಕ್, ಶಿವಾಜಿನಗರ, ಎಂ.ಜಿ. ರಸ್ತೆ, ಕೋರಮಂಗಲ, ಮಡಿವಾಳ, ಲಾಲ್‌ಬಾಗ್, ಅಶೋಕನಗರ ಹಾಗೂ ಸುತ್ತಮುತ್ತ ಸ್ಥಳಗಳಲ್ಲೂ ಮಳೆ ಆಯಿತು.

ಮೆಜೆಸ್ಟಿಕ್ ರೈಲ್ವೆ ಕೆಳ ಸೇತುವೆ, ಓಕಳಿಪುರ ಕೆಳಸೇತುವೆ, ಕಸ್ತೂರಿ ನಗರದ ಕೆಳ ಸೇತುವೆ, ಇತರೆಡೆ ಮೂರು ಅಡಿಗಿಂತ ಹೆಚ್ಚು ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು. ಕೆಲವು ಕೆಟ್ಟು ನಿಂತವು. ಅಂಥ ವಾಹನಗಳನ್ನು ಸ್ಥಳೀಯರೇ ತಳ್ಳಿ ದಡ ಮುಟ್ಟಿಸಿದರು.

ಧಾರಾಕಾರ ಮಳೆಯಿಂದಾಗಿ ಕುಂಬ್ಳೆ ವೃತ್ತ ಸೇರಿದಂತೆ ಹಲವೆಡೆ ರಾತ್ರಿ ಸಂಚಾರ ಅಸ್ತವ್ಯಸ್ತಗೊಂಡಿತು. ಜೆ.ಸಿ. ನಗರದಲ್ಲಿ ಮರ ಉರುಳಿದ್ದರಿಂದ ರಸ್ತೆ ಬಂದ್ ಆಗಿದ್ದರೆ, ಆರ್.ಟಿ. ನಗರ ಸೇರಿದಂತೆ ಹಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು.

ಮಾರುಕಟ್ಟೆ ಪ್ರದೇಶದಲ್ಲಿ ನೀರು...: ಮಾರುಕಟ್ಟೆ ಪ್ರದೇಶಗಳಾದ ಅವೆನ್ಯೂ ರಸ್ತೆ, ಚಿಕ್ಕಪೇಟೆ, ಬಿವಿಕೆ ಅಯ್ಯಂಗಾರ್ ರಸ್ತೆ, ಕೆಂಪೇಗೌಡ ರಸ್ತೆ, ಶಿವಾಜಿನಗರ ಹಾಗೂ ಇತರೆಡೆ ರಸ್ತೆಗಳಲ್ಲಿಯೇ ನೀರು ಧಾರಾಕಾರವಾಗಿ ಹರಿಯಿತು.

ಬಹುತೇಕ ಮಾರುಕಟ್ಟೆ ಪ್ರದೇಶಗಳಲ್ಲಿ ಹಲವು ದಿನಗಳಿಂದ ಕಾಮಗಾರಿ ನಡೆಯುತ್ತಿದೆ. ಇದಕ್ಕಾಗಿ ರಸ್ತೆಯಲ್ಲೂ ಅಗೆಯಲಾಗಿದ್ದು, ಕಾಲುವೆಗಳೂ ಮುಚ್ಚಿವೆ. ಕಾಲುವೆಯಲ್ಲಿ ಹರಿಯಬೇಕಿರುವ ನೀರು ರಸ್ತೆಯಲ್ಲಿ ಹರಿದು, ವಾಹನ ಹಾಗೂ ಪಾದಚಾರಿಗಳ ಓಡಾಟಕ್ಕೆ ತೊಂದರೆ ಉಂಟಾಯಿತು. ಭಾನುವಾರ ರಜೆ ದಿನವಾಗಿದ್ದರಿಂದ ಹಲವರು ಮಾರುಕಟ್ಟೆ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಧಾರಾಕಾರ ಮಳೆಯ ಕಾರಣ ಹೆಚ್ಚಿನವರು ಅಂಗಡಿಗಳಲ್ಲಿ ಆಶ್ರಯ ಪಡೆದಿದ್ದುದು ಕಂಡುಬಂತು.

‘ಮೂರು ಕಡೆ ಉರುಳಿದ ಮರಗಳು’

‘ಭಾನುವಾರ ಸಂಜೆಯೂ ನಗರದಲ್ಲಿ ಉತ್ತಮ ಮಳೆ ಆಯಿತು. ಮೂರು ಕಡೆ ರಸ್ತೆಗೆ ಮರಗಳು ಉರುಳಿದ್ದು, ಸಂಚಾರಕ್ಕೆ ತೊಂದರೆ ಆಗಿರುವ ಬಗ್ಗೆ ದೂರು ಬಂದಿವೆ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

‘ಆರ್.ಟಿ.ನಗರದ ಪಿಎನ್‌ಟಿ ಕಾಲೊನಿ, ಡಿ.ಜೆ.ಹಳ್ಳಿಯ ಆನಂದ ಸಿನಿಮಂದಿರ ಹಾಗೂ ಕೋರಮಂಗಲದ 8ನೇ ಹಂತದಲ್ಲಿ ಮರಗಳು ಉರುಳಿವೆ. ಸಿಬ್ಬಂದಿ ಸ್ಥಳಕ್ಕೆ ಹೋಗಿ ತೆರವು ಕಾರ್ಯ ನಡೆಸುತ್ತಿದ್ದಾರೆ’ ಎಂದೂ ತಿಳಿಸಿದರು.

ಡಿಸಿಪಿ ಕಾರಿನ ಮೇಲೆ ಬಿದ್ದ ಮರದ ಕೊಂಬೆ: ಚಾಲಕ ಪಾರು

ಬೆಂಗಳೂರು: ದಕ್ಷಿಣ ವಿಭಾಗದ ಡಿಸಿಪಿ ಕೃಷ್ಣಕಾಂತ್ ಅವರ ಕಾರಿನ ಮೇಲೆ ಮರದ ಕೊಂಬೆಯೊಂದು ಮುರಿದು ಬಿದ್ದಿದ್ದು, ಕಾರು ಭಾಗಶಃ ಜಖಂಗೊಂಡಿದೆ. ಅದೃಷ್ಟವಶಾತ್ ಚಾಲಕ ಅಪಾಯದಿಂದ ಪಾರಾಗಿದ್ದಾರೆ.

‘ಡಿಸಿಪಿ ಕಚೇರಿ ಆವರಣದಲ್ಲಿ ಮರವಿದೆ. ಮಳೆ, ಗಾಳಿಯಿಂದಾಗಿ ಮರದ ಕೊಂಬೆ ಸಡಿಲಗೊಂಡಿತ್ತು. ಅದೇ ಕೊಂಬೆ ಏಕಾಏಕಿ ಮುರಿದು ಬಿದ್ದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶನಿವಾರ ಕಚೇರಿಗೆ ಡಿಸಿಪಿ ಅವರನ್ನು ಕರೆತಂದಿದ್ದ ಚಾಲಕ, ಡಿಸಿಪಿ ಕಚೇರಿಗೆ ತೆರಳಿದ ಬಳಿಕ ಕಾರಿನಲ್ಲಿ ಕುಳಿತಿದ್ದರು. ಮೊಬೈಲ್ ಕರೆ ಬಂದಿದ್ದು, ಇಳಿದು ಮಾತನಾಡುತ್ತ ಬೇರೆಡೆ ತೆರಳಿದ್ದರು. ಆಗ ಕೊಂಬೆ ಬಿದ್ದಿದೆ’ ಎಂದೂ ತಿಳಿಸಿವೆ.

ಪೊಲೀಸ್ ಅಧಿಕಾರಿಯ ಕಾರ್ ಮೇಲೆ ಮರ ಬಿದ್ದು ಜಖಂ ಆಗಿರುವುದು

ಮಳೆ: ಎಲ್ಲಿ, ಎಷ್ಟು?

(ಸೆಂಟಿ ಮೀಟರ್‌ಗಳಲ್ಲಿ)

ಬೆಂಗಳೂರು: ನಗರದಲ್ಲಿ ಭಾನುವಾರ ಉತ್ತಮ ಮಳೆಯಾಗಿದೆ. ವಿವಿಧ ಬಡಾವಣೆಗಳಲ್ಲಿ ಬೆಳಿಗ್ಗೆಯಿಂದ ರಾತ್ರಿ 12ರವರೆಗೆ ಸುರಿದಿರುವ ಮಳೆಯ ಪ್ರಮಾಣದ ವಿವರ ಹೀಗಿದೆ.

ದೊಡ್ಡನೆಕ್ಕುಂದಿ	8.1	ವಿದ್ಯಾಪೀಠ	7.85
ಎಚ್‌ಎಎಲ್ ವಿಮಾನ ನಿಲ್ದಾಣ	8.6	ನಾಗಪುರ	4.25
ವರ್ತೂರು	10.3	ಯಶವಂತಪುರ	1.85
ಮಾರತಹಳ್ಳಿ	8.75	ನಾಯಂಡಹಳ್ಳಿ	3.35
ಬೆಳ್ಳಂದೂರು	8.3	ನಾಗರಬಾವಿ	4.2
ಪುಲಕೇಶಿನಗರ	7.3	ಯಲಹಂಕ	2.15
ರಾಜಮಹಲ್ ಗುಟ್ಟಹಳ್ಳಿ	8.25	ರಾಜಾಜಿನಗರ	2.3
ಸಂಪಂಗಿರಾಮನಗರ	8.1	ರಾಜರಾಜೇಶ್ವರಿನಗರ	3.35

ಹೆದ್ದಾರಿ ಕಾಮಗಾರಿಯಿಂದ ಹಾನಿ ಕನಿಷ್ಠ ₹1 ಲಕ್ಷ ಪರಿಹಾರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ರಾಮನಗರ: ‘ಅತಿವೃಷ್ಟಿಯಿಂದ ಹಾನಿಯಾಗಿರುವ ಕುಟುಂಬಗಳಿಗೆ ಕೂಡಲೇ ಕನಿಷ್ಠ ₹1 ಲಕ್ಷ ಪರಿಹಾರ ವಿತರಿಸಬೇಕು’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಭಾನುವಾರ ಆಗ್ರಹಿಸಿದರು.

‘ರಾಮನಗರದಲ್ಲಿ ಕಳೆದ ವಾರ ಭಾರಿ ಮಳೆಯಾಗಿದೆ. ರಾಷ್ಟ್ರೀಯ ಹೆದ್ದಾರಿ 275ನಲ್ಲಿನ ಕಳಪೆ ಕಾಮಗಾರಿಯಿಂದಾಗಿ ಅಪಾರ ನೀರು ನಗರಕ್ಕೆ ನುಗ್ಗಿದ್ದು, 3 ಸಾವಿರ ಮನೆಗಳಿಗೆ ಹಾನಿಯಾಗಿದೆ. ಹೆದ್ದಾರಿ ನಿರ್ಮಾಣ ಮಾಡಿರುವ ಸಂಸ್ಥೆಯೂ ನಷ್ಟ ಪರಿಹಾರ ಭರಿಸಬೇಕು’ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆದ್ದಾರಿ ಕಾಮಗಾರಿಯನ್ನು ಮೂರನೇ ವ್ಯಕ್ತಿಯಿಂದ ತನಿಖೆ ಮಾಡಿಸುವಂತೆ ಸಂಸದ ಪ್ರತಾಪ ಸಿಂಹ ಹೇಳಿಕೆಗೆ, ‘ಹೆದ್ದಾರಿ ಕಂಟ್ರಾಕ್ಟರ್ ಅವರ (ಪ್ರತಾಪ್ ಸಿಂಹ) ಚಿಕ್ಕಪ್ಪನಾ? ಕಾಮಗಾರಿ ಸರಿಯಾಗಿದ್ದರೆ, ನೀರೇಕೆ ನಿಂತಿತ್ತು?’ ಎಂದರು.

’ಮುಖ್ಯಮಂತ್ರಿಗಳೇ ಭೇಟಿ ಕೊಟ್ಟು ಪರಿಶೀಲನೆ ನಡೆಸಿದ್ದಾರೆ. ಪ್ರತಾಪ್ ಸಿಂಹ ಗುತ್ತಿಗೆದಾರರ ಪರ ಮಾತನಾಡುತ್ತಿರುವುದು ಅನುಮಾನ ಮೂಡಿಸುತ್ತಿದೆ. ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪಿಸುತ್ತಿರುವಂತೆ ಇಲ್ಲೂ ಶೇ 40 ಕಮಿಷನ್ ಸತ್ಯ ಎನಿಸುತ್ತೆ’ ಎಂದರು. ಮಳೆಯಿಂದಾಗಿ ರಾಮನಗರದಲ್ಲಿ ಹಾನಿಯಾದ ಪ್ರದೇಶಗಳಿಗೆ ತೆರಳಿ ಪರಿಶೀಲನೆ ನಡೆಸಿದರು.

ದುಪ್ಪಟ್ಟು ಪರಿಹಾರ: ಸಚಿವ ಭರವಸೆ

ಪ್ರಜಾವಾಣಿ ವಾರ್ತೆ

ರಾಮನಗರ: ನಗರದಲ್ಲಿ ಅರ್ಕೇಶ್ವರ ಕಾಲೊನಿ, ಟಿಪ್ಪುನಗರ ಅತಿವೃಷ್ಟಿ ಹಾನಿ ಪ್ರದೇಶಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಅರ್ಕೇಶ್ವರ ಕಾಲೊನಿ ಜನರು, ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವಂತೆ ಆಗ್ರಹಿಸಿದರು. ಇದಕ್ಕೆ ಸಚಿವರು ‘ಸರ್ಕಾರದಿಂದ ಈಗಾಗಲೇ ತಲಾ ₹10 ಸಾವಿರ ತಾತ್ಕಾಲಿಕ ಪರಿಹಾರ ನೀಡಲಾಗಿದೆ. ಪ್ರತಿ ಮನೆಗೂ ಪಡಿತರ ತಲುಪಿಸಲಾಗುತ್ತಿದೆ’ ಎಂದು ಹೇಳಿದರು.

ಪತ್ರಕರ್ತರ ಜೊತೆ ಮಾತನಾಡಿದ ಸಚಿವರು, ‘ಪುನರ್ವಸತಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಪರಿಹಾರವನ್ನು ಎರಡು ಪಟ್ಟು ಹೆಚ್ಚು ಮಾಡಿದ್ದೇವೆ. ಬೆಳೆಹಾನಿಗೂ ಪರಿಹಾರ ಸಿಗಲಿದೆ ಎಂದು ಹೇಳಿದರು.

ದೊಡ್ಡೇರಿ ಕಾಲೋನಿಯಿಂದ ರಾಮನಾಯಕನ ತಾಂಡ್ಯವರೆಗಿನ ಡಾಂಬರೀಕರಣ ಕಾಮಗಾರಿಗೆ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಚಾಲನೆ ನೀಡಿದರು. ಯುವ ಮುಖಂಡ ಎನ್‌.ಶ್ರೀನಿವಾಸ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಸೂಲಿವಾರ ಬಿ.ಬಸವರಾಜು, ಡಿ.ಆನಂದಸ್ವಾಮಿ, ಮುತ್ತುರತ್ನ ಶ್ರೀಕಂಠಪ್ಪ, ನೀಲವ್ವ ಅಂದಪ್ಪನಹಳ್ಳಿ, ಕರಿಯಪ್ಪ, ಧನಂಜಯ ಇದ್ದಾರೆ.

‘ಮಳೆ: ₹ 200 ಕೋಟಿ ನಷ್ಟ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಧಾರಾಕಾರ ಮಳೆಯಿಂದ ಯಶವಂತಪುರ ಕ್ಷೇತ್ರದ ನಗರ ಮತ್ತು ಗ್ರಾಮೀಣ ಪ್ರದೇಶದ ರಸ್ತೆಗಳು ಕಿತ್ತುಹೋಗಿ, ಕೆಲವು ಕಡೆ ಸೇತುವೆಗಳು ಕುಸಿದು ₹ 200 ಕೋಟಿಯಷ್ಟು ನಷ್ಟವಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಹೇಳಿದರು.

ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರದಲ್ಲಿ 25ಕ್ಕೂ ಹೆಚ್ಚು ಮನೆಗಳು ಹಾನಿಯಾಗಿದೆ. ಕುಟುಂಬಸ್ಥರಿಗೆ ಪರಿಹಾರ ನೀಡಲು ಕಂದಾಯ ಇಲಾಖೆ ಅಧಿಕಾರಿಗಳು ವರದಿ ಸಿದ್ದಪಡಿಸುತ್ತಿದ್ದಾರೆ ಎಂದರು.

ಯುವನಾಯಕ ಎನ್. ಶ್ರೀನಿವಾಸ್ ಮಾತನಾಡಿ, ‘ಹಲವು ಕಡೆ ರಸ್ತೆಗಳು ಕುಸಿದಿವೆ. ಶೆಟ್ಟಿಕೆರೆಯ ನೀರು ರಸ್ತೆಯಲ್ಲಿ ಭಾರಿ ಪ್ರಮಾಣದಲ್ಲಿ ಹರಿದಿರುವುದೇ ಕಾರಣವಾಗಿದೆ. ರಸ್ತೆಗೆ ನೀರು ಬರದಂತೆ ಗೋಡೆ ನಿರ್ಮಿಸಬೇಕು’ ಎಂದು ಸಚಿವರಲ್ಲಿ ಮನವಿ ಮಾಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಸೂಲಿವಾರ ಬಿ.ಬಸವರಾಜು ಮಾತನಾಡಿ,‘ ಕೆಲವೆಡೆ ನೀರುಗಾಲುವೆ ಇಲ್ಲದೇ ಕಾರಣ ರಸ್ತೆಗಳು ಕಿತ್ತು ಹೋಗಿವೆ’ ಎಂದು ಹೇಳಿದರು.

ಕೆಂಗೇರಿ: ಗರ್ಭಿಣಿಯರಿಗೆ ಬಾಗಿನ

ಕೆಂಗೇರಿ: ‘ತಾಯ್ತನ ಮಹಿಳೆಯರ ಬಾಳಿನಲ್ಲಿ ಅತ್ಯಂತ ಸಂತೋಷ ಹಾಗೂ ಮಹತ್ವಪೂರ್ಣವಾದ ಘಟ್ಟ. ಆರೋಗ್ಯಪೂರ್ಣ ಮಗುವಿನ ಜನನಕ್ಕೆ ಈ ಅವಧಿಯು ಪ್ರಮುಖ ಪಾತ್ರ ವಹಿಸುತ್ತದೆ’ ಎಂದು ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ವಿವಿಧ ಪಂಚಾಯಿತಿಗಳ ವತಿಯಿಂದ ಆಯೋಜಿಸಿದ್ದ ‘ಸೀಮಂತ ಸಂಭ್ರಮ’ದಲ್ಲಿ ಅವರು ಮಾತನಾಡಿದರು. ‘ಗ್ರಾಮ ಪಂಚಾಯತಿಗಳ ಸಹಕಾರದೊಂದಿಗೆ ಸೀಮಂತ ಸಂಭ್ರಮದಂತಹ ಕಾರ್ಯಕ್ರಮಗಳನ್ನು ಕ್ಷೇತ್ರದಾದ್ಯಂತ ಹಮ್ಮಿಕೊಳ್ಳಲಾಗಿದೆ’ ಎಂದರು.

ಬಿಜೆಪಿ ಮುಖಂಡ ಚಿಕ್ಕರಾಜು ಮಾತನಾಡಿ, ‘ಪ್ರಸವಪೂರ್ವ ಅವಧಿಯಲ್ಲಿ ಗರ್ಭಿಣಿಯರಿಗೆ ಅಗತ್ಯವಾದ ಪೋಷಕಾಂಶಯುಕ್ತ ಆಹಾರವನ್ನು ಪಂಚಾಯಿತಿ ವತಿಯಿಂದ ವಿತರಿಸಲಾಗುತ್ತದೆ’ ಎಂದು ತಿಳಿಸಿದರು.

ಸುಮಾರು 900ಕ್ಕೂ ಹೆಚ್ಚು ಗರ್ಭಿಣಿಯರಿಗೆ ಬಾಗಿನ ನೀಡಲಾಯಿತು.

ಮುಖಂಡರಾದ ಭೀಮನಕುಪ್ಪೆ ಮಹೇಶ್, ರಾಮೋಹಳ್ಳಿ ವೇಣುಗೋಪಾಲ್, ಶೋಭಾ ತಿಮ್ಮೇಗೌಡ, ಚೇತನ್, ವಿಜಯ್ ಕುಮಾರ್, ನರಸಿಂಹಮೂರ್ತಿ ಉಪಸ್ಥಿತರಿದ್ದರು.

ಸೀಮಂತ ಸಂಭ್ರಮದಲ್ಲಿ ಪಾಲ್ಗೊಂಡಿದ್ದ ಸಚಿವ ಎಸ್‌.ಟಿ.ಸೋಮಶೇಖರ್ ಗರ್ಭಿಣಿಯರಿಗೆ ಅಕ್ಷತೆ ಹಾಕಿ ಹರಸಿದರು

ಕೃತಕ ವೈರಾಣುವಿನ ಕರಾಮತ್ತು!

ಕೊರೊನಾ ಅಧ್ಯಯನಕ್ಕಾಗಿಯೇ ಐಐಎಸ್‌ಇಯಿಂದ ವಿಶಿಷ್ಟ ಕಣದ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈರಾಣುಗಳು ಎಷ್ಟು ಗಂಡಾಂತರಕಾರಿ ಎಂಬುದಕ್ಕೆ ಕೊರೊನಾ ವೈರಾಣುವೇ ತಾಜಾ ಉದಾಹರಣೆ. ತನ್ನ ಪ್ರಳಯಾಂತಕ ಗುಣವನ್ನು ಇಡೀ ಜಗತ್ತಿಗೇ ತೋರಿಸಿಕೊಟ್ಟಿದೆ. ಇದರಿಂದಾಗಿ ನೈಜ ಕೊರೊನಾ ವೈರಾಣು ಬಳಸಿ ಅಧ್ಯಯನ ನಡೆಸಲು ವಿಶ್ವದೆಲ್ಲೆಡೆ ವಿಜ್ಞಾನಿಗಳು ಹಿಂದೇಟು ಹಾಕುತ್ತಿದ್ದಾರೆ!

ಈ ತಳಮಳದ ಮಧ್ಯೆಯೇ; ಇದಕ್ಕೆ ಪರ್ಯಾಯವಾಗಿ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿಗಳು ‘ಸಾರ್ಸ್–ಕೊರೊನಾ ವೈರಸ್–2’ (SARS-CoV-2) ಕೃತಕವಾಗಿ ವೈರಾಣು ಮಾದರಿಯ ಕಣವೊಂದನ್ನು (ವಿಎಲ್‌ಪಿ) ಅಧ್ಯಯನಕ್ಕಾಗಿಯೇ ಅಭಿವೃದ್ಧಿಪಡಿಸಿದ್ದಾರೆ. ಅಧ್ಯಯನದ ಜತೆಗೇ ಕೋವಿಡ್–19ಗೆ ಪರಿಣಾಮಕಾರಿ ಲಸಿಕೆ ತಯಾರಿಕೆಗೂ ಇದು ಮಾರ್ಗದರ್ಶಕವಾಗಬಲ್ಲದು ಎನ್ನುವುದನ್ನೂ ಕಂಡುಕೊಂಡಿದ್ದಾರೆ.

ಸಾಮಾನ್ಯವಾಗಿ ಸಾರ್ಸ್–ಕೊರೊನಾ ವೈರಸ್–2 ಅಧ್ಯಯನಕ್ಕೆ ಸ್ಯಾಂಪಲ್‌ನಿಂದ ಜೀವಂತ ವೈರಾಣುವನ್ನೇ ಪ್ರತ್ಯೇಕಿಸಬೇಕಾಗುತ್ತದೆ. ಬಳಿಕ ಇದರ ಪ್ರತಿಗಳನ್ನು ತಯಾರಿಸಿ, ವೈರಾಣುವಿನ ಪ್ರಸರಣ ಮತ್ತು ಅವು ಜೀವಂತ ಕೋಶಗಳಲ್ಲಿ ಪ್ರವೇಶಿಸುವ ಪರಿಯನ್ನು ವಿಶ್ಲೇಷಣೆ ನಡೆಸಬೇಕಾಗುತ್ತದೆ. ಇದು ಅಷ್ಟು ಸುಲಭದ ಕೆಲಸವೇನಲ್ಲ. ಅತಿ ವೇಗವಾಗಿ ಸೋಂಕು ಉಂಟು ಮಾಡುವ ವೈರಾಣುವಿನ ಜತೆ ಕೆಲಸ ಮಾಡುವುದು ಅತ್ಯಂತ ಅಪಾಯಕಾರಿ. ಅಪ್ಪಿತಪ್ಪಿಯೂ ವೈರಾಣು ಸೋರಿಕೆಯಾಗಬಾರದು. ಇಂತಹ ಪ್ರಯೋಗಗಳಿಗೆ ಜೈವಿಕ ರಕ್ಷಣಾ ಮಟ್ಟ–3 (ಬಿಎಸ್‌ಎಲ್–3) ಪ್ರಯೋಗಾಲಯದ ಅಗತ್ಯವೂ ಇದೆ. ಈ ರೀತಿಯ ಅಪಾಯಕಾರಿ ವೈರಾಣುಗಳನ್ನು ನಿರ್ವಹಿಸುವ ಸೌಲಭ್ಯ ದೇಶದಲ್ಲಿ ಸದ್ಯಕ್ಕೆ ಬೆರಳೆಣಿಕೆಯಷ್ಟು ಪ್ರಯೋಗಾಲಯಗಳಲ್ಲಿ ಲಭ್ಯವಿದೆ.

ವಿಜ್ಞಾನಿಗಳಿಗೆ ಎದುರಾಗುವ ಈ ಸಮಸ್ಯೆಯನ್ನು ನಿವಾರಿಸಲೆಂದೇ ವೈರಾಣು ಮಾದರಿಯ ವಿಶಿಷ್ಟ ಕಣವನ್ನು ಅಭಿವೃದ್ಧಿಪಡಿಸಿ, ಪರೀಕ್ಷೆಯನ್ನೂ ಮಾಡಲಾಗಿದೆ. ಯಾವುದೇ ರೀತಿಯಲ್ಲಿ ಸೋಂಕು ಹರಡದ ಮತ್ತು ನ್ಯಾನೋ ಗಾತ್ರದ (ಸೂಕ್ಷ್ಮ) ಅಣ್ವಿಕ ಇದಾಗಿದ್ದು, ಸಾರ್ಸ್–ಕೊರೊನಾ ವೈರಸ್–2ನ ತದ್ರೂಪದಂತೆಯೇ ಇದ್ದು, ಅದರಂತೆಯೇ ವರ್ತಿಸುತ್ತದೆ. ಆದರೆ, ಇದರಲ್ಲಿ ಅನುವಂಶಿಕ ವಸ್ತುಗಳು ಇರುವುದಿಲ್ಲ.

ಸಾರ್ಸ್–ಕೊರೊನಾ ವೈರಸ್–2ರ ರೂಪಾಂತರದಿಂದ (ಮ್ಯುಟೇಷನ್‌ನಿಂದ) ಆಗುವ ಪರಿಣಾಮಗಳನ್ನು ಸುರಕ್ಷಿತವಾಗಿ ಅಧ್ಯಯನ ನಡೆಸಲು ಕೃತಕ ವೈರಾಣು ನೆರವಾಗುತ್ತದೆ. ಅಲ್ಲದೆ, ಮಾನವ ದೇಹದಲ್ಲಿ ವೈರಸ್‌ಗೆ ನಿರೋಧಕ ಶಕ್ತಿಯನ್ನು ಸೃಷ್ಟಿಸಬಲ್ಲ ಸಾಮರ್ಥ್ಯದ ಲಸಿಕೆಯನ್ನು ತಯಾರಿಸಲು ಇದರಿಂದ ಸಾಧ್ಯವಾಗುತ್ತದೆ ಎನ್ನುತ್ತಾರೆ ಸಂಶೋಧಕರು. ವೈರಸ್ ವಿರುದ್ಧ ಹೋರಾಡುವುದಕ್ಕೆ ತೆಗೆದುಕೊಳ್ಳುವ ಸಮಯವೂ ಕಡಿಮೆ ಮಾಡಲು ಈ ಕಣವನ್ನು ಬಳಸಬಹುದು. ಈಗಾಗಲೇ ಇಲಿಗಳ ಮೇಲೆ ಇದರ ಪರೀಕ್ಷೆ ನಡೆದಿದ್ದು, ಈ ಕುರಿತ ಅಧ್ಯಯನ ವರದಿ ‘ಮೈಕ್ರೋಬಯಾಲಜಿ ಸ್ಪೆಕ್ಟ್ರಮ್’ನಲ್ಲಿ ಪ್ರಕಟವಾಗಿದೆ.

ಕೃತಕ ವೈರಾಣು ಸೃಷ್ಟಿ ಹೇಗೆ?

ನೈಜ ಸಾರ್ಸ್–ಕೊರೊನಾ ವೈರಸ್–2 ಪ್ರತ್ಯೇಕವಾಗಿ ರಚನಾತ್ಮಕ ಪ್ರೊಟೀನ್ ಅನ್ನು ಉತ್ಪಾದಿಸುತ್ತಲೇ ಆ ಕ್ರಿಯೆಯನ್ನು ಪುನರಾವರ್ತಿಸುತ್ತದೆ. ಆನುವಂಶಿಕ ವಸ್ತುವನ್ನು ಒಳಗೊಂಡ ಕೋಶದಲ್ಲಿ ಪ್ರೊಟೀನ್‌ಗಳನ್ನು ಜೋಡಿಸುತ್ತದೆ ಮತ್ತು ಆ ಮೂಲಕ ಕ್ರಿಯಾಶೀಲ ವೈರಾಣು ಕಣವಾಗಿ ರೂಪುಗೊಳ್ಳುತ್ತದೆ. ಈ ಕ್ರಿಯೆಯನ್ನು ಕೃತಕವಾಗಿ ಸೃಷ್ಟಿಸಲು ಅಧ್ಯಯನ ತಂಡವು ಬಕ್ಯುಲೊವೈರಸ್ ಅನ್ನು ಆಯ್ಕೆ ಮಾಡಿಕೊಂಡಿತು. ನಿರ್ದಿಷ್ಟವಾಗಿ ಈ ವೈರಾಣು ಕೀಟಗಳ ಮೇಲೆ ಪರಿಣಾಮ ಬೀರುತ್ತವೆ. ಆದರೆ, ಮಾನವರಿಗೆ ಹಾನಿ ಮಾಡುವುದಿಲ್ಲ. ಈ ವೈರಾಣು ನಾಲ್ಕೂ ಪ್ರೊಟೀನ್‌ಗಳನ್ನು ಉತ್ಪಾದಿಸಿ, ಜೋಡಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ ಮತ್ತು ತ್ವರಿತಗತಿಯಲ್ಲಿ ಪುನರ್ ಸೃಷ್ಟಿ ಮಾಡುತ್ತದೆ. ಕೃತಕ ವೈರಾಣು ಕಣಗಳನ್ನು ಎಲೆಕ್ಟ್ರಾನ್ ಮೈಕ್ರೊಸ್ಕೋಪ್ ಮೂಲಕ ವಿಶ್ಲೇಷಣೆಗೆ ಒಳಪಡಿಸಿದಾಗ ನೈಜ ವೈರಾಣುವಿನಂತೆಯೇ ಸ್ಥಿರವಾಗಿರುವುದು ಕಂಡುಬಂದಿತು ಎಂದಿದೆ ಅಧ್ಯಯನ.

> **ವೈರಾಣು ಮಾದರಿಯ ಕಣ ಎಲ್ಲ ನಾಲ್ಕೂ ರಚನಾತ್ಮಕ ಪ್ರೊಟೀನ್‌ಗಳನ್ನು ಒಟ್ಟಿಗೇ ಅಭಿವ್ಯಕ್ತಿಸುವಂತೆ ಮಾಡುವುದೇ ನಮಗಿದ್ದ ದೊಡ್ಡ ಸವಾಲು**
>
> **ಹರ್ಷ ರಹೇಜಾ,** ಅಧ್ಯಯನ ತಂಡದ ಮುಖ್ಯಸ್ಥ

ಗಣೇಶೋತ್ಸವ: ಪ್ರಸಾದಕ್ಕಾಗಿ ₹ 4 ಲಕ್ಷಕ್ಕೆ ಲಾಡು ಖರೀದಿ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆ ವಾರ್ಡ್ ಸಾಮೂಹಿಕ ಗಣೇಶೋತ್ಸವ ಸಮಿತಿ ವತಿಯಿಂದ 18 ಅಡಿ ಎತ್ತರದ ದೊಡ್ಡ ಗಣೇಶನ ಪ್ರಸಾದವಾದ ಲಾಡುವನ್ನು ಬಿಜೆಪಿ ಮುಖಂಡ ಬಿ.ಎಂ.ಕೃಷ್ಣ ಅವರು ₹ 4 ಲಕ್ಷಕ್ಕೆ ಹರಾಜಿನಲ್ಲಿ ಪಡೆದರು.

ಸಾಮೂಹಿಕ ಗಣೇಶೋತ್ಸವ ಮೆರವಣಿಗೆಗೆ ಮಾಜಿ ಶಾಸಕ ಎಸ್.ಮುನಿರಾಜು ಅವರು ಚಾಲನೆ ನೀಡಿದರು. ಮೆರವಣಿಗೆ ಬಾಗಲಗುಂಟೆ ಮೈದಾನದಿಂದ ಪ್ರಾರಂಭವಾಗಿ ಮಾರಮ್ಮ ದೇವಸ್ಥಾನ, ಬಾಗಲಗುಂಟೆ ನಿಲ್ದಾಣ, ಪೈಪ್‌ಲೈನ್ ಮಾರ್ಗವಾಗಿ ದಾಸರಹಳ್ಳಿ ಮೆಟ್ರೊ ನಿಲ್ದಾಣದಿಂದ ಚಕ್ಕಸಂದ್ರದವರೆಗೂ ನಡೆಯಿತು.

ಮೆರವಣಿಗೆಯಲ್ಲಿ ಹುಲಿವೇಷ, ಡೊಳ್ಳು ಕುಣಿತ, ವೀರಗಾಸೆ, ಕುಣಿತ ಸೇರಿ ಹಲವಾರು ಜಾನಪದ ಕಾರ್ಯಕ್ರಮಗಳು ನಡೆದವು. ಬಿಜೆಪಿ ಮುಖಂಡರಾದ ಎನ್.ಲೋಕೇಶ್, ಲಕ್ಷ್ಮಣ್‌ಗೌಡ ಬಿ.ಎಂ.ನಾರಾಯಣ್, ಗುರುಪ್ರಸಾದ್, ಬಿ.ಟಿ. ಶ್ರೀನಿವಾಸ್ ಇದ್ದರು.

ಸಾಮೂಹಿಕ ಗಣೇಶೋತ್ಸವ ಮೆರವಣಿಗೆಗೆ ಮಾಜಿ ಶಾಸಕ ಎಸ್‌.ಮುನಿರಾಜು ಅವರು ಚಾಲನೆ ನೀಡಿದರು. ಬಿಜೆಪಿ ಮುಖಂಡರಾದ ಎನ್‌. ಲೋಕೇಶ್, ಲಕ್ಷ್ಮಣ್ ಗೌಡ ಬಿ ಎಂ ನಾರಾಯಣ್, ಗುರುಪ್ರಸಾದ್, ಬಿ.ಟಿ. ಶ್ರೀನಿವಾಸ್ ಮುಂತಾದವರು ಭಾಗವಹಿಸಿದ್ದರು

‘ಸಮಾಜದ ಸ್ವಾಸ್ಥ್ಯ ಕೆಡಿಸುವವರ ನಿಯಂತ್ರಣ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ಧರ್ಮಗಳ ಸಾರ ಒಂದೇ ಆಗಿದ್ದರೂ ಸಮಾಜದ ಸ್ವಾಸ್ಥ್ಯ ಕೆಡಿಸುವವರನ್ನು ನಿಯಂತ್ರಿಸುವ ಕೆಲಸ ಎಲ್ಲರಿಂದಲೂ ಆಗಬೇಕು’ ಎಂದು ಬೇಲಿಮಠದ ಶಿವರುದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಶಿಕ್ಷಣ ತಜ್ಞ ಆಗಾ ಸುಲ್ತಾನ್ ಅವರು 30ನೇ ವಾರ್ಷಿಕ ‘ಹುಸೇನ್ ದಿನ’ (ಇಮಾಮ್ ಹುಸೇನ್ ಆಚರಣೆ) ಅಂಗವಾಗಿ ಹಮ್ಮಿಕೊಂಡಿದ್ದ ‘ಸಾಮಾಜಿಕ ಸಮಾನತೆಗಾಗಿ ಒಂದಾಗಿ’ ಸಮಾವೇಶದಲ್ಲಿ ಮಾತನಾಡಿದ ಅವರು, ‘ಸಬ್ ಕಾ ಮಾಲೀಕ್ ಏಕ್ ಹೈ ಎಂಬ ಮಾತನ್ನು ನಾವೆಲ್ಲರೂ ನಂಬಬೇಕು. ಧರ್ಮ ಬೋಧಿಸುವ ಮಾನವೀಯತೆ ಮತ್ತು ಸನ್ನಡತೆ ಪಾಲಿಸಿ ಎಲ್ಲರೂ ಒಂದಾಗಬೇಕು’ ಎಂದರು.

‘ಸಮಾಜದಲ್ಲಿ ನಡೆಯುತ್ತಿರುವ ಪೈಶಾಚಿಕ ಕೃತ್ಯಗಳಿಗೆ ತಡೆ ಬೀಳಬೇಕಿದೆ. ಉದಾತ್ತ ಚಿಂತನೆ ಮೂಲಕ ಸಮಾಜದ ಒಳಿತನ್ನು ಬಯಸಬೇಕು. ಮನುಷ್ಯ ಮೊದಲು ತನ್ನಲ್ಲಿ ದೇವರನ್ನು ಕಾಣಬೇಕು’ ಎಂದರು.

‘ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ’ದ ಪ್ರಧಾನ ಕಾರ್ಯದರ್ಶಿ ವಸೈನ ಆರ್ಚ್ ಬಿಷಪ್ ರೆ. ಫೆಲಿಕ್ಸ್ ಮಚಾಡೊ ಮಾತನಾಡಿ, ‘ಇಮಾಮ್ ಹುಸೇನ್ ಅವರ ತ್ಯಾಗ, ಬಲಿದಾನದ ಸಂದೇಶ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಅದನ್ನು ಎಲ್ಲರೂ ಅರಿತು ಪಾಲಿಸುವ ಅವಶ್ಯಕತೆ ಇದೆ’ ಎಂದರು.

ಆಗಾ ಸುಲ್ತಾನ್ ಮಾತನಾಡಿ, ‘ಇಮಾಮ್ ಹುಸೇನ್ ದಿನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಕ್ರೈಸ್ತ ಸಮುದಾಯ ಕೂಡಾ ಬೆಂಬಲ ನೀಡಿದೆ. ಈ ನಿಟ್ಟಿನಲ್ಲಿ ಈಗಾಗಲೇ ಸಿದ್ಧತೆ ಆರಂಭಿಸಲು ಚಿಂತನೆ ನಡೆದಿದೆ’ ಎಂದರು.

ಬೆಂಗಳೂರಿನ ಗುರುದ್ವಾರದ ಮುಖ್ಯಸ್ಥ ಗಿಯಾನಿ ಜಸ್ಬೀರ್ ಸಿಂಗ್, ದಲೈ ಲಾಮಾ ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಶನ್‌ನ ಟೆನ್‌ಝಿನ್ ಸೆಲೋನ್, ಮಾಜಿ ಸಂಸದ, ಮುಂಬೈನ ಮಾಜಿ ಸಂಸದ ಮೌಲಾನಾ ಒಬೈದುಲ್ಲಾ ಖಾನ್ ಅಜ್ಮಿ, ಶಾಸಕ ಎನ್.ಎ. ಹ್ಯಾರಿಸ್, ಜೆಡಿಎಸ್ ನಾಯಕ ತನ್ವೀರ್, ರಾಜ್ಯ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ಖಾಲಿದ್ ಅಹ್ಮದ್, ಕವಿ ಮಂಜರ್ ಭೋಪಾಲಿ, ಲೇಖಕ ಎನ್.ಕೆ. ಮೋಹನ್ ರಾಮ್, ಸೂಫಿ ಗಾಯಕಿ ಖಾನಕ್ ಜೋಷಿ ಮತ್ತಿತರರಿದ್ದರು.

‘ಸಾಮಾಜಿಕ ಸಮಾನತೆಗಾಗಿ ಒಂದಾಗಿ’ ಕಾರ್ಯಕ್ರಮದಲ್ಲಿ ಮೊಹಮ್ಮದ್ ಸಲೇ ಸಯೀದ್ ಜಲೋಖಾನ್, ಪ್ರೊ. ತಲಾಲ್ ಮೊಹಮ್ಮದ್ ಅಲಿ ಮೊಹಮ್ಮದ್ ಅಲ್ ಬೀರ್, ಬೇಲಿ ಮಠದ ಶಿವರುದ್ರ ಸ್ವಾಮೀಜಿ, ಟೆನ್‌ಝಿನ್ ಸೆಲೋನ್, ವಸೈನ ಆರ್ಚ್ ಬಿಷಪ್ ರೆ. ಫೆಲಿಕ್ಸ್ ಮಚಾಡೊ ಮತ್ತು ಮುಂಬೈನ ಮಾಜಿ ಸಂಸದ ಮೌಲಾನಾ ಒಬೈದುಲ್ಲಾ ಖಾನ್ ಅಜ್ಮಿ ಭಾಗವಹಿಸಿದರು – ಪ್ರಜಾವಾಣಿ ಚಿತ್ರ

ಕಚುಸಾಪ ರಾಜ್ಯಮಟ್ಟದ ಲೇಖಕಿಯರ 6ನೇ ಸಮ್ಮೇಳನ: ಚನ್ನಮ್ಮ ಹಳ್ಳಿಕೇರಿ ಅಭಿಮತ

ಗಾಂಧಿ, ವಿನೋಬಾರ ಚಿಂತನೆ ಚಿರಂತನ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಾತ್ಮ ಗಾಂಧಿ ಹಾಗೂ ಸಂತ ವಿನೋಬಾರ ಚಿಂತನೆಗಳು ನಮ್ಮ ಬದುಕಿನಲ್ಲಿ ನಿತ್ಯ ನೂತನವಾಗಬೇಕು’ ಎಂದು ಸ್ವಾತಂತ್ರ್ಯ ಹೋರಾಟಗಾರ್ತಿ ಚನ್ನಮ್ಮ ಹಳ್ಳಿಕೇರಿ ಪ್ರತಿಪಾದಿಸಿದರು.

ಸ್ಥಳೀಯ ಗೌರಿಮಠದ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಭಾನುವಾರ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದಿಂದ ಏರ್ಪಡಿಸಿದ್ದ ‘ಕಚುಸಾಪ ರಾಜ್ಯಮಟ್ಟದ ಲೇಖಕಿಯರ 6ನೇ ಸಮ್ಮೇಳನ’ ದಲ್ಲಿ ಸಮ್ಮೇಳನಾಧ್ಯಕ್ಷರ ಭಾಷಣ ಮಾಡಿದರು.

ದೇಶಭಕ್ತಿಯ ಜತೆ ಗ್ರಾಮೀಣ ಉದ್ಯಮ ಪ್ರೋತ್ಸಾಹಿಸುವ ಕಾರ್ಯವಿಂದು ನಡೆಯುವ ಅಗತ್ಯವಿದೆ. ಖಾದಿ ಬಟ್ಟೆಗಳನ್ನು ಖರೀದಿಸುವ ಕಾರ್ಯ ಬದುಕಿನ ಒಂದು ಅಂಗವಾಗಿ ಬೆಳೆಯಬೇಕು. ಕನಿಷ್ಠ ಒಂದು ಖಾದಿ ಕರವಸ್ತ್ರವನ್ನಾದರೂ ಖರೀದಿಸುವ ಹವ್ಯಾಸ ಬೆಳೆಸಿಕೊಳ್ಳಿ ಎಂದು ಕರೆ ನೀಡಿದರು.

ತಿಪ್ಪಾಯಿಕೊಪ್ಪ ಮೂಕಪ್ಪಸ್ವಾಮಿ ಮಠದ ಮಹಾಂತ ಸ್ವಾಮೀಜಿ ಸಮಾರಂಭ ಉದ್ಘಾಟಿಸಿ ಮಾತನಾಡಿ, ‘ಚುಟುಕು ಸಾಹಿತ್ಯ ಇಂದು ಹೆಚ್ಚು ಪ್ರಚಲಿತವಾಗಿದೆ. ಸಮಯದ ಕೊರತೆಯ ಸಂದರ್ಭದಲ್ಲಿ ಚುಟುಕು ಕವಿಗಳ ಹೊಣೆಗಾರಿಕೆ ಹೆಚ್ಚಿದೆ’ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಗೌರಿಮಠದ ಶಿವಕುಮಾರ ಶಿವಾಚಾರ್ಯರು ಮಾತನಾಡಿ, ‘ಚನ್ನಮ್ಮ ಹಳ್ಳಿಕೇರಿ ಅವರ ಬದುಕು ಎಲ್ಲರಿಗೂ ಆದರ್ಶವಾಗಿದೆ. ಅವರು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡದಿದ್ದರೆ ಕವಿಗಳಿಗೆ ಸ್ಫೂರ್ತಿ ಇಂದು ಸಿಗುತ್ತಿರಲಿಲ್ಲ. ಅಂತಹ ಹೋರಾಟಗಾರರನ್ನು ಗೌರವಿಸಿದ್ದು ಸ್ವಾಗತಾರ್ಹ’ ಎಂದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಸಹ ಕಾರ್ಯದರ್ಶಿ ಶಂಕರ ಕುಂಬಿ ಅವರು ಶಶಿಧರ ಉಬ್ಬಳದಿನ್ನಿ ಅವರ ‘ಸಂಸ್ಕಾರ’ ಪುಸ್ತಕ ಅನಾವರಣಗೊಳಿಸಿದರು.

ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿ, ‘ಅನುದಾನವಿಲ್ಲದೇ ಹೋದರೂ ಕಚುಸಾಪ ಬಹಳಷ್ಟು ವೈಶಿಷ್ಟ್ಯ ಪೂರ್ಣ ಕಾರ್ಯಕ್ರಮ ರೂಪಿಸಲು ಪರಿಶ್ರಮ ಹಾಕುತ್ತಿದೆ. ಕಚುಸಾಪ ಚಟುವಟಿಕೆಗಳಿಗೆ ಸರ್ಕಾರ ಪ್ರೋತ್ಸಾಹ ನೀಡಲಿ’ ಎಂದರು.

ಸಮ್ಮೇಳನದಲ್ಲಿ ನಡೆದ ವಿಚಾರಗೋಷ್ಠಿ, ಕವಿಗೋಷ್ಠಿಗಳೂ ಸಹೃದಯರ ಮೆಚ್ಚುಗೆಗೆ ಪಾತ್ರವಾದವು. ಜಿಲ್ಲಾ ಘಟಕದ ಅಧ್ಯಕ್ಷ ವಿರೂಪಾಕ್ಷ ಲಮಾಣಿ ಅಭಿನಂದನಾ ಭಾಷಣ ಮಾಡಿದರು. ಪ್ರೊ.ತಿರುಮಲೆ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಗಂಗಯ್ಯ ಕುಲಕರ್ಣಿ ನಿರೂಪಿಸಿದರು.

ಮುಖ್ಯಾಂಶಗಳು

- ಖಾದಿ ವಸ್ತ್ರಗಳನ್ನು ಬಳಸಿ
- ಚುಟುಕು ಸಾಹಿತ್ಯಕ್ಕೆ ವಿಶೇಷ ಸ್ಥಾನವಿದೆ
- ಸಂಸ್ಕಾರ ಪುಸ್ತಕ ಬಿಡುಗಡೆ

ಹಾವೇರಿಯ ಗೌರಿಮಠದ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಭಾನುವಾರ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದಿಂದ ಏರ್ಪಡಿಸಿದ್ದ ‘ಕಚುಸಾಪ ರಾಜ್ಯಮಟ್ಟದ ಲೇಖಕಿಯರ 6ನೇ ಸಮ್ಮೇಳನ’ ದಲ್ಲಿ ಸಮ್ಮೇಳನಾಧ್ಯಕ್ಷೆ ಚನ್ನಮ್ಮ ಹಳ್ಳಿಕೇರಿ ಮಾತನಾಡಿದರು. ಗೌರಿಮಠದ ಶಿವಕುಮಾರ ಶಿವಾಚಾರ್ಯರು ಇದ್ದಾರೆ

ಇ.ಡಿ ಮುಖ್ಯಸ್ಥರ ಅವಧಿ ವಿಸ್ತರಣೆ: ಇಂದು ವಿಚಾರಣೆ

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ ನಿರ್ದೇಶಕರ ಅಧಿಕಾರಾವಧಿಯನ್ನು ಐದು ವರ್ಷಕ್ಕೆ ವಿಸ್ತರಣೆ ಮಾಡುವುದು ಮತ್ತು ಇದಕ್ಕಾಗಿ ಕಾನೂನಿಗೆ ತಿದ್ದುಪಡಿ ತಂದಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ರಣದೀಪ್ ಸಿಂಗ್ ಸುರ್ಜೇವಾಲಾ, ಮಹುವಾ ಮೊಯಿತ್ರಾ ಸೇರಿದಂತೆ ಎಂಟು ಮಂದಿ ಅರ್ಜಿ ಸಲ್ಲಿಸಿದ್ದರು.

ಅರ್ಜಿಗಳ ವಿಚಾರಣೆಯನ್ನು ಸಿಜೆಐ ಯು.ಯು ಲಲಿತ್ ನಡೆಸಲಿದ್ದಾರೆ ಎಂದು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದೆ. ಅರ್ಜಿಗಳ ಕುರಿತು ಪ್ರತಿಕ್ರಿಯೆ ಸೂಚಿಸಿ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಜಾಗೃತ ಆಯೋಗಕ್ಕೆ (ಸಿವಿಸಿ) ಆಗಸ್ಟ್ 2ರಂದು ಸುಪ್ರೀಂ ಕೋರ್ಟ್ ನೋಟಿಸ್ ನೀಡಿತ್ತು.

ಮಾಲೀಕರ ಮಾಹಿತಿಯನ್ನೇ ಅಳಿಸಿ ವಂಚನೆ: ಸಾರಿಗೆ ಇಲಾಖೆ ಅಧಿಕಾರಿಗಳೇ ಶಾಮೀಲು

ಆರ್.ಸಿ ಕಾರ್ಡ್ ತಿದ್ದುವ ದಂಧೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ದುಬಾರಿ ಬೆಲೆಯ ಐಷಾರಾಮಿ ವಾಹನಗಳ ಮಾರಾಟದ ವೇಳೆ ಹಿಂದಿನ ಮಾಲೀಕರ ಮಾಹಿತಿಯನ್ನೇ ಅಳಿಸಿ ಖರೀದಿದಾರರನ್ನು ವಂಚಿಸುತ್ತಿರುವ ದಂಧೆಯಲ್ಲಿ ನಗರದ ಪ್ರಾದೇಶಿಕ ಸಾರಿಗೆ ಕಚೇರಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯೂ ಶಾಮೀಲಾಗಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ಬಳಸಿದ ಹಳೇ ವಾಹನಗಳನ್ನು ಖರೀದಿ ಮಾಡುವವರು ಮುಖ್ಯವಾಗಿ ಗಮನಿಸುವುದು ವಾಹನದ ಮಾಲೀಕರ ಸಂಖ್ಯೆ. ಈ ಸಂಖ್ಯೆಯನ್ನು ಆರ್.ಸಿ (ನೋಂದಣಿ ಪ್ರಮಾಣಪತ್ರ) ಕಾರ್ಡ್‌ನಲ್ಲಿ ಕಡಿಮೆ ಮಾಡಿಕೊಡುವ ಅಕ್ರಮ ಸಾರಿಗೆ ಇಲಾಖೆಯಲ್ಲೇ ಸದ್ದಿಲ್ಲದೆ ನಡೆಯುತ್ತಿದೆ.

ಮುಖ್ಯಾಂಶಗಳು
- ಐಷಾರಾಮಿ ಕಾರುಗಳೇ ದಂಧೆಯ ಮೂಲ
- ಮಾಲೀಕರ ಸಂಖ್ಯೆ ಎಷ್ಟು ಕಡಿಮೆ ಎಂಬ ಆಧಾರದಲ್ಲಿ ಲಂಚ ಪ್ರಮಾಣ ನಿಗದಿ
- 'ವಾಹನ್' ತಂತ್ರಾಂಶದಲ್ಲಿನ ಮಾಹಿತಿ ತಿದ್ದುಪಡಿ

ಕಾರುಗಳ ಮಾಲೀಕತ್ವ ಐದಾರು ಮಂದಿಗೆ ವರ್ಗಾವಣೆಯಾಗಿದ್ದರೂ, ಆರ್.ಸಿ ಕಾರ್ಡ್‌ನಲ್ಲಿ ಒಬ್ಬರು ಅಥವಾ ಇಬ್ಬರ ಹೆಸರನ್ನಷ್ಟೇ ಉಳಿಸಿಕೊಡಲಾಗುತ್ತದೆ. ಈ ಬಗ್ಗೆ ಹಲವು ಕಾರುಗಳ ಮಾಲೀಕರು ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಲಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ

ಸಾಂದರ್ಭಿಕ ಚಿತ್ರ

(ಕೇಂದ್ರ) ಒಂದರಲ್ಲೇ ಸುಮಾರು 50 ವಾಹನಗಳ ಆರ್.ಸಿ ಕಾರ್ಡ್‌ಗಳನ್ನು 'ವಾಹನ್' ತಂತ್ರಾಂಶದಲ್ಲಿ ತಿದ್ದಿರುವುದು ಗೊತ್ತಾಗಿದೆ.

ಈ ರೀತಿ ಮಾಲೀಕರ ಸಂಖ್ಯೆ ಕಡಿಮೆ ಮಾಡಿಸಿಕೊಂಡ ವಾಹನಗಳ ಪಟ್ಟಿಯಲ್ಲಿ ಬಹುತೇಕ ಐಷಾರಾಮಿ ಕಾರುಗಳೇ ಇವೆ. ಬೆಂಜ್, ಔಡಿ, ಫಾರ್ಚ್ಯುನರ್, ಇನೋವಾ ಕಾರುಗಳ ಆರ್.ಸಿ ಕಾರ್ಡ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿ ತಿದ್ದುಪಡಿಯಾಗಿವೆ. ವಾಸ್ತವದಲ್ಲಿ ನಾಲ್ಕು ಮಂದಿಗೆ ವರ್ಗಾವಣೆಯಾಗಿದ್ದರೆ, ಅದನ್ನು ಒಂದು ಅಥವಾ ಎರಡು ಮಂದಿಗಷ್ಟೇ ವರ್ಗಾವಣೆಯಾಗಿದೆ ಎಂದು ತಿದ್ದಲಾಗಿದೆ. ಏಳರಿಂದ ಎಂಟು ಮಂದಿಗೆ ವರ್ಗಾವಣೆ ಆಗಿರುವ ವಾಹನಗಳಾಗಿದ್ದರೆ ಮೂರು ಅಥವಾ ನಾಲ್ಕು ಮಂದಿಗಷ್ಟೇ ವರ್ಗಾವಣೆಯಾಗಿದೆ ಎಂದು ನಮೂದಿಸಲಾಗಿದೆ. ವಾಹನಗಳ ಮಾಲೀಕರ ಸಂಖ್ಯೆ ಎಷ್ಟು ಕಡಿಮೆಯಾಗಬೇಕು ಎಂಬುದರ ಆಧಾರದಲ್ಲಿ ಲಂಚದ ಪ್ರಮಾಣ ನಿಗದಿ ಮಾಡಿಕೊಂಡು ತಿದ್ದಲಾಗಿದೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳೇ ವಿವರಿಸಿದ್ದಾರೆ.

'ದೂರು ಆಧರಿಸಿ ತನಿಖೆ ನಡೆಸಿದಾಗ 'ವಾಹನ್' ತಂತ್ರಾಂಶದಲ್ಲಿನ ಮಾಹಿತಿ ತಿದ್ದುಪಡಿ ಮಾಡಿರುವುದು ಪತ್ತೆಯಾಗಿದೆ. ಹೀಗೆ ತಿದ್ದಿರುವುದು ಯಾವ ಅಧಿಕಾರಿ ಅಥವಾ ಸಿಬ್ಬಂದಿಯ ಲಾಗಿನ್‌ನಿಂದ ಆಗಿದೆ ಎಂಬುದೂ ಗೊತ್ತಾಗಿದೆ. ದೂರು ಆಧರಿಸಿ ಒಂದೇ ಸಾರಿಗೆ ಕಚೇರಿಯಲ್ಲಿ ತನಿಖೆ ನಡೆಸಲಾಗಿದ್ದು, ತನಿಖಾ ವರದಿ ಬರಬೇಕಿದೆ. ಹೆಚ್ಚಿನ ತನಿಖೆ ನಡೆಸಿದರೆ ಬೇರೆ ಕಚೇರಿಗಳಲ್ಲೂ ಈ ದಂಧೆ ನಡೆದಿರುವುದು ಪತ್ತೆಯಾಗಬಹುದು' ಎಂದು ಹೆಸರು ಬಯಸದ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಾರಿಗೆ ಇಲಾಖೆ ಆಯುಕ್ತ ಟಿ.ಎಚ್.ಎಂ. ಕುಮಾರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅವರು ಸಂಪರ್ಕಕ್ಕೆ ಬರಲಿಲ್ಲ.

ಸುದ್ದಿ 2 ನಿಮಿಷ

ಮಲ್ಯ ಠೇವಣಿ ಇರಿಸಿಲ್ಲ: ಸುಪ್ರೀಂ ಕೋರ್ಟ್‌ಗೆ ವರದಿ

ನವದೆಹಲಿ: ಹಣ ವರ್ಗಾವಣೆ ಪ್ರಕರಣದಲ್ಲಿ ದೇಶಭ್ರಷ್ಟ ಉದ್ಯಮಿ ವಿಜಯ್ ಮಲ್ಯ ಮತ್ತು ಇತರ ಫಲಾನುಭವಿಗಳು ಆಗಸ್ಟ್ 18ರ ವರೆಗೆ ಯಾವುದೇ ಮೊತ್ತವನ್ನು ಠೇವಣಿ ಇರಿಸಿಲ್ಲ ಎಂದು ಬೆಂಗಳೂರಿನ ಸಾಲ ವಸೂಲಾತಿ ನ್ಯಾಯಾಧಿಕರಣದ ವಸೂಲಾತಿ ಅಧಿಕಾರಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿದ್ದಾರೆ.

ಮಲ್ಯ ಅವರಿಗೆ ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿ ಜುಲೈ 11 ರಂದು ಸುಪ್ರೀಂ ಕೋರ್ಟ್ ನಾಲ್ಕು ತಿಂಗಳ ಜೈಲು ಶಿಕ್ಷೆ ವಿಧಿಸಿತ್ತು. ₹318 ಕೋಟಿ ಮೊತ್ತದ ಪಡೆದಿರುವ ಮೊತ್ತವನ್ನು ಶೇ 8ರ ಬಡ್ಡಿಯೊಂದಿಗೆ ವಸೂಲಾತಿ ಅಧಿಕಾರಿ ಬಳಿ ಠೇವಣಿ ಇಡಬೇಕು ಎಂದೂ ಸೂಚಿಸಿತ್ತು.

ವಿಜಯ್ ಮಲ್ಯ ಮತ್ತು ಇತರರ ವಿರುದ್ಧ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನೇತೃತ್ವದಲ್ಲಿ ಬ್ಯಾಂಕ್‌ಗಳ ಒಕ್ಕೂಟವು ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಮತ್ತು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಅವರನ್ನೊಳಗೊಂಡ ನ್ಯಾಯಪೀಠವು ಸೋಮವಾರ ವಿಚಾರಣೆಗಾಗಿ ಪರಿಗಣಿಸಲಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಕೇಂದ್ರ ಗೃಹ ಸಚಿವಾಲಯವು ಸಲ್ಲಿಸಿರುವ ವರದಿಯನ್ನು ನ್ಯಾಯಾಲಯ ಪರಿಗಣಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಹಣದ ಮೂಲ ಬಹಿರಂಗಪಡಿಸಲು ಮದರಸಾಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಕಾನೂನುಬಾಹಿರ ಚಟುವಟಿಕೆ ತಡೆಯುವ ಸಲುವಾಗಿ ಶೀಘ್ರದಲ್ಲೇ ತೆರೆಯಲಿರುವ ಆನ್‌ಲೈನ್ ಪೋರ್ಟಲ್‌ನಲ್ಲಿ ಹಣದ ಮೂಲ ಸೇರಿದಂತೆ ತಮ್ಮ ವಿವರಗಳನ್ನು ಅಪ್‌ಲೋಡ್ ಮಾಡುವಂತೆ ಅಸ್ಸಾಂ ಪೊಲೀಸರು ಭಾನುವಾರ ಎಲ್ಲಾ ಖಾಸಗಿ ಮದರಸಾಗಳಿಗೆ ಸೂಚಿಸಿದ್ದಾರೆ.

ರಾಜ್ಯದಲ್ಲಿ ಜಿಹಾದಿ ಚಟುವಟಿಕೆಗಳ ವಿರುದ್ಧ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಈ ನಿರ್ದೇಶನ ನೀಡಲಾಗಿದೆ. ಭಯೋತ್ಪಾದಕ ಸಂಘಟನೆಗಳಿಗೆ ಸಹಾಯ ಮಾಡಿದ ಆರೋಪದ ಮೇಲೆ ಸ್ಥಳೀಯ ಆಡಳಿತವು ಆಗಸ್ಟ್‌ನಲ್ಲಿ ಮೂರು ಮದರಸಾಗಳನ್ನು ನೆಲಸಮಗೊಳಿಸಿತ್ತು.

ಮುಸ್ಲಿಂ ಸಾಮಾಜಿಕ-ಧಾರ್ಮಿಕ ಸಂಸ್ಥೆಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಡಿಜಿಪಿ ಭಾಸ್ಕರ್ ಜ್ಯೋತಿ ಮಹಂತ, 'ಮಾಹಿತಿ ಪ್ರಕಾರ ರಾಜ್ಯದಲ್ಲಿ 1 ಸಾವಿರ ಖಾಸಗಿ ಮದರಸಾಗಳು ಇವೆ. ಅವುಗಳಲ್ಲಿ ಕೆಲವು ಮದರಸಾಗಳ ಚಟುವಟಿಕೆಗಳನ್ನು ನೋಡಿಕೊಳ್ಳುವ ಸಂಸ್ಥೆಗಳೊಂದಿಗೆ ನೋಂದಾಯಿಸಿಲ್ಲ. ಮುಸ್ಲಿಂ ಸಂಘಟನೆಗಳ ಪ್ರತಿನಿಧಿಗಳನ್ನು ಹೊಂದಿರುವ ಸಮಿತಿ ರಚಿಸಲು ನಿರ್ಧರಿಸಲಾಗಿದೆ. ಅಂತಹ ಮದರಸಾಗಳು ತಮ್ಮ ವಿವರ, ಜಮೀನು, ಶಿಕ್ಷಕರು ಮತ್ತು ಹಣದ ಮೂಲಗಳ ವಿವರಗಳನ್ನು ಬಹಿರಂಗಪಡಿಸುವುದನ್ನು ಸಮಿತಿ ಖಚಿತಪಡಿಸುತ್ತದೆ. ಈ ಕಾರ್ಯ ಆರು ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ' ಎಂದು ಅವರು ಹೇಳಿದರು.

ಬಿಜೆಪಿ ನೇತೃತ್ವದ ಸರ್ಕಾರ ಈ ಹಿಂದೆ ರಾಜ್ಯದಲ್ಲಿ ಸುಮಾರು 800 ಸರ್ಕಾರಿ ಅನುದಾನಿತ ಮದರಸಾಗಳನ್ನು ಮುಚ್ಚಿತ್ತು. ಇಸ್ಲಾಮಿಕ್ ಭಯೋತ್ಪಾದಕ ಗುಂಪುಗಳೊಂದಿಗೆ ಸಂಪರ್ಕ ಹೊಂದಿದ ಆರೋಪಕ್ಕೆ ಸಂಬಂಧಿಸಿ ಕಳೆದ ಮಾರ್ಚ್‌ನಿಂದ ಮದರಾಸ ಶಿಕ್ಷಕರು ಸೇರಿದಂತೆ 37 ಮಂದಿಯನ್ನು ರಾಜ್ಯ ಪೊಲೀಸರು ಬಂಧಿಸಿದ್ದಾರೆ.

3,900 ಗಣೇಶ ಮೂರ್ತಿಗಳ ವಿಸರ್ಜನೆ



ಮುಂಬೈ (ಪಿಟಿಐ): ಗಣೇಶ ಚತುರ್ಥಿಯ ಐದನೇ ದಿನವಾದ ಭಾನುವಾರ ಮುಂಬೈನಲ್ಲಿ 3,900 ಮೂರ್ತಿಗಳನ್ನು ಸಮುದ್ರದಲ್ಲಿ ಮತ್ತು ಕೃತಕ ಕೊಳಗಳಲ್ಲಿ ವಿಸರ್ಜನೆ ಮಾಡಲಾಯಿತು ಎಂದು ಬೃಹನ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಅಧಿಕಾರಿಗಳು ತಿಳಿಸಿದರು.

ಮೆರವಣಿಗೆ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ ಎಂದು ಅವರು ತಿಳಿಸಿದ್ದಾರೆ.

ಮ್ಯಾಗ್ಸೆಸೆ ಪ್ರಶಸ್ತಿ ತಿರಸ್ಕರಿಸಿದ ಶೈಲಜಾ

ಪ್ರಜಾವಾಣಿ ವಾರ್ತೆ

ಕೆ.ಕೆ. ಶೈಲಜಾ

ತಿರುವನಂತಪುರ: ರಾಮೊನ್ ಮ್ಯಾಗ್ಸೆಸೆ ಪ್ರಶಸ್ತಿ ಸ್ವೀಕರಿಸಲು ಕೇರಳದ ಸಿಪಿಎಂ ಹಿರಿಯ ನಾಯಕಿ ಮತ್ತು ಮಾಜಿ ಆರೋಗ್ಯ ಸಚಿವೆ ಕೆ.ಕೆ. ಶೈಲಜಾ ನಿರಾಕರಿಸಿದ್ದಾರೆ. ಇದು ಈಗ ವಿವಾದಕ್ಕೆ ಕಾರಣವಾಗಿದೆ.

'64ನೇ ಮ್ಯಾಗ್ಸೆಸೆ ಪ್ರಶಸ್ತಿಗೆ ಆಯ್ಕೆ ಮಾಡಿರುವ ಸಂಬಂಧ ರಾಮೊನ್ ಮ್ಯಾಗ್ಸೆಸೆ ಪ್ರಶಸ್ತಿ ಪ್ರತಿಷ್ಠಾನವು ಶೈಲಜಾ ಅವರನ್ನು ಸಂಪರ್ಕಿಸಿತ್ತು. ಕೋವಿಡ್-19 ಸಾಂಕ್ರಾಮಿಕ ಮತ್ತು ನಿಫಾ ವಿರುದ್ಧದ ಅವರ ವೈಯಕ್ತಿಕ ಪರಿಶ್ರಮವನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗಿತ್ತು. ಆದರೆ, ಅವರು ಇದರಲ್ಲಿನ ಪರಿಶ್ರಮ ವೈಯಕ್ತಿಕವಾದುದಲ್ಲ, ಎಲ್‌ಡಿಎಫ್ ಸರ್ಕಾರದಲ್ಲಿದ್ದ ಎಲ್ಲರ ಸಾಂಘಿಕ ಶ್ರಮವೆಂದು ಭಾವಿಸಿ ಪ್ರಶಸ್ತಿ ನಿರಾಕರಿಸಿದ್ದಾರೆ' ಎಂದು ಶೈಲಜಾ ಅವರ ಸಮೀಪವರ್ತಿಗಳ ಮೂಲಗಳು ಹೇಳಿವೆ.

ಮತ್ತೊಂದು ಮೂಲದ ಪ್ರಕಾರ, 'ಪಕ್ಷದ ಕೇಂದ್ರ ಸಮಿತಿ ಸದಸ್ಯರ ಸೂಚನೆ ಮೇರೆಗೆ ಈ ಪ್ರಶಸ್ತಿ ಸ್ವೀಕರಿಸಲು ಮಾಜಿ ಸಚಿವೆ ನಿರಾಕರಿಸಿದ್ದಾರೆ. ಕಮ್ಯುನಿಸ್ಟರಿಗೆ ವಿರುದ್ಧವಾಗಿದ್ದ ರಾಮೊನ್ ಅವರ ಹೆಸರಿನ ಪ್ರಶಸ್ತಿ ಸ್ವೀಕರಿಸುವುದು ಸೈದ್ಧಾಂತಿಕವಾಗಿಯೂ ಸರಿಯಲ್ಲ. ಅಲ್ಲದೇ, ಕೋವಿಡ್ ಮತ್ತು ನಿಫಾ ವಿರುದ್ಧದ ಹೋರಾಟ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸಂಪುಟದ ಎಲ್ಲರ ಸಾಂಘಿಕ ಪ್ರಯತ್ನವಾಗಿತ್ತು'.

ನವದೆಹಲಿಯಲ್ಲಿ ಪ್ರತಿಕ್ರಿಯಿಸಿರುವ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, 'ಫಿಲಿಪ್ಪೀನ್ಸ್‌ನಲ್ಲಿ ಕಮ್ಯುನಿಸ್ಟರ ಮೇಲೆ ದಬ್ಬಾಳಿಕೆ ನಡೆಸಿದ ಆ ದೇಶದ ಮಾಜಿ ಅಧ್ಯಕ್ಷರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ತಾತ್ವಿಕ ಮತ್ತು ಸೈದ್ಧಾಂತಿಕ ಕಾರಣಕ್ಕೆ ಶೈಲಜಾ ಅವರು ಪ್ರಶಸ್ತಿಯನ್ನು ವಿನಯದಿಂದ ನಿರಾಕರಿಸಿದ್ದಾರೆ' ಎಂದು ಹೇಳಿದ್ದು, ಶೈಲಜಾ ಅವರ ತೀರ್ಮಾನವನ್ನು ಬೆಂಬಲಿಸಿದ್ದಾರೆ.

'ಶೈಲಜಾ ಟೀಚರ್' ಎಂದೇ ಜನಪ್ರಿಯವಾಗಿರುವ ಅವರು, ಸಿಪಿಎಂ ಕೇಂದ್ರೀಯ ಸಮಿತಿ ಸದಸ್ಯರೂ ಆಗಿದ್ದಾರೆ. ಪಿಣರಾಯಿ ವಿಜಯನ್ ಅವರ ಸರ್ಕಾರದಲ್ಲಿ ಆರೋಗ್ಯ ಸಚಿವೆಯಾಗಿ ದಕ್ಷ ಕೆಲಸದಿಂದಾಗಿ ಪ್ರಶಂಸೆಗೆ ಪಾತ್ರರಾಗಿದ್ದರು. ಅವರ ನಾಯಕತ್ವದಲ್ಲಿ ಆರೋಗ್ಯ ಇಲಾಖೆ ನಿಫಾ ಮತ್ತು ಕೋವಿಡ್ ವಿರುದ್ಧ ವಹಿಸಿದ ಪಾತ್ರದಿಂದಾಗಿ ಅಂತರ ರಾಷ್ಟ್ರೀಯ ವೇದಿಕೆಗಳೂ ಅವರನ್ನು ಗೌರವಿಸಿದ್ದವು.

2021 ವಿಧಾನಸಭೆ ಚುನಾವಣೆಯಲ್ಲಿ ದಾಖಲೆಯ ಮತಗಳಿಂದ ಜಯ ಸಾಧಿಸಿದ ಶೈಲಜಾ ಅವರ ವಿರುದ್ಧ ಸುಖಾಸುಮ್ಮನೆ ಆರೋಪಗಳು ಕಾವು ಪಡೆದವು. ಪಿಣರಾಯಿ ವಿಜಯನ್ ಅವರ ಎರಡನೇ ಅವಧಿಯಲ್ಲಿ ಅವರನ್ನು ಸಂಪುಟಕ್ಕೆ ಸೇರ್ಪಡೆಗೊಳಿಸಿರಲಿಲ್ಲ.

1957ರ ಮಾರ್ಚ್‌ನಲ್ಲಿ ವಿಮಾನ ಅಪಘಾತದಲ್ಲಿ ಮೃತಪಟ್ಟ ರಾಮೊನ್ ಮ್ಯಾಗ್ಸೆಸೆ ಅವರ ಗೌರವಾರ್ಥ ಅದೇ ವರ್ಷದಲ್ಲಿ ರಾಕ್‌ಫೆಲ್ಲರ್ ಬ್ರದರ್ಸ್ ಫಂಡ್ (ಆರ್‌ಬಿಎಫ್) ಪ್ರಶಸ್ತಿಗಳನ್ನು ಸ್ಥಾಪಿಸಿತು.

ಇಂದು ಐದು ಫೆಲೋಷಿಪ್ ಘೋಷಣೆ: ಯುಜಿಸಿ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಐದು ಫೆಲೋಷಿಪ್ ಮತ್ತು ಸಂಶೋಧನಾ ಅನುದಾನಗಳನ್ನು ಶಿಕ್ಷಕರ ದಿನಾಚರಣೆಯಂದು (ಸೆ.5) ಘೋಷಿಸಲಿದೆ ಎಂದು ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದರು.

ಶಿಕ್ಷಕರ ದಿನದಂದು, ದೇಶದಾದ್ಯಂತ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗುವಂತಹ ಹಲವಾರು ಸಂಶೋಧನಾ ಯೋಜನೆಗಳನ್ನು ಯುಜಿಸಿ ಪ್ರಕಟಿಸಲಿದೆ ಎಂದು ಜಗದೀಶ್ ಕುಮಾರ್ ಭಾನುವಾರ ಹೇಳಿದರು.

ಸೋಮವಾರ ಘೋಷಿಸಲಿರುವ ಐದು ಫೆಲೋಷಿಪ್ ಮತ್ತು ಸಂಶೋಧನಾ ಅನುದಾನಗಳಲ್ಲಿ ಕುಟುಂಬದಲ್ಲಿ ಒಬ್ಬಳೇ ಹೆಣ್ಣು ಮಗಳಾಗಿದ್ದರೆ (ಸಿಂಗಲ್ ಗರ್ಲ್ ಚೈಲ್ಡ್) ಅಂತಹವರಿಗೆ ಸಾವಿತ್ರಿಬಾಯಿ ಜ್ಯೋತಿರಾವ್ ಫುಲೆ ಫೆಲೋಷಿಪ್, ಡಾ. ರಾಧಾಕೃಷ್ಣನ್ ಯುಜಿಸಿ ಪೋಸ್ಟ್-ಡಾಕ್ಟರಲ್ ಫೆಲೋಷಿಪ್, ಹಿರಿಯ ಶ್ರೇಣಿಯ ಬೋಧಕ ಸಿಬ್ಬಂದಿಗೆ ಫೆಲೋಷಿಪ್, ಸೇವೆಯಲ್ಲಿರುವ ಬೋಧಕ ಸಿಬ್ಬಂದಿಗೆ ಸಂಶೋಧನಾ ಅನುದಾನ ಮತ್ತು ಹೊಸದಾಗಿ ನೇಮಕವಾದ ಬೋಧಕ ಸಿಬ್ಬಂದಿಗೆ ಡಾ.ಡಿ.ಕೊಠಾರಿ ಸಂಶೋಧನಾ ಅನುದಾನ ಸೇರಿವೆ. ನಿವೃತ್ತ ಬೋಧಕರಿಗೂ ಸಂಶೋಧನಾ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ 'ಹಿರಿಯ ಶ್ರೇಣಿಯ ಬೋಧಕ ಸಿಬ್ಬಂದಿ ಫೆಲೋಷಿಪ್' ಆರಂಭಿಸಲಾಗುತ್ತಿದೆ.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ

ಎಂಪ್ರಿ ಸಂಸ್ಥೆಯು ಕೆಳಕಂಡ ಕಾಮಗಾರಿಗಳಿಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಿದೆ.

1) ಬಳ್ಳಾರಿ ಭೂದೃಶ್ಯದಲ್ಲಿನ ಖನಿಜಯುಕ್ತ ವಲಯದಲ್ಲಿ **ಗಣಿಗಾರಿಕೆ ಚಟುವಟಿಕೆ ಮತ್ತು ಜೈವಿಕ ವೈವಿಧ್ಯತೆ ಸಂರಕ್ಷಣೆಗಾಗಿ ಜಂಟಿ ನಿರ್ವಹಣೆ ಯೋಜನೆ ಅಭಿವೃದ್ಧಿಗಾಗಿ ಸಮರ್ಥ ಏಜೆನ್ಸಿಗಳು ಮತ್ತು ವ್ಯಕ್ತಿಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು** ಆಹ್ವಾನಿಸಿರುವರು. EOI ಸಲ್ಲಿಸಲು ಕಡೆಯ ದಿನಾಂಕ: **30.09.2022.**

2) ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ನವೀನ ಪರಿಕಲ್ಪನೆಯೊಡನೆ ಆಯೋಜಿಸಲಿರುವ **ಮಳಿಗೆಗಳನ್ನು ನಿರ್ವಹಣೆ ಮಾಡಲು ಮತ್ತು ವಸ್ತುಪ್ರದರ್ಶನ ಮಳಿಗೆಯ ವಿನ್ಯಾಸ, ಅಲಂಕಾರ ಮತ್ತು ನಿರ್ಮಾಣಕ್ಕಾಗಿ** ಎಲ್ಲಾ ಲಾಜಿಸ್ಟಿಕ್‌ಗಳ ವ್ಯವಸ್ಥೆಗಾಗಿ ಅನುಭವ ಹೊಂದಿರುವ ಕಾರ್ಯಕ್ರಮ ನಿರ್ವಹಣೆ ಮತ್ತು ಪಿಆರ್ ಏಜೆನ್ಸಿಗಳು/ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಿರುವರು. EOI ಸಲ್ಲಿಸಲು ಕಡೆಯ ದಿನಾಂಕ: **26.09.2022.**

ವಿವರವಾದ ನಿಯಮಗಳು ಎಂಪ್ರಿ ವೆಬ್‌ಸೈಟ್: https://empri.karnataka.gov.in/page/Tender/en ಇಲ್ಲಿ ದೊರೆಯುವುದು.

EOI ಅನ್ನು ಕರ್ನಾಟಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಸಲ್ಲಿಸತಕ್ಕದ್ದು.

ಸಹಿ/- ಪಿಡಿಒ & ಟಿಐಎ, ಎಂಪ್ರಿ

ಕಾಂಗ್ರೆಸ್ ಸರ್ಕಾರದ ಹಗರಣಗಳ ತನಿಖೆ

ಒಂದನೇ ಪುಟದಿಂದ

2018ರ ಚುನಾವಣೆಯ ತಯಾರಿಯ ಮಾದರಿಯಲ್ಲೇ 2023ರ ವಿಧಾನಸಭಾ ಚುನಾವಣೆಯ ಸಿದ್ಧತೆ ಆರಂಭಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಹಿಂದಿನ ಚುನಾವಣೆಯ ಮುನ್ನ ನಡೆಸಿದ್ದ ಪರಿವರ್ತನಾ ಯಾತ್ರೆಯಂತಹ ಕಾರ್ಯಕ್ರಮಗಳನ್ನು ರೂಪಿಸುವ ನಿರ್ಧಾರ ಮಾಡಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಸೆ.17ರಿಂದ ಸೇವಾ ಪಾಕ್ಷಿಕ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನವಾದ ಸೆಪ್ಟೆಂಬರ್ 17 ರಿಂದ ರಾಜ್ಯದಾದ್ಯಂತ ಸೇವಾ ಪಾಕ್ಷಿಕ ನಡೆಸಲು ಭಾನುವಾರ ನಡೆದ ಬಿಜೆಪಿ ಪ್ರಮುಖರ ಸಭೆಯಲ್ಲಿ ನಿರ್ಧರಿಸಲಾಗಿದೆ.

'ಸೆ.17ರಂದು ಪ್ರಧಾನಿಯವರ ಜನ್ಮದಿನ. ಸೆ.25 ರಂದು ಜನಸಂಘದ ನಾಯಕರಾಗಿದ್ದ ದೀನದಯಾಳ್ ಉಪಾಧ್ಯಾಯ ಅವರ ಜನ್ಮದಿನ. ಅಕ್ಟೋಬರ್ 2 ರಂದು ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನ. ಈ ಪ್ರಯುಕ್ತ ಸೆ.17 ರಿಂದ ಅ.2ರವರೆಗೂ ಸೇವಾ ಅಭಿಯಾನ ಹಮ್ಮಿಕೊಳ್ಳಲಾಗುವುದು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ತಿಳಿಸಿದರು.

ಸಿ.ಟಿ. ರವಿ

ಈ ಅವಧಿಯಲ್ಲಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರಿಂದ ರಕ್ತದಾನ ಶಿಬಿರ, ಜಲಮೂಲಗಳ ಸ್ವಚ್ಛತೆ, ಗಿಡಗಳನ್ನು ನೆಡುವುದು, ಅಂಗವಿಕಲರಿಗೆ ಅಗತ್ಯ ಸಾಧನಗಳ ವಿತರಣೆಯಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು.

ಐ.ಟಿ, ಬಿ.ಟಿ ಉದ್ಯಮಿಗಳೊಂದಿಗೆ ಚರ್ಚೆ: ಸಿ.ಎಂ ಬೊಮ್ಮಾಯಿ

ಬೆಂಗಳೂರು: ಹೊರ ವರ್ತುಲ ರಸ್ತೆಯ ಪ್ರದೇಶದಲ್ಲಿನ ಪ್ರವಾಹ ನಿಯಂತ್ರಿಸದಿದ್ದರೆ ಬೆಂಗಳೂರಿನಿಂದ ಹೊರ ಹೋಗುವ ಕುರಿತು ಚಿಂತನೆ ನಡೆಸುವುದಾಗಿ ಹೇಳಿರುವ ಮಾಹಿತಿ ತಂತ್ರಜ್ಞಾನ (ಐ.ಟಿ) ಮತ್ತು ಜೈವಿಕ ತಂತ್ರಜ್ಞಾನ (ಬಿ.ಟಿ) ಕ್ಷೇತ್ರದ ಉದ್ಯಮಿಗಳೊಂದಿಗೆ ಸಭೆ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಂದಾಗಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಭಾನುವಾರ ನಡೆದ ಪಕ್ಷದ ಪ್ರಮುಖರ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ, 'ಐ.ಟಿ ಮತ್ತು ಬಿ.ಟಿ ಕ್ಷೇತ್ರದ ಪ್ರತಿನಿಧಿಗಳನ್ನು ಶೀಘ್ರದಲ್ಲೇ ಸಭೆಗೆ ಆಹ್ವಾನಿಸುತ್ತೇನೆ. ಅವರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರ ಕುರಿತು ಚರ್ಚಿಸಲಾಗುವುದು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತದೆ' ಎಂದರು.

ಆಗಸ್ಟ್ 30ರಂದು ಉಂಟಾದ ಪ್ರವಾಹದಿಂದ ಈ ಎರಡೂ ಕ್ಷೇತ್ರಗಳ ಉದ್ದಿಮೆಗಳಿಗೆ ₹ 225 ಕೋಟಿ ನಷ್ಟವಾಗಿದೆ ಎಂದು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘ (ಒಆರ್‌ಆರ್‌ಸಿಎ), ಮುಖ್ಯಮಂತ್ರಿಯವರಿಗೆ ಪತ್ರ ಬರೆದಿತ್ತು. ಪ್ರವಾಹ ನಿಯಂತ್ರಣ ಸೇರಿದಂತೆ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳದಿದ್ದರೆ ಉದ್ಯಮಿಗಳು ಬೆಂಗಳೂರಿನಿಂದ ಹೊರ ಹೋಗುವ ಕುರಿತು ಚಿಂತನೆ ನಡೆಸುತ್ತಾರೆ ಎಂದು ಎಚ್ಚರಿಸಿತ್ತು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಅತ್ಯಾಚಾರ, ಲೈಂಗಿಕ ದೌರ್ಜನ್ಯ ಎಲ್ಲಿದೆಯೋ ನ್ಯಾಯ?

ಸಂವಾದ

ಭಾಗವಹಿಸುವವರು

ಕೆ. ನೀಲಾ, ಲೇಖಕಿ, ಸಾಮಾಜಿಕ ಕಾರ್ಯಕರ್ತೆ, ಕಲಬುರಗಿ

ಸ್ಟ್ಯಾನ್ಲಿ, ಸಹ ಸಂಸ್ಥಾಪಕ, ಒಡನಾಡಿ, ಮೈಸೂರು

ವಿ.ಕೆ. ಸಂಜ್ಯೋತಿ, ಚಿತ್ರ ನಿರ್ದೇಶಕಿ, ಬೆಂಗಳೂರು

ಮಲ್ಲಿಗೆ ಸಿರಿಮನೆ, ಸಂಚಾಲಕಿ, ಕರ್ನಾಟಕ ಜನಶಕ್ತಿ, ಮಂಡ್ಯ

ಮಧ್ಯಾಹ್ನ 12 ರಿಂದ 1

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9

ಸಂಪಾದಕೀಯ: ಬೆಳಿಗ್ಗೆ 9.30

ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಒಳನೋಟ ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3elFxFl

ವಿಭಜನೆ ನಿಲ್ಲಿಸಬೇಕು: ಗೋದ್ರೆಜ್ ಅಧ್ಯಕ್ಷ

ಮುಂಬೈ (ಪಿಟಿಐ): 'ದೇಶ ವಿಭಜಿಸುವುದನ್ನು ನಾವು ನಿಲ್ಲಿಸಬೇಕಿದೆ. ದೇಶದ ಆರ್ಥಿಕ ಅಭಿವೃದ್ಧಿಗೆ ಒಗ್ಗಟ್ಟು ಅಗತ್ಯ ಎಂಬುದನ್ನು ಸರ್ಕಾರವು ಅರ್ಥಮಾಡಿಕೊಳ್ಳಬೇಕಿದೆ' ಎಂದು ಗೋದ್ರೆಜ್ ಇಂಡಸ್ಟ್ರೀಸ್ ಅಧ್ಯಕ್ಷ ನಾದಿರ್ ಗೋದ್ರೆಜ್ ಹೇಳಿದ್ದಾರೆ.

ಇಲ್ಲಿ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದರಲ್ಲಿ ಅವರು ಈ ಮಾತು ಹೇಳಿದ್ದಾರೆ. 'ಭಿನ್ನದನಿಗಳನ್ನು ಹತ್ತಿಕ್ಕುವ ಸರ್ಕಾರ ಇಲ್ಲದಿರುವ, ಅಭಿವ್ಯಕ್ತಿ ಸ್ವಾತಂತ್ರ್ಯವಿರುವ ಸ್ಥಿತಿಯನ್ನು ನಾನು ನೋಡಲು ಬಯಸುತ್ತೇನೆ' ಎಂಬ ಕವನದ ಸಾಲುಗಳ ಮೂಲಕ ಅವರು ಮಾತು ಆರಂಭಿಸಿದ್ದರು.

ಶಿಕ್ಷಣವೊ? ಭಕ್ಷಣೆಯೊ?: ಸಿದ್ದರಾಮಯ್ಯ ತರಾಟೆ

ಬೆಂಗಳೂರು: 'ಆರೆಸ್ಸೆಸ್‌ನಲ್ಲಿ ತರಬೇತಿ ಪಡೆದು ಬಂದಿರುವ ಬಿ.ಸಿ. ನಾಗೇಶ್ ಅವರು ಶಿಕ್ಷಣ ಸಚಿವರಾದ ದಿನದಿಂದ ಈ ಇಲಾಖೆ ಭ್ರಷ್ಟಾಚಾರದ ಕೊಂಪೆಯಾಗಿರುವ ಕತೆ ಒಂದೊಂದಾಗಿ ಹೊರಬೀಳುತ್ತಿವೆ. ಪಠ್ಯಪುಸ್ತಕಗಳ ವಿವಾದದ ಮರೆಯಲ್ಲಿ ಇಲ್ಲಿ ನಡೆಯುತ್ತಿರುವುದು ಲಂಚಾವತಾರದ ಕುಣಿದಾಟ. ಇದು ಶಿಕ್ಷಣವೊ? ಭಕ್ಷಣೆಯೊ?' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ಪ್ರಜಾವಾಣಿ'ಯ ಭಾನುವಾರದ (ಸೆ. 4) ಸಂಚಿಕೆಯಲ್ಲಿ ಪ್ರಕಟವಾದ 'ಶಿಕ್ಷಣ: ಲಂಚವೇ 'ಭೂಷಣ'! ವರದಿಯನ್ನು ಉಲ್ಲೇಖಿಸಿ 'ಭಕ್ಷಣಾಸಚಿವ' ಎಂದು ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿರುವ ಅವರು, 'ಶಿಕ್ಷಣ ಸಚಿವರ ವಿರುದ್ಧ ಕೇಳಿ ಬರುತ್ತಿದ್ದ ಭ್ರಷ್ಟಾಚಾರದ ಆರೋಪಗಳಿಗೆ ಈಗ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಯ ಸಂಘಟನೆ ಪುರಾವೆಗಳನ್ನು ನೀಡಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಖಾಸಗಿ ಶಾಲೆಗಳ ಪರವಾನಗಿಯಿಂದ ಹಿಡಿದು ನಿವೃತ್ತ ಶಿಕ್ಷಕರ ಪಿಂಚಣಿವರೆಗೆ ಲಂಚ ನೀಡದೆ ಯಾವ ಕೆಲಸವೂ ಆಗುತ್ತಿಲ್ಲವಂತೆ. ಲಂಚ ಪಡೆದು ಖಾಸಗಿ ಶಾಲೆಗಳಿಗೆ ಅಕ್ರಮವಾಗಿ ಅನುಮತಿ ನೀಡುವ ಇಲಾಖೆಯೇ, ಮತ್ತೆ ಅಕ್ರಮ ಎಸಗಿದ ಆರೋಪದ ಮೇಲೆ ದುಡ್ಡು ವಸೂಲಿ ಮಾಡುತ್ತಿದೆಯಂತೆ. ಎಂಥಾ ಅದ್ಭುತ ಪ್ಲಾನ್' ಎಂದೂ ವ್ಯಂಗ್ಯವಾಡಿದ್ದಾರೆ.

'ಕಾಂಗ್ರೆಸ್‌ನ ಮಹತ್ವಾಕಾಂಕ್ಷೆಯ ಶಿಕ್ಷಣ ಹಕ್ಕಿನ ಕಾಯ್ದೆಯನ್ನೂ ಇಲಾಖೆ ಹಳ್ಳ ಹಿಡಿಸಿದೆ. 2012ರಲ್ಲಿ ಆರ್‌ಟಿಇ ಫಲಾನುಭವಿ ವಿದ್ಯಾರ್ಥಿಗಳು 1.20 ಲಕ್ಷ. ಈಗ ಈ ಸಂಖ್ಯೆ 7 ಸಾವಿರಕ್ಕೆ ಇಳಿದಿದೆ. ಆರ್‌ಟಿಇ ಯೋಜನೆಯಡಿ ಖಾಸಗಿ ಶಾಲೆಗಳಿಗೆ ಬಿಜೆಪಿ ಸರ್ಕಾರ ಸುಮಾರು ₹ 900 ಕೋಟಿ ಬಾಕಿ ಪಾವತಿಸಬೇಕಂತೆ. ಶಿಕ್ಷಣ ಸಚಿವರು ಶೇ 40 ಕಮಿಷನ್ ಲೆಕ್ಕ ಹಾಕುತ್ತಿರುವಂತೆ ಕಾಣುತ್ತಿದೆ. ಕಮಿಷನ್ ಎಂಬ ಸಾಂಕ್ರಾಮಿಕ ರೋಗ ಶಿಕ್ಷಣ ಇಲಾಖೆಯನ್ನೂ ರೋಗಗ್ರಸ್ತ ಗೊಳಿಸಿದೆ' ಎಂದೂ ಕಿಡಿಕಾರಿದ್ದಾರೆ.

'ಗುತ್ತಿಗೆದಾರರು ಸರ್ಕಾರದ ಶೇ 40 ಕಮಿಷನ್ ಬಗ್ಗೆ ಪ್ರಧಾನಿಗೆ ಬರೆದ ಪತ್ರಗಳಿಗೆ ಉತ್ತರ ಸಿಕ್ಕಿಲ್ಲ. ಈಗ ಖಾಸಗಿ ಶಾಲೆಗಳ ಆಡಳಿತವೂ ಪ್ರಧಾನಿಗೆ ಪತ್ರ ಬರೆದಿದೆಯಂತೆ. ಈ ಎಲ್ಲ ಪತ್ರಗಳ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿಯ ನಿಗಾದಲ್ಲಿ ನ್ಯಾಯಾಂಗ ತನಿಖೆಗೆ ಆದೇಶ ನೀಡಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ

(ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆಂಗಳೂರು ಜಲಮಂಡಳಿಯು, ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರವರ ಕಛೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
1.	ಈಶಾನ್ಯ	ಬೆಂಜಮಂ/ಕಾನಿಅ (ಈಶಾನ್ಯ)/ತಾಂಅ/ಪಿಬಿ/ 1014/2022-23 ದಿನಾಂಕ: 30-08-2022	ರೂ.24,59,041/- / ರೂ.50,000/-	26-09-2022 ಸಂಜೆ 4.00 ಗಂಟೆಯವರೆಗೆ	28-09-2022 ಮಧ್ಯಾಹ್ನ 3.00 ಗಂಟೆಯ ನಂತರ
2.	ಈಶಾನ್ಯ	ಬೆಂಜಮಂ/ಕಾನಿಅ (ಈಶಾನ್ಯ)/ತಾಂಅ/ಪಿಬಿ/ 1016/2022-23 ದಿನಾಂಕ: 30-08-2022	ರೂ.20,08,939/- / ರೂ.50,000/-	26-09-2022 ಸಂಜೆ 4.00 ಗಂಟೆಯವರೆಗೆ	28-09-2022 ಮಧ್ಯಾಹ್ನ 3.00 ಗಂಟೆಯ ನಂತರ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಗಳನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/-

DIPR/CP/AAPL/RO2061/22-23 ಕಾರ್ಯನಿರ್ವಾಹಕ ಅಭಿಯಂತರರು (ಈಶಾನ್ಯ)

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029. ಫೋನ್: 080-25536625/25536789

IFTNO. ಕಹಾಮ/ಅಭಿ/PMC/2022-23 ದಿನಾಂಕ: 03.09.2022

ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾ ಮಂಡಳಿದ ಗ್ರೂಪ್ ಕ್ಯಾಪ್ಟಿವ್ ಅಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಯೋಜನೆಯ ಉಸ್ತುವಾರಿಗೆ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ ಫರ್ಮ್ ಅನ್ನು ನೇಮಿಸಿಕೊಳ್ಳಲು ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ http://eproc.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ help desk ಇ-ಮೇಲ್; hphelpdesk.blr@intarvo.com ಮತ್ತು ಸಹಾಯವಾಣಿ ಸಂಖ್ಯೆ: 080-25501227/ 25501216 ಸಂಪರ್ಕಿಸಬಹುದಾಗಿದೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ ಸಂಖ್ಯೆ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	Providing Consultancy services for Project Management Consultancy Assignment to assist Karnataka Milk Producer's Cooperative Federation Limited to set up Group Captive Open Access Solar Power Project.	1 ಜಾಬ್	4,50,000/-	18 ತಿಂಗಳು (ಅನುಷ್ಠಾನ) & 24 ತಿಂಗಳು (ನಿರ್ವಹಣೆ)

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: ದಿ. 05.09.2022 ರಿಂದ 07.10.2022 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ದಿ. 07.10.2022 ರ ಸಾಯಂಕಾಲ 4:00 ಗಂಟೆಯವರೆಗೆ.
3. ಪ್ರಿ-ಬಿಡ್ ಸಭೆ ದಿನಾಂಕ 19.09.2022 ರ ಮಧ್ಯಾಹ್ನ 01.00 ಗಂಟೆಗೆ.
4. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: ದಿ. 10.10.2022 ರಂದು ಬೆಳಿಗ್ಗೆ 11:30 ಗಂಟೆಗೆ.

ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ/ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karantaka.gov.in ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ

ಸಹಿ/-

ನಿರ್ದೇಶಕರು (ಅಭಿಯಂತರ-2)

'ಆರೋಪಿಸುವ ಬದಲು ಸಾಬೀತುಪಡಿಸಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಸುರಕ್ಷತೆ ಹಾಗೂ ಮಕ್ಕಳ ಹಿತದ ಉದ್ದೇಶದಿಂದ ಕಟ್ಟಡ ಮತ್ತು ಅಗ್ನಿ ಸುರಕ್ಷತೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನ ಅನುಷ್ಠಾನದ ಅನಿವಾರ್ಯತೆ ನನ್ನ ಅಧಿಕಾರ ಅವಧಿಯಲ್ಲಿ ಎದುರಾಗಿತ್ತು. ಆಗ ಖಾಸಗಿ ಶಾಲೆಗಳಿಗೆ ಮಾರಕ ಆಗಬಾರದೆಂದು ಎಸ್.ವಿ.ಸಂಕನೂರ್ ನೇತೃತ್ವದಲ್ಲಿ ಸಮಿತಿ ರಚಿಸಿ ನಿಯಮಗಳನ್ನು ರೂಪಿಸಬೇಕೆಂದು ನಿರ್ದೇಶನ ನೀಡಿದ್ದೆ. ಅಲ್ಲಿಯವರೆಗೆ ನಿಗದಿತ ಅವಧಿ ಪೂರೈಸಿದ ಶಾಲೆಗಳ ನೋಂದಣಿ ನವೀಕರಣವನ್ನು ಒಂದು ವರ್ಷದ ಅವಧಿಗೆ ಮುಂದೂಡಲು ನಿರ್ದೇಶನ ನೀಡಿದ್ದೆ' ಎಂದು ಶಾಸಕ, ಮಾಜಿ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದ್ದಾರೆ.

'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ 'ಶಿಕ್ಷಣ:ಲಂಚವೇ 'ಭೂಷಣ'! ವರದಿಯಲ್ಲಿರುವ ಕೆಲವು ಅಂಶಗಳಿಗೆ ಸ್ಪಷ್ಟನೆ ನೀಡಿರುವ ಅವರು, 'ಖಾಸಗಿ ಶಾಲೆಗಳು ಇಲಾಖಾಧಿಕಾರಿಗಳ ಲಂಚಗುಳಿತನದ ಬಗ್ಗೆ ನನ್ನ ಗಮನಕ್ಕೆ ತಂದು ಪರಿಹಾರ ದೊರಕಿಸಬೇಕೆಂದು ಆಗ್ರಹಿಸಿದ್ದರು. ಆಗ ವಿವಿಧ ಇಲಾಖೆಗಳ ಮುಖ್ಯಸ್ಥರ, ಸಚಿವರ ಸಭೆ ನಡೆಸಿ, ಕೋವಿಡ್‌ನಂಥ ಪ್ರತಿಕೂಲ ಸಂದರ್ಭದಲ್ಲಿಯೂ ಏನು ಮಾಡಬಹುದೆಂದು ಚರ್ಚಿಸಿದ್ದೆ' ಎಂದಿದ್ದಾರೆ.

'ನೋಂದಣಿ ನವೀಕರಣ ಪ್ರಕ್ರಿಯೆಯನ್ನು ಕೇವಲ ಶಾಲೆಯ ವತಿಯಿಂದ ಸಲ್ಲಿಕೆಯಾಗುವ ಮುಚ್ಚಳಿಕೆ ಪರಿಗಣಿಸಿ ನಿರ್ವಹಿಸಬೇಕು. ಯಾವುದೇ ಶಾಲೆಯವರು ಇಲಾಖಾಧಿಕಾರಿಗಳನ್ನು ಅನವಶ್ಯಕವಾಗಿ ಭೇಟಿ ಮಾಡಬಾರದು ಎನ್ನುವ ಉದ್ದೇಶದಿಂದ ನೋಂದಣಿ ನವೀಕರಣ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ನಿರ್ವಹಿಸಬೇಕೆಂದು ಆದೇಶ ಮಾಡಿದ್ದೆ' ಎಂದಿದ್ದಾರೆ.

'ಖಾಸಗಿ ಶಾಲೆಗಳ ಆರೋಪವನ್ನು ಸ್ಥಿರೀಕರಿಸುವಾಗ ಸರ್ಕಾರ ತೆಗೆದುಕೊಂಡಿರುವ ಕ್ರಮಗಳನ್ನೂ ಅವಲೋಕಿಸಬೇಕಾಗುತ್ತದೆ. ಶಾಲೆಗಳ ಆಡಳಿತ ಮಂಡಳಿಗಳು ಸುಖಾಸುಮ್ಮನೇ ಆರೋಪಿಸುವ ಬದಲು ದಾಖಲೆಗಳನ್ನು ಸಲ್ಲಿಸಿ, ಸಾಬೀತು ಮಾಡಬೇಕಾಗುತ್ತದೆ' ಎಂದು ಹೇಳಿದ್ದಾರೆ.

'ಮೋದಿಯಿಂದ ಭಯ ಬಿತ್ತನೆ'

ಒಂದನೇ ಪುಟದಿಂದ..

'ದ್ವೇಷವು ಭಯದ ಒಂದು ರೂಪ. ಯಾವುದಾದರೂ ಭಯವಿದ್ದರೆ ಮಾತ್ರ ದ್ವೇಷ ಉಂಟಾಗುತ್ತದೆ. ದೇಶದ ಬಡವರಲ್ಲಿ, ಯುವಜನರಲ್ಲಿ, ಕಾರ್ಮಿಕರಲ್ಲಿ ಭವಿಷ್ಯದ ಭಯ ಕಾಡುತ್ತಿದೆ. ಬೆಲೆ ಏರಿಕೆ ಅವರನ್ನು ಹೆದರಿಸುತ್ತಿದೆ ಮತ್ತು ನಿರುದ್ಯೋಗದ ಭಯವೂ ಅವರನ್ನು ಕಾಡುತ್ತಿದೆ. ಆ ಭಯವೆಲ್ಲಾ ದ್ವೇಷ ಮತ್ತು ಕ್ರೋಧವಾಗಿ ಬದಲಾಗಿದೆ. ದೇಶದ ಇಬ್ಬರು ದೊಡ್ಡ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡಲು ಬಿಜೆಪಿ ಸರ್ಕಾರವು ಈ ರೀತಿಯ ಭಯವನ್ನು ಸೃಷ್ಟಿಸಿದೆ' ಎಂದು ರಾಹುಲ್ ಅವರು ಆರೋಪಿಸಿದ್ದಾರೆ.

'ನರೇಂದ್ರ ಮೋದಿ ನೇತೃತ್ವದ ಸರ್ಕಾರದ ನೀತಿಗಳಿಂದಾಗಿ ಇಬ್ಬರು ಉದ್ಯಮಿಗಳಿಗಷ್ಟೇ ಅನುಕೂಲವಾಗುತ್ತಿದೆ. ಹೀಗಾಗಿ ಆ ಉದ್ಯಮಿಗಳು ಏನು ಬೇಕು ಎಂದು ಬಯಸುತ್ತಾರೋ ಅವೆಲ್ಲವೂ ಅವರಿಗೆ ಸಿಗುತ್ತಿದೆ. ದೇಶದ ವಿಮಾನ ನಿಲ್ದಾಣಗಳು, ಬಂದರು ಗಳು, ದೂರಸಂಪರ್ಕ ಕ್ಷೇತ್ರ, ರಸ್ತೆ-ಹೆದ್ದಾರಿಗಳು ಎಲ್ಲವೂ ಆ ಇಬ್ಬರು ಉದ್ಯಮಿಗಳ ತೆಕ್ಕೆಯಲ್ಲಿವೆ. ಬೇರೆ ಸಣ್ಣ-ಪುಟ್ಟ ಉದ್ಯಮಿಗಳಿಗೆ ಅವಕಾಶವೇ ಇಲ್ಲದಂತಾಗಿದೆ' ಎಂದು ರಾಹುಲ್ ದೂರಿದ್ದಾರೆ.

'ಇಬ್ಬರ ನಿಯಂತ್ರಣದಲ್ಲಿ ಮೋದಿ'

ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇಶದ ಇಬ್ಬರು ದೊಡ್ಡ ಉದ್ಯಮಿಗಳು ನಿಯಂತ್ರಿಸುತ್ತಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

'ಆ ಇಬ್ಬರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಹೀಗಾಗಿ ಮೋದಿ ಅವರನ್ನು ಆ ಇಬ್ಬರು ನಿಯಂತ್ರಿಸುತ್ತಿದ್ದಾರೆ. ಆ ಇಬ್ಬರ ಬೆಂಬಲವಿಲ್ಲದೆ ಮೋದಿ ಅವರು ಪ್ರಧಾನಿ ಹುದ್ದೆಯಲ್ಲಿ ಒಂದು ಕ್ಷಣವೂ ಉಳಿಯುವುದಿಲ್ಲ. ಹೀಗಾಗಿ ಮೋದಿ ಅವರು ಆ ಉದ್ಯಮಿಗಳಿಗಾಗಿ ದಿನದ 24 ಗಂಟೆಯೂ ದುಡಿಯುತ್ತಿದ್ದಾರೆ' ಎಂದು ರಾಹುಲ್ ಲೇವಡಿ ಮಾಡಿದ್ದಾರೆ.

ದೇಶದ ಎಲ್ಲಾ ಸುದ್ದಿವಾಹಿನಿಗಳೂ ಈ ಇಬ್ಬರು ಉದ್ಯಮಿಗಳ ತೆಕ್ಕೆಯಲ್ಲಿವೆ. ಹೀಗಾಗಿ ಯಾವ ಸುದ್ದಿವಾಹಿನಿಯೂ ಈ ಸತ್ಯವನ್ನು ತೋರಿಸುವುದಿಲ್ಲ. ಜನರ ಸಮಸ್ಯೆಗಳ ಬಗ್ಗೆ ಸಂಸತ್ತಿನಲ್ಲಿ ಮಾತನಾಡಲು ಸರ್ಕಾರವು ವಿರೋಧ ಪಕ್ಷಗಳಿಗೆ ಅವಕಾಶ ಮಾಡಿಕೊಡುತ್ತಿಲ್ಲ. ಜತೆಗೆ ಮಾಧ್ಯಮಗಳೂ ನಮ್ಮ ಮಾತಿಗೆ ಅವಕಾಶ ನೀಡುತ್ತಿಲ್ಲ. ಹೀಗಾಗಿ ನಾವು ಜನರ ಮಧ್ಯೆ ಬರಬೇಕಾಗಿದೆ ಎಂದು ಎಂದಿದ್ದಾರೆ.

ಜನರಿಗೆ ಈ ಸತ್ಯಗಳನ್ನು ಅರ್ಥಮಾಡಿಸಲು ಕಾಂಗ್ರೆಸ್ ಮತ್ತು ಉಳಿದ ಎಲ್ಲಾ ವಿರೋಧ ಪಕ್ಷಗಳಿಗೆ ಉಳಿದಿರುವ ಏಕೈಕ ಮಾರ್ಗವಿದು ಎಂದು ಅವರು ಹೇಳಿದ್ದಾರೆ.

'2014ರಲ್ಲಿ ಎಲ್‌ಪಿಜಿ ಸಿಲಿಂಡರ್ ಬೆಲೆ ₹450 ಇತ್ತು, ಈಗ ಅದು ₹1,050ಕ್ಕೆ ಏರಿದೆ. ಪೆಟ್ರೋಲ್, ಡೀಸೆಲ್, ಅಕ್ಕಿ-ಬೇಳೆ ಎಲ್ಲದರ ಬೆಲೆ ಹೆಚ್ಚಾಗಿದೆ. ದೇಶದ ಜನರು ಒಂದೆಡೆ ನಿರುದ್ಯೋಗ, ಮತ್ತೊಂದೆಡೆ ಬೆಲೆ ಏರಿಕೆಯಿಂದ ಕಂಗೆಟ್ಟಿದ್ದಾರೆ. ಕಾಂಗ್ರೆಸ್ 70 ವರ್ಷಗಳಲ್ಲಿ ಏನು ಮಾಡಿದೆ ಎಂದು ಮೋದಿ ಸದಾ ಪ್ರಶ್ನಿಸುತ್ತಿರುತ್ತಾರೆ. ಕಾಂಗ್ರೆಸ್ 70 ವರ್ಷಗಳಲ್ಲಿ ಇಷ್ಟು ದೊಡ್ಡ ಪ್ರಮಾಣದ ಬೆಲೆ ಏರಿಕೆಯನ್ನಂತೂ ಮಾಡಿರಲಿಲ್ಲ ಎಂದು ಹೇಳಲು ಬಯಸುತ್ತೇನೆ' ಎಂದು ರಾಹುಲ್ ತಿರುಗೇಟು ನೀಡಿದ್ದಾರೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಗುಂಪು ಚರ್ಚೆಯ ಗಮ್ಮತ್ತು

ಅರವಿಂದ ಚೊಕ್ಕಾಡಿ

ಗುಂಪು ಚರ್ಚೆ ಅಥವಾ ಜೊತೆಯಾಗಿ ಮಾಡುವ ಅಧ್ಯಯನಗಳು (ಗ್ರೂಪ್ ಸ್ಟಡಿ) ಗಮ್ಮತ್ತಿನಲ್ಲಿ (ಸ್ವಾರಸ್ಯ) ಕಲಿಕೆಯನ್ನು ಮುಂದುವರಿಸಲು ಸಹಾಯಕವಾಗುತ್ತವೆ. ಆದರೆ ಅದನ್ನು ನಿರ್ವಹಿಸುವ ವಿಧಾನ ತಿಳಿದುಕೊಂಡರೆ ಶಾಲಾ, ಕಾಲೇಜು, ಸಂಶೋಧನಾ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ಗುಂಪು ಚರ್ಚೆಯಲ್ಲಿ 3 ರಿಂದ 6 ವಿದ್ಯಾರ್ಥಿಗಳಿರಲಿ. ದೊಡ್ಡ ಗುಂಪಾಗಿ 30 ರಿಂದ 40 ಮಂದಿ ಸೇರಿಕೊಂಡರೆ ಕಲಿಕೆ ಪರಿಣಾಮಕಾರಿಯಾಗುವುದಿಲ್ಲ. ಈ ವಿಧಾನದ ಚರ್ಚೆಯಲ್ಲಿ ಕೆಲವು ಹುಡುಗರೂ, ಕೆಲವು ಹುಡುಗಿಯರೂ ಇರುವುದು ಕಲಿಕಾ ಗಾಂಭೀರ್ಯದ ದೃಷ್ಟಿಯಿಂದ ಸಹಾಯಕ. ಕೇವಲ ಹುಡುಗರು ಅಥವಾ ಹುಡುಗಿಯರಷ್ಟೇ ಇದ್ದರೆ ಚರ್ಚೆ ಪಠ್ಯ ವಿಷಯದ ಆಚೆಗೆ ಹೋಗುವ ಅವಕಾಶ ಹೆಚ್ಚು. ಕೇವಲ ಹುಡುಗರು, ಕೇವಲ ಹುಡುಗಿಯರು ಇದ್ದಾಗಲೂ ಕಲಿಕೆಯನ್ನೇ ಕೇಂದ್ರೀಕರಿಸುತ್ತೇವೆ ಎನ್ನುವ ಆತ್ಮವಿಶ್ವಾಸವಿದ್ದರೆ ಆಗ ಹಾಗೆ ಗುಂಪು ಚರ್ಚೆಯನ್ನು ಮಾಡಬಹುದು. ಗುಂಪನ್ನು ನಿರ್ವಹಿಸಲು ವಾರಕ್ಕೊಬ್ಬ ನಾಯಕ/ನಾಯಕಿ ಮಾಡಿಕೊಳ್ಳಬೇಕು. ಎಲ್ಲ ಸದಸ್ಯರಿಗೂ ನಾಯಕತ್ವ ಸಿಗುವ ಹಾಗೆ ಆಗಬೇಕು.

ಗುಂಪು ಚರ್ಚೆ ವಿಧಾನಗಳು

ಹಲವಾರು ವಿಧಾನಗಳಲ್ಲಿ ಗುಂಪು ಚರ್ಚೆ ಮಾಡಬಹುದು. ವಿಧಾನವು ಅಧ್ಯಯನದ ಉದ್ದೇಶವನ್ನು ಅವಲಂಬಿಸಿರುತ್ತದೆ. ನಿಜವಾಗಿ ಕಲಿಕೆಯ ಸಾರ್ಥಕತೆ ಕಲಿಕಾ ದೃಢೀಕರಣದಲ್ಲಿರುತ್ತದೆ. ಒಮ್ಮೆ ಕಲಿತ ಕೂಡಲೇ ಕಲಿಕೆ ಯಶಸ್ವಿಯಾಯಿತೆಂದು ಅರ್ಥವಲ್ಲ. ಕಲಿತದ್ದು ಮನಸ್ಸಿನಲ್ಲಿ ಉಳಿಯಬೇಕು. ಅದಾಗಬೇಕಾದರೆ ಕಲಿತದ್ದನ್ನು ಹಲವು ಬಾರಿ ಪುನರಾವರ್ತನೆ ಮಾಡಿ ದೃಢೀಕರಣ ಮಾಡಿಕೊಳ್ಳಬೇಕಾಗುತ್ತದೆ. ಈ ಅಂಶವನ್ನೂ ಗಮನದಲ್ಲಿರಿಸಿಕೊಂಡು ಸೂಚಿಸಬಹುದಾದ ಗುಂಪು ಚರ್ಚೆಯ ಕೆಲವು ವಿಧಾನಗಳು ಹೀಗಿವೆ.

> ಓದಿದ್ದಕ್ಕಿಂತ ಕೇಳಿದ್ದು, ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಕೇಳಿಸಿಕೊಂಡಿದ್ದು ದೀರ್ಘ ಕಾಲ ನೆನಪಿನಲ್ಲಿ ಉಳಿಯುತ್ತದೆ. ಈ ವಿಧಾನದ ಕಲಿಕೆಗೆ ಗುಂಪು ಚರ್ಚೆ (ಗ್ರೂಪ್ ಸ್ಟಡಿ) ಸಹಕಾರಿ.

1. ಪಠ್ಯ ವಿವರಣೆ

ನಾಲ್ಕು ವಿದ್ಯಾರ್ಥಿಗಳ ಒಂದು ಗುಂಪು, ನಾಲ್ಕು ಪುಟಗಳ ಪಾಠವಿದೆ ಎಂದಾದರೆ, ಒಬ್ಬೊಬ್ಬ ವಿದ್ಯಾರ್ಥಿ ಪಾಠದ ಒಂದೊಂದು ಪುಟವನ್ನು ತೆಗೆದುಕೊಂಡು ಅಧ್ಯಯನ ಮಾಡಬೇಕು. ಮರುದಿನ ಗುಂಪು ಅಧ್ಯಯನಕ್ಕೆ ಸೇರಿದಾಗ ಪ್ರತಿಯೊಬ್ಬರೂ ತನ್ನ ಪುಟದ ವಿಷಯವನ್ನು ಇತರರಿಗೆ ವಿವರಿಸಬೇಕು. ಇತರರು ತಮಗೆ ಅರ್ಥವಾಗದ ವಿಷಯಗಳನ್ನು ಕೇಳಬೇಕು. ವಿವರಣೆ ಕೊಟ್ಟವರು ಆ ಪ್ರಶ್ನೆಗಳಿಗೆ ಉತ್ತರಿಸಬೇಕು. ಇದರಿಂದ ಓದುವ ಕೆಲಸ ಕಡಿಮೆ ಯಾಗುತ್ತದೆ ಮತ್ತು ಓದಿದ್ದಕ್ಕಿಂತ ಕೇಳಿದ್ದು ಹೆಚ್ಚು ಚೆನ್ನಾಗಿ ನೆನಪುಳಿಯುತ್ತದೆ. ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಹೆಚ್ಚು ಓದಬೇಕಾದ ಅಗತ್ಯವಿರುವ ಕಾಲೇಜು ವಿದ್ಯಾರ್ಥಿಗಳಿಗೆ ಈ ವಿಧಾನವು ಹೆಚ್ಚು ಸಹಾಯಕವಾಗಿದೆ.

2. ಪ್ರಶ್ನೋತ್ತರಗಳು

ಗುಂಪಿನ ಎಲ್ಲ ಸದಸ್ಯರು ತಾವು ಅಭ್ಯಾಸ ಮಾಡಲಿರುವ ಪಠ್ಯ ಭಾಗವನ್ನು ನಿರ್ಧರಿಸಬೇಕು. ನಂತರ ಆ ಪಾಠದಲ್ಲಿ ಬರಬಹುದಾದ ಪ್ರಶ್ನೆಗಳನ್ನು ರಚಿಸಿಕೊಳ್ಳಬೇಕು. ಆ ಪ್ರಶ್ನೆಗಳಿಗೆ ಉತ್ತರಗಳನ್ನು ತಿಳಿದುಕೊಂಡಿರಬೇಕು. ನಂತರ ಗುಂಪಿನ ಮೊದಲನೆಯ ಸದಸ್ಯ/ಸ್ಯೆ ಪ್ರಶ್ನೆಯನ್ನು ಕೇಳಬೇಕು. ಅದಕ್ಕೆ ಎರಡನೆಯ ಸದಸ್ಯ/ಸ್ಯೆ ಉತ್ತರಿಸಬೇಕು. ಉತ್ತರಿಸಿದ ಸದಸ್ಯರಿಗೆ 5 ಅಂಕ ಎಂದು ನಿರ್ಧರಿಸಬೇಕು. ಉತ್ತರಿಸದೆ ಇದ್ದರೆ ನಂತರದ ಸದಸ್ಯ/ಸ್ಯೆಗೆ ಪ್ರಶ್ನೆ ವರ್ಗಾವಣೆಯಾಗುತ್ತದೆ. ಅವರೂ ಉತ್ತರಿಸದಿದ್ದರೆ ಪ್ರಶ್ನೆ ಮೂರನೆಯ ಸದಸ್ಯ/ಸ್ಯೆಗೆ ವರ್ಗಾವಣೆಯಾಗುತ್ತದೆ. ಯಾರೂ ಉತ್ತರಿಸದೆ ಇದ್ದರೆ ಪ್ರಶ್ನೆ ಕೇಳಿದವರೇ ಉತ್ತರಿಸಬೇಕು. 5 ಅಂಕ ಅವರದಾಗುತ್ತದೆ. ನಂತರ ಎರಡನೆಯ ಸದಸ್ಯ/ಸ್ಯೆ ಪ್ರಶ್ನೆ ಕೇಳಬೇಕು. ಇದು ಪರೀಕ್ಷೆಯಲ್ಲಿ ಯಾವ ಪ್ರಶ್ನೆ ಹೇಗೆ ಕೇಳಿದರೆ ಹೇಗೆ ಉತ್ತರಿಸಬೇಕು ಎಂದು ಅರಿಯಲು, ತನ್ನ ಅಧ್ಯಯನ ಎಷ್ಟು ಸಮರ್ಥವಾಗಿದೆ ಎಂದು ಪ್ರತಿಯೊಬ್ಬರೂ ಅರ್ಥ ಮಾಡಿಕೊಂಡು ದೋಷವಿರುವುದನ್ನು ಹೆಚ್ಚು ಅಧ್ಯಯನ ಮಾಡಲು, ಕಲಿಕಾ ದೃಢೀಕರಣ ಮಾಡಿಕೊಳ್ಳಲು ಸಹಾಯಕ.

3. ಸರಣಿ ಪ್ರಶ್ನೆಗಳು

ಮೇಲೆ ಪಠ್ಯ ವಿವರಣೆಯಲ್ಲಿ ಹೇಳಿದ್ದಂತೆ ಗುಂಪು ರಚಿಸಿಕೊಂಡು, ಪಾಠವನ್ನು ಹಂಚಿಕೊಳ್ಳಬೇಕು. ಚರ್ಚೆಗೆ ಮೊದಲು ಎಲ್ಲರೂ ನಾಲ್ಕು ಪುಟಗಳನ್ನು ಓದಿಕೊಂಡಿರಬೇಕು. ಹಂಚಿಕೆಯಾಗಿರುವ ಪುಟದಿಂದ ಒಂದು ವಾಕ್ಯದ ಉತ್ತರದ ಪ್ರಶ್ನೆಯನ್ನು ಮಾತ್ರ ತೆಗೆಯಬೇಕು ಅಥವಾ ಯೋಚಿಸಿರಬೇಕು. ಈ ಪ್ರಶ್ನೆಗಳು ಆ ಪುಟದಲ್ಲಿನ ಎಲ್ಲ ವಿಷಯಗಳೂ ಒಂದಕ್ಕೊಂದು ಪೋಣಿಸಲ್ಪಟ್ಟ ಹಾಗೆ ಇರಬೇಕು. ಪ್ರಶ್ನೆ ಕೇಳಿದಾಗ ಎರಡನೇ ಸದಸ್ಯ/ ಸದಸ್ಯೆ ಉತ್ತರಿಸಬೇಕು. ಉತ್ತರಿಸಿದರೆ ಅವರಿಗೆ ಒಂದು ಅಂಕ. ಉತ್ತರಿಸದಿದ್ದರೆ ನಂತರದವರಿಗೆ ವರ್ಗಾವಣೆ. ಯಾರೂ ಉತ್ತರಿಸದಿದ್ದರೆ ಪ್ರಶ್ನೆ ಕೇಳಿದವರೇ ಉತ್ತರಿಸಬೇಕು. ಆದರೆ ಉತ್ತರಿಸುವಾಗ ಇಲ್ಲಿ ಪುಸ್ತಕವನ್ನು ತೆರೆದಿಟ್ಟುಕೊಳ್ಳಬಹುದು. ಉತ್ತರಿಸಲು ಸಮಯಾವಕಾಶ ಕೊಡುವಂತಿಲ್ಲ. ಪ್ರಶ್ನೆ ಕೇಳಿದ ಕೂಡಲೇ ಉತ್ತರ ಹೇಳಬೇಕು. ಈ ವಿಧಾನವು ಇಡೀ ಪಾಠವನ್ನು ಸಮಗ್ರವಾಗಿ ಅರ್ಥ ಮಾಡಿಕೊಂಡು ನೆನಪಿಟ್ಟುಕೊಳ್ಳಲು ಸಹಾಯಕ.

4. ಕ್ಲಿಷ್ಟ ಪರಿಕಲ್ಪನೆಗಳ ಗುಂಪು ಅಧ್ಯಯನ

ಪಾಠದಲ್ಲಿರುವ ಕ್ಲಿಷ್ಟ ಪರಿಕಲ್ಪನೆಗಳನ್ನು ಗುರುತು ಹಾಕಿಕೊಳ್ಳಬೇಕು. ಈ ಪರಿಕಲ್ಪನೆಗಳನ್ನು ವಿವರಿಸಬಲ್ಲ ಗುಂಪಿನ ಸದಸ್ಯರು, ಇವುಗಳನ್ನು ಹಂಚಿಕೆ ಮಾಡಿಕೊಳ್ಳಬೇಕು. ಚರ್ಚೆಗೆ ಸೇರಿದಾಗ ತಮ್ಮ ತಮ್ಮ ಪರಿಕಲ್ಪನೆಗಳನ್ನು ಉಳಿದವರಿಗೆ ವಿವರಿಸಬೇಕು. ಅದರ ಬಗ್ಗೆ ಸಂಶಯ ಉಳ್ಳವರು ಕೇಳಿ ಪರಿಹರಿಸಿಕೊಳ್ಳಬೇಕು. ಈ ವಿಧಾನದಲ್ಲಿ ಅನಗತ್ಯವಾಗಿ ಪೋಲಾಗುವ ಸಮಯ, ಶ್ರಮ ಎರಡೂ ಉಳಿಯುತ್ತದೆ. ಹೆಚ್ಚು ಪರಿಕಲ್ಪನೆಗಳನ್ನು ಅಧ್ಯಯನ ಮಾಡಬೇಕಾದ ಕಾಲೇಜು ವಿದ್ಯಾರ್ಥಿಗಳಿಗೆ ಇದು ಅನುಕೂಲ.

5. ಉತ್ತರ ಅಭ್ಯಾಸ

ಈ ವಿಧಾನದಲ್ಲಿ ಗುಂಪಿನ ಸದಸ್ಯರು ಇಬ್ಬಿಬ್ಬರಾಗಿ ವಿಂಗಡಣೆ ಆಗಬೇಕು. ಇದರಲ್ಲಿ ಉತ್ತರದ ಅಭ್ಯಾಸ ಮಾತ್ರ ನಡೆಯುತ್ತದೆ. ಗುಂಪು ಸೇರುವ ಮೊದಲು ಉತ್ತರಗಳನ್ನು ಕಲಿತು ಬಂದಿರಬೇಕು. ಉತ್ತರ ಕೊಡುವರು ಪುಸ್ತಕವನ್ನು ಮುಚ್ಚಿರಬೇಕು. ಒಬ್ಬರು ಪ್ರಶ್ನೆ ಕೇಳುವುದು, ಮತ್ತೊಬ್ಬರು ಉತ್ತರಿಸುವುದು, ಇದು ಮುಗಿದ ಮೇಲೆ ಉತ್ತರಿಸಿದವರು ಪ್ರಶ್ನೆ ಕೇಳುವುದು, ಪ್ರಶ್ನಿಸಿದವರು ಉತ್ತರ ಹೇಳುವುದು ನಡೆಯಬೇಕು. ಉತ್ತರ ಗೊತ್ತಿಲ್ಲದಿದ್ದರೆ ಪ್ರಶ್ನೆ ಕೇಳಿದವರೇ ಉತ್ತರ ಹೇಳಿ ಉತ್ತರಿಸುವ ವರಿಗೆ ಮನದಟ್ಟು ಮಾಡಬೇಕು. ಕೇವಲ ಪರೀಕ್ಷೆಗಾಗಿ ಈ ವಿಧಾನ ಬಹಳ ಪರಿಣಾಮಕಾರಿಯಾಗಿರುತ್ತದೆ.

ಒಟ್ಟಾರೆ ಓದಿದ್ದಕ್ಕಿಂತ ಕೇಳಿದ್ದು, ತಾವೇ ತೊಡಗಿಕೊಂಡು ಕೇಳಿಸಿಕೊಂಡದ್ದು ಚೆನ್ನಾಗಿ ನೆನಪಿನಲ್ಲಿ ಉಳಿಯುತ್ತದೆ. ಈ ಹಿನ್ನೆಲೆಯಲ್ಲಿ ಗುಂಪು ಚರ್ಚೆಗಳು ಅಧ್ಯಯನಕ್ಕೆ ಸಹಾಯಕವಾಗಿವೆ.

6. ಮುಕ್ತ ಚರ್ಚೆ

ಇದರಲ್ಲಿ ಗುಂಪು ಸೇರಿದಾಗ ಪಠ್ಯ ವಸ್ತು ಮತ್ತು ಪಠ್ಯಕ್ಕೆ ಸಂಬಂಧಿಸಿದ ಮತ್ತು ಸಂಬಂಧಿಸದ ಅಧ್ಯಯನ ಯೋಗ್ಯವಾದ ಯಾವುದೇ ವಿಷಯದ ಬಗ್ಗೆ ಚರ್ಚೆ ನಡೆಸಬಹುದು. ಒಂದು ವಿಷಯಕ್ಕೆ ಹಲವು ದೃಷ್ಟಿಕೋನಗಳಿಂದ ಪ್ರತಿಯೊಬ್ಬರೂ ಉತ್ತರಿಸಬೇಕು. ಇದು ಕಲಿಕೆಯ ವ್ಯಾಪ್ತಿಯನ್ನು ವಿಸ್ತರಿಸಲು, ಬಹುಮುಖಿ ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು, ಕಲಿಕಾ ದಕ್ಷತೆಯನ್ನು ಕಾಪಾಡಿಕೊಳ್ಳಲು ಅನುಕೂಲ. ಪದವಿ, ಸ್ನಾತಕೋತ್ತರ ಪದವಿ, ಐ.ಎ.ಎಸ್, ಕೆ.ಎ.ಎಸ್. ವಿದ್ಯಾರ್ಥಿಗಳಿಗೆಲ್ಲ ಈ ವಿಧಾನದ ಚರ್ಚೆಯು ಬಹಳ ಉಪಯುಕ್ತವಾಗಿದೆ.

ಅಪರಾಧಶಾಸ್ತ್ರ, ಫೊರೆನ್ಸಿಕ್ ಸೈನ್ಸ್‌ಗೆ ಬೇಡಿಕೆ ಇದೆಯೇ ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಬಿ.ಎಸ್ಸಿ ಪದವಿ ಮುಗಿಸಿ ಎಂ.ಎಸ್ಸಿ ಅಪರಾಧ ಶಾಸ್ತ್ರ ಮತ್ತು ವಿಧಿ ವಿಜ್ಞಾನ ಓದುತ್ತಿದ್ದೇನೆ. ಈ ವಿಷಯಗಳ ಕುರಿತ ಅವಕಾಶಗಳ ಬಗ್ಗೆ ತಿಳಿಸಿ.

ಊರು, ಹೆಸರು ತಿಳಿಸಿಲ್ಲ.

ಅಪರಾಧ ಶಾಸ್ತ್ರ ಮತ್ತು ವಿಧಿ ವಿಜ್ಞಾನ (ಫೊರೆನ್ಸಿಕ್ ಸೈನ್ಸ್) ಎರಡೂ ಬೇಡಿಕೆಯಲ್ಲಿರುವ ಕ್ಷೇತ್ರಗಳು. ಈ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಬೇಕಾಗುವ ಕೌಶಲಗಳೆಂದರೆ ತಾರ್ಕಿಕ ಯೋಚನಾ ಶಕ್ತಿ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ವಿವರಗಳ ಕಡೆ ಗಮನ, ಒತ್ತಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ, ಸಮಯದ ನಿರ್ವಹಣೆ ಇತ್ಯಾದಿ.

ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳಲ್ಲಿ ವೃತ್ತಿಯನ್ನು ಅರಸಬಹುದು.

2. ನಾನು ಬಿಎ ಪದವಿಯ ಅಂತಿಮ ವರ್ಷದ ವಿದ್ಯಾರ್ಥಿ. ಮುಂದೆ ಎಂಬಿಎ ಮತ್ತು ಎಂಎ ಕೋರ್ಸ್‌ಗಳಲ್ಲಿ ಯಾವುದನ್ನು ಆಯ್ಕೆ ಮಾಡಬೇಕು ಎಂದು ಗೊತ್ತಾಗುತ್ತಿಲ್ಲ. ಸಲಹೆ ನೀಡಿ.

ಊರು, ಹೆಸರು ತಿಳಿಸಿಲ್ಲ.

ಎಂಬಿಎ ಮತ್ತು ಎಂಎ ಕೋರ್ಸ್ ನಂತರದ ಉದ್ಯೋಗಾವಕಾಶಗಳ ಸ್ವರೂಪ ಸಂಪೂರ್ಣವಾಗಿ ವಿಭಿನ್ನ. ನಿಮ್ಮ ವಿದ್ಯಾಭ್ಯಾಸದ ನಂತರ ಯಾವ ವೃತ್ತಿಯನ್ನು ಅನುಸರಿಸಬೇಕು ಎನ್ನುವುದನ್ನು ಗುರುತಿಸಿ, ಅದಕ್ಕೆ ಅನುಗುಣವಾಗಿ ಕೋರ್ಸ್ ಆಯ್ಕೆ ಇರಲಿ.

ಎಂಎ ಮಾಡುವುದಕ್ಕೆ ಸೂಕ್ತವಾದ ಕಾರಣಗಳಿಲ್ಲದಿದ್ದರೆ ಹೆಚ್ಚಿನ ಉದ್ಯೋಗಾವಕಾಶಗಳಿರುವ ಎಂಬಿಎ ಕೋರ್ಸ್ ಮಾಡುವುದು ಉತ್ತಮ. ಎಂಬಿಎ ಕೋರ್ಸ್‌ನಲ್ಲಿ ಕಲಿಸುವ ತತ್ವಗಳು, ಸೂತ್ರಗಳು ವೈಯಕ್ತಿಕ ಜೀವನದಲ್ಲೂ ಉಪಯುಕ್ತ. ಎಂಬಿಎ ನಂತರ ಆಕರ್ಷಕ ಅವಕಾಶಗಳಿವೆ. ಐ.ಟಿ, ಬ್ಯಾಂಕಿಂಗ್, ಫೈನಾನ್ಸ್, ಇನ್ವೆಸ್ಟ್‌ಮೆಂಟ್, ಇನ್ಶೂರೆನ್ಸ್, ರೀಟೇಲ್, ಮಾರ್ಕೆಟಿಂಗ್, ಎಫ್‌ಎಂಜಿಸಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ನೀವು ವೃತ್ತಿಯನ್ನು ಅರಸಬಹುದು ಅಥವಾ ಸ್ವಂತ ಉದ್ಯಮವನ್ನು ಆರಂಭಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/c/EducationalExpertManagementCareerConsultant

3. ನಮ್ಮ ಸಂಬಂಧಿಕರ ಮಗಳೊಬ್ಬರು ಮಹಾರಾಷ್ಟ್ರದಲ್ಲಿ ಪಿಯುಸಿ ಮಾಡುತ್ತಿದ್ದು ಮುಂದಿನ ವ್ಯಾಸಂಗವನ್ನು ಕರ್ನಾಟಕದಲ್ಲಿ ಮುಂದುವರಿಸುವ ಇಚ್ಛೆ ಇದೆ. ಅವಳು ಕರ್ನಾಟಕದ ಕಾಲೇಜುಗಳಲ್ಲಿ ಹೇಗೆ ಪ್ರವೇಶ ಪಡೆಯಬಹುದು? ಮುಂದೆ ಕರ್ನಾಟಕದಲ್ಲಿ ಉದ್ಯೋಗ ಪಡೆಯಬಹುದೇ?

ಮಲ್ಲಿಕಾರ್ಜುನ್ ಬಿಜ್ಜರಗಿ, ಅಥಣಿ.

ಪಿಯುಸಿ ನಂತರ ಯಾವ ಕೋರ್ಸ್ ಮಾಡಬೇಕು ಎನ್ನುವ ಮಾಹಿತಿಯನ್ನು ನೀವು ತಿಳಿಸಿಲ್ಲ. ಏಕೆಂದರೆ, ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶದ ನಿಯಮಾವಳಿಗಳಲ್ಲಿ ವ್ಯತ್ಯಾಸಗಳಿವೆ. ಉದಾಹರಣೆಗೆ, ಎಂಬಿಬಿಎಸ್ ಕೋರ್ಸ್ ಮಾಡಲು ಕರ್ನಾಟಕದ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕರ್ನಾಟಕದ ನಿವಾಸಿಗಳಿಗಿರುವ ಕೋಟಾದ (ಶೇ 85) ಅಡಿಯಲ್ಲಿ ಪ್ರವೇಶ ಸಿಗುವ ಸಾಧ್ಯತೆಯಿಲ್ಲ. ಹಾಗಾಗಿ, ಅಖಿಲ ಭಾರತ ಕೋಟಾದ (ಶೇ 15) ಅಡಿಯಲ್ಲಿ ಅರ್ಜಿ ಸಲ್ಲಿಸಿ, ಕರ್ನಾಟಕದಲ್ಲಿ ಎಂಬಿಬಿಎಸ್ ಮಾಡಬಹುದು. ಆದರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ (ವೈದ್ಯಕೀಯ ಅಥವಾ ಎಂಜಿನಿಯರಿಂಗ್) ಪ್ರವೇಶ ಪಡೆಯಬಹುದು.

ಪ್ರಮುಖವಾಗಿ, ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯ ಅನುಸಾರ ವೃತ್ತಿ ಯೋಜನೆಯನ್ನು ಮಾಡಿ ಅದರ ಅನುಸಾರ ಕೋರ್ಸ್ ಆಯ್ಕೆ ಮಾಡಿದರೆ, ಮುಂದಿನ ಹಾದಿ ಸ್ಪಷ್ಟವಾಗುತ್ತದೆ. ವಿದ್ಯಾಭ್ಯಾಸವನ್ನು ಎಲ್ಲಿ ಮುಗಿಸಿದರೂ ಸಹ, ಕರ್ನಾಟಕ ಸೇರಿದಂತೆ ಯಾವ ರಾಜ್ಯದಲ್ಲಿ ಬೇಕಾದರೂ ಉದ್ಯೋಗವನ್ನು ಅರಸಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ https://www.prajavani.net/education-career ಜಾಲತಾಣಕ್ಕೆ ಭೇಟಿ ನೀಡಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎಲ್‌ಐಸಿ ಎಚ್‌ಎಫ್‌ಎಲ್ ವಿದ್ಯಾದಾನ್ ಸ್ಕಾಲರ್‌ಷಿಪ್ 2022

ವಿವರ: ಎಲ್‌ಐಸಿ ಎಚ್‌ಎಫ್‌ಎಲ್ 11ನೇ ತರಗತಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಮುಂದುವರಿಸುವ ವಿದ್ಯಾರ್ಥಿಗಳಿಗೆ ನೆರವಾಗಲು ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಕಡಿಮೆ ಆದಾಯ ಮತ್ತು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಕುಟುಂಬದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮೀಸಲಿಡಲಾಗಿದೆ.

ಅರ್ಹತೆ: ಪ್ರಸ್ತುತ 11ನೇ ತರಗತಿ ಮತ್ತು ಮೊದಲ ವರ್ಷದ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 3.60 ಲಕ್ಷಕ್ಕಿಂತ ಹೆಚ್ಚಿರಬಾರದು.

ಆರ್ಥಿಕ ನೆರವು: ₹20,000ದ ವರೆಗೆ

ಅರ್ಜಿ ಸಲ್ಲಿಕೆ ಕೊನೆ ದಿನ: 30-09-2022

ಅರ್ಜಿ ಸಲ್ಲಿಸುವ ವಿಧಾನ : ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ: www.b4s.in/praja/LHVT3

ಪಿಜಿ ಸ್ಕಾಲರ್‌ಷಿಪ್ ಫಾರ್ ಪ್ರೊಫೆಷನಲ್ ಕೋರ್ಸಸ್ ಫಾರ್ ಎಸ್‌ಸಿ/ಎಸ್‌ಟಿ 2022-23

ವಿವರ: ಪಿಜಿ ಸ್ಕಾಲರ್‌ಶಿಪ್ ಫಾರ್ ಪ್ರೊಫೆಷನಲ್ ಕೋರ್ಸಸ್ ಫಾರ್ ಎಸ್‌ಸಿ/ಎಸ್‌ಟಿ 2022-23, ವೃತ್ತಿಪರ ವಿಷಯಗಳಲ್ಲಿ ಸ್ನಾತಕೋತ್ತರ ಹಂತದಲ್ಲಿ ವಿದ್ಯಾಭಾಸ ಮಾಡುವ ಅಭ್ಯರ್ಥಿಗಳಿಗಾಗಿ ಕೇಂದ್ರ ಸರ್ಕಾರದ ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ)ಉಪಕ್ರಮವಾಗಿದೆ.

ಅರ್ಹತೆ: ಎಸ್‌ಸಿ/ಎಸ್‌ಟಿ ವರ್ಗಕ್ಕೆ ಸೇರಿದ ಮತ್ತು ಸ್ನಾತಕೋತ್ತರ ಹಂತದಲ್ಲಿ ವೃತ್ತಿಪರ ಕೋರ್ಸ್ ಅನ್ನು ಮುಂದುವರಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
ಅರ್ಜಿದಾರರು ಯುಜಿಸಿ ಕಾಯಿದೆಯ ಸೆಕ್ಷನ್ 2(ಎಫ್) ಮತ್ತು 12(ಬಿ) ಅಡಿಯಲ್ಲಿ ಸೇರಿಸಲಾದ ವಿಶ್ವವಿದ್ಯಾಲಯಗಳು/ಸಂಸ್ಥೆಗಳು/ಕಾಲೇಜುಗಳಲ್ಲಿ /1956 ರ ಯುಜಿಸಿ ಕಾಯ್ದೆ 3 ರ ಅಡಿಯಲ್ಲಿ ಸೇರಿಸಲಾದ ಡೀಮ್ಡ್ ಟು ಬಿ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿರಬೇಕು ಮತ್ತು ಕೇಂದ್ರ/ರಾಜ್ಯ ಸರ್ಕಾರ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳಿಂದ ನಿಧಿಯನ್ನು ಪಡೆಯುತ್ತಿರುವ ಯುಜಿಸಿ/ ವಿಶ್ವವಿದ್ಯಾಲಯಗಳು/ಸಂಸ್ಥೆಗಳು/ ಕಾಲೇಜುಗಳಿಂದ ಅನುದಾನದ ನೆರವು ಪಡೆಯಲು ಅರ್ಹರಾಗಿರಬೇಕು.

ಆರ್ಥಿಕ ನೆರವು: ಮಾಸಿಕ ₹7,800, ಪಿಜಿ ಕೋರ್ಸ್‌ನ ಕಾಲಾವಧಿಗೆ.

ಅರ್ಜಿ ಸಲ್ಲಿಕೆಗೆ ಕೊನೆ ದಿನ: 31-10-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ: www.b4s.in/praja/PSPS6

ಕೀಪ್ ಇಂಡಿಯಾ ಸ್ಮೈಲಿಂಗ್ ಫೌಂಡೇಶನಲ್ ಸ್ಕಾಲರ್‌ಷಿಪ್ ಆ್ಯಂಡ್ ಮೆಂಟರ್‌ಷಿಪ್ ಪ್ರೋಗ್ರಾಂ 2022-23

ವಿವರ: ಕೋಲ್ಗೇಟ್-ಪಾಮೋಲಿವ್ (ಇಂಡಿಯಾ) ಲಿಮಿಟೆಡ್ ಯುವ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನ ನೀಡುತ್ತಿದೆ.

ಅರ್ಹತೆ: 2022ರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನಿಷ್ಠ ಶೇ 75 ಅಥವಾ ಪಿಯುಸಿ ಪರೀಕ್ಷೆಯಲ್ಲಿ ಶೇ 60 ಅಂಕಗಳೊಂದಿಗೆ ತೇರ್ಗಡೆಯಾಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಉನ್ನತ ಮಾಧ್ಯಮಿಕ, 3-ವರ್ಷದ ಪದವಿ ಮತ್ತು 4-ವರ್ಷದ ವೃತ್ತಿಪರ ಕೋರ್ಸ್‌ಗಳನ್ನು (ಎಂಜಿನಿಯರಿಂಗ್/ಎಂಬಿಬಿಎಸ್/ಬಿಡಿಎಸ್ ಡೆಂಟಲ್) ಮುಂದುವರಿಸಲು ಅರ್ಜಿ ಸಲ್ಲಿಸಬಹುದು. ಎಲ್ಲಾ ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹ 5 ಲಕ್ಷಗಳಿಗಿಂತ ಕಡಿಮೆಯಿರಬೇಕು.

ಆರ್ಥಿಕ ನೆರವು: 3 ವರ್ಷಗಳವರೆಗೆ ಅಧ್ಯಯನಕ್ಕಾಗಿ ವರ್ಷಕ್ಕೆ ₹ 30,000.

ಅರ್ಜಿ ಸಲ್ಲಿಕೆಗೆ ಕೊನೆ ದಿನ: 31-12-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಮಾಹಿತಿಗೆ:www.b4s.in/praja/KISF6

ಕೃಪೆ: buddy4study.com

ಹರಿಯಲಿ ಗುರುಕಾರುಣ್ಯದ ಗುಪ್ತಗಾಮಿನಿ...

ಗುರುವಿಲ್ಲದ ಶಿಕ್ಷಣವಿಲ್ಲ. ಎಲ್ಲರೂ ಗುರು ಮುಖೇನವೇ ಸಮಾಜದ ಅಂಗಳಕ್ಕೆ ಕಾಲಿಡಬೇಕು. ಕಾಲಿಟ್ಟ ಮೇಲೆ ಜೀವನ ಪೂರ್ತಿ ಅಂತಹ ಗುರುವಿಗೆ ಕೃತಜ್ಞರಾಗಿರಬೇಕು. ಇಂದು ಅಂಥ ಶಿಕ್ಷಕರನ್ನು ನೆನೆವ ದಿನ. ನಮಗೆ ಕಲಿಸಿದವರನ್ನೆಲ್ಲ ಸ್ಮರಿಸೋಣ ಬನ್ನಿ.



ಸದಾಶಿವ್ ಸೊರಟೂರು

ಅದೊಂದು ಬೆಳಗ್ಗೆ ಫೋನ್ ರಿಂಗಾಯ್ತು. ಅತ್ತ ಕಡೆಯಿಂದ 'ನಾನು ಸಾರ್ ನಿಮ್ಮ ಹಳೆಯ ಸ್ಟೂಡೆಂಟ್ ಪ್ರಿಯಾಂಕ. ಹ್ಯಾಪಿ ಟೀಚರ್ಸ್ ಡೇ ಸಾರ್. ನಿಮಗೆ ಶುಭಾಶಯ ಹೇಳೋದಕ್ಕಾಗಿ ಕರೆ ಮಾಡಿದೆ ಸಾರ್. ಹೇಗಿದ್ದೀರಾ?' ಅಂದಿತು ದನಿ. ನನಗೆ ಆಕೆಯ ಗುರುತು ಸಿಕ್ಕಿತು. 'ಧನ್ಯವಾದ ಕಣಮ್ಮ. ಮತ್ತೆ ಹೇಗಿದೆ ನಿನ್ನ ವೈದ್ಯಕೀಯ ಓದು? ಮೂರ್‍ನಾಲ್ಕು ವರ್ಷಗಳ ಹಿಂದೆ ನಿಮ್ಮ ಅಪ್ಪ ಸಿಕ್ಕಾಗ ಹೇಳಿದ್ರು ಮಗಳಿಗೆ ಮೆಡಿಕಲ್ ಸೀಟ್ ಸಿಕ್ಕಿದೆ ಅಂತ' ಎಂದೆ. 'ಹೌದು ಸರ್ ಮೆಡಿಕಲ್‌ಗೆ ಸೀಟ್ ಸಿಕ್ಕಿತ್ತು. ನಾನೇ ಹಠ ಹಿಡಿದು ಹೋಗಲಿಲ್ಲ. ಟೀಚರ್ ಆಗೋದು ನನ್ನ ಕನಸಾಗಿತ್ತು. ಅದಕ್ಕೆ ನೀವೇ ನನಗೆ ಪ್ರೇರಣೆ' ಎಂದಳು. ನನಗೆ ಅತೀವ ಖುಷಿ ಆಯಿತು ಮತ್ತು ಅವಳ ಬಗ್ಗೆ ಹೆಮ್ಮೆಯೂ!

ಸುಮಾರು ಇಪ್ಪತ್ತೈದು ವರ್ಷದ ಹಿಂದೆ ಇಂಥದ್ದೇ ಮಾತನ್ನು ನಾನು ನಮ್ಮ ಪ್ರೌಢಶಾಲೆಯ ಕನ್ನಡ ಮೇಷ್ಟ್ರ ಪ್ರಭಾವಕ್ಕೆ ಒಳಗಾಗಿ 'ಸಾರ್ ನಾನೂ ನಿಮ್ಮ ಹಾಗೆ ಮೇಷ್ಟ್ರು ಆಗೋಕೆ ಏನು ಮಾಡ್ಬೇಕು?' ಅಂತ ಕೇಳಿದ್ದೆ. ಅವರು ನನ್ನನ್ನು ಕೂರಿಸಿಕೊಂಡು ಸಾದ್ಯಂತವಾಗಿ ವಿವರಿಸಿದ್ದರು. ಓದು ಮುಗಿಸಿ ಶಾಲೆ ಬಿಟ್ಟು ಬರುವ ದಿನ ಅವರನ್ನು ಖಾಸಗಿಯಾಗಿ ಭೇಟಿ ಮಾಡಿ ಒಂದು ಪ್ರಶ್ನೆ ಕೇಳಿದ್ದೆ 'ನಿಮಗ್ಯಾಕೆ ಮೇಷ್ಟ್ರಾಗಬೇಕು ಅನಿಸಿತು ಸರ್?' ಅಂತ. ಆಗ ಅವರು 'ಉಮಾಪತಿ ಅಂತ ಒಬ್ರು ಮೇಷ್ಟ್ರು ಇದ್ರು. ಅವರು ನನಗೆ ಸಿಗದೆ ಹೋಗಿದ್ದರೆ ನಾನಿವತ್ತು ಹೀಗೆ ಇರುತ್ತಿರಲಿಲ್ಲ. ಕಾಡುವ ಬಡತನದಲ್ಲಿದ್ದ ನನಗೆ ಬರೀ ವಿದ್ಯೆಯನ್ನಲ್ಲದೆ ಊಟವನ್ನೂ ಕೊಟ್ಟು ಪೊರೆದವರು. ನಾನು ಅಂದೇ ನಿರ್ಧರಿಸಿದ್ದೆ ನಾನು ಮೇಷ್ಟ್ರಾಗಲೇ ಬೇಕು ಅಂತ. ನನ್ನಂತಹ ಹಲವು ಬಡಮಕ್ಕಳಿಗೆ ನನ್ನಿಂದನೂ ಒಂದು ಸಹಾಯ ಆಗುವಂತಾಗಬೇಕು ಅಂತ' ಎಂದು ಭಾವುಕರಾಗಿ ಹೇಳಿದ್ದರು.

ನಾನು, ನನ್ನ ವಿದ್ಯಾರ್ಥಿನಿ, ನನ್ನ ಗುರುಗಳು ಮತ್ತು ಅವರ ಗುರುಗಳು ಈ ನಾಲ್ಕು ಜನ ಒಂದು ತಂತುವಿನಲ್ಲಿ ಬಂಧಿಸಿಕೊಂಡಿವೆಯೇನೊ ಎನಿಸತೊಡಗಿತು. ಪೀಳಿಗೆಯಿಂದ ಪೀಳಿಗೆಗೆ ನಾಡಿನ ಈ ದೇಹದೊಳಗೆ ಗುರು-ಕಾರುಣ್ಯವೂ ಗುಪ್ತಗಾಮಿನಿಯಂತೆ ಹರಿಯುತ್ತಾ ಸಮಾಜವನ್ನು ಅದೆಷ್ಟು ಆರೋಗ್ಯಪೂರ್ಣವಾಗಿಟ್ಟಿದೆ. ನಮಗೆ ಗೊತ್ತಿಲ್ಲದೆ ನಮ್ಮ ನಮ್ಮ ಗುರುವನ್ನು ನಮ್ಮಷ್ಟಕ್ಕೆ ನಾವು ಅರಸುತ್ತಾ ಹೋಗುತ್ತೇವೆ. ಅವರು ಸಿಗುತ್ತಾರೆ ಕೂಡ. ಏಕೆಂದರೆ ನಮ್ಮೊಳಗೊಮ್ಮೆ ಗುಪ್ತವಾಗಿ ಕೂತ ಗುರು ಇರುತ್ತಾನೆ. ಅವನು ಹೊರಗಿನ ಗುರುವಿನಲ್ಲಿ ತನ್ನದೇ ಲಕ್ಷಣ ಕಂಡ ತಕ್ಷಣ ಇವರು ತನ್ನವರೇ ಎನ್ನುವ ಸಲುಗೆ ಮೂಡಿ ಅವರನ್ನು ಗುರುವಾಗಿ ಸ್ವೀಕರಿಸುತ್ತಾನೆ. ಅವರಿಬ್ಬರ ನಡುವೆ ಕಲಿಕೆ ಮತ್ತು ಕಲಿಸುವಿಕೆ ಅರಳುತ್ತದೆ. ಆ ಗುರು ಸಲುಗೆ ಕೊನೆಯವರೆಗೂ ಕೈಹಿಡಿದು ನಡೆಸುತ್ತದೆ. ಅವರವರ ಗುರುಗಳನ್ನು ಅವರವರೆ ಹುಡುಕಿಕೊಳ್ಳಬೇಕು. ಪ್ರತಿಯೊಬ್ಬ ಗುರುವೂ ಒಬ್ಬ ಒಳ್ಳೆಯ ಶಿಷ್ಯನಿಗಾಗಿ ಕಾಯುತ್ತಿರುತ್ತಾನೆ; ಪ್ರತಿಯೊಬ್ಬ ಶಿಷ್ಯನೂ ಒಳ್ಳೆಯ ಗುರುವಿಗಾಗಿ ಕಾಯುತ್ತಿರುತ್ತಾನೆ. ಅವರಿಬ್ಬರೂ ಸಂಧಿಸಿದ ದಿನ ಖಂಡಿತ ಅಲ್ಲೊಂದು ಅದ್ಭುತವಾದದ್ದು ನಡೆಯುತ್ತದೆ. ಅದೇ ಭುವನದ ಭಾಗ್ಯ.

ನಾನು ಎಷ್ಟೊ ಪ್ರಶ್ನೆಗಳಿಗೆ ಮೇಷ್ಟ್ರು ಬಳಿ ಕೇಳುವಂತೆ ಗೂಗಲ್‌ನಲ್ಲಿ ಪ್ರಶ್ನೆಗಳನ್ನು ಕೇಳಿ ಸರಿಯಾದ ಉತ್ತರ ಪಡೆದಿದ್ದೇನೆ. ಹಲ್ವ ಮಾಡುವುದು ಹೇಗೆಂದು ಹುಡುಕಿ, ರುಚಿಯಾದ ಹಲ್ವ ಮಾಡಿದ್ದೀನಿ. ನಾನು ಮನೆಯ ವಿಳಾಸ ಹುಡುಕುತ್ತಿರುವಾಗ ಎಷ್ಟೊ ಜನರು ಆ ಮನೆಗೆ ದಾರಿ ತೋರಿ ಸಹಕರಿಸಿದ್ದಾರೆ. ನನ್ನ ರೂಮಿನ ತುಂಬಾ ಪುಸ್ತಕಗಳು ತುಂಬಿಕೊಂಡಿವೆ. ಅದರಿಂದ ತುಂಬಾ ಕಲಿತಿದ್ದೇನೆ. ಟಿ.ವಿ ನೋಡುತ್ತಾ ದೊಡ್ಡ ದೊಡ್ಡ ಹಾಡುಗಳು ಈಗ ನನಗೆ ಬಾಯಿಪಾಠವಾಗಿವೆ. ಹೀಗೆ ಬಗೆ ಬಗೆಯ ವಿಚಾರವನ್ನು ಕಲಿಸಿದ್ದೆಲ್ಲವನ್ನು 'ಗುರು' ಎಂದು ಕೊಳ್ಳಬಹುದೇ? ಬಹುಶಃ ಅಲ್ಲ ಅನಿಸುತ್ತೆ. ನಮಗೆ ಕಲಿಸುತ್ತಾ, ಇಡೀ ಬದುಕನ್ನೂ ಪ್ರಭಾವಿಸಿ, ಸನ್ಮಾರ್ಗದಲ್ಲಿ ಕರೆದೊಯ್ಯುವವರು ಗುರು. ಎಲ್ಲರಿಗೂ ಒಬ್ಬ ಅಂಥ ಗುರುವಿನ ಅವಶ್ಯಕತೆ ಇದೆ. ಇಷ್ಟು ವರ್ಷದ ಶಾಲಾ ದಿನಗಳಲ್ಲಿ ನನಗೆ ಎಲ್ಲಾ ಶಿಕ್ಷಕರ ನೆನಪಿಲ್ಲ. ಕೆಲವು ಶಿಕ್ಷಕರ ನೆನಪಂತೂ ಹೋಗುವುದೇ ಇಲ್ಲ. ಅದೇ ಗುರು ಮಹಿಮೆ.

ನನಗೆ ಹೈಸ್ಕೂಲ್‌ನಲ್ಲಿ ಮಲ್ಲೇಶಪ್ಪ ಎಂಬ ಶಿಕ್ಷಕರಿದ್ದರು. ಅವರೇ ಮುಖ್ಯ ಶಿಕ್ಷಕರು. ಅವರ ಬಂದ ಮೇಲೆ ಸ್ಕೂಲ್‌ಗೆ ಒಂದು ಕಳೆ ಬಂದ ಹಾಗೆ ಆಯ್ತು. ಇಡೀ ಶಾಲೆ ಒಂದು ಶಿಸ್ತಿಗೆ ಒಗ್ಗಿಕೊಂಡಿತು. ಭಿನ್ನ ಭಿನ್ನವಾದ ಹೊಸ ಕಾರ್ಯಕ್ರಮಗಳನ್ನು ರೂಪಿಸಿದರು. ನಾವೆಲ್ಲಾ ಆಗ ಶಾಲೆಗೆ ಹೋಗಲು ಸಂಭ್ರಮಪಡುತ್ತಿದ್ದವು. ಇಡೀ ಊರಿಗೆ, ತಾಲ್ಲೂಕಿಗೆ ಅವರ ಕಾರ್ಯದ ಸೊಬಗು ಹರಡಿತು. ಶಾಲೆಯ ಫಲಿತಾಂಶವೂ ಹೆಚ್ಚಾಯಿತು. ಮೊನ್ನೆಯಷ್ಟೆ 'ಯಾವ ನಾಡೂ ಕೂಡ ಅಲ್ಲಿನ ಶಿಕ್ಷಕರನ್ನು ಮೀರಿ ಬೆಳೆಯಲು ಸಾಧ್ಯವೆ ಇಲ್ಲ' ಎಂಬ ಸಾಲನ್ನು ಓದಿಕೊಳ್ಳುವಾಗ ಮಲ್ಲೇಶಪ್ಪ ಮೇಷ್ಟ್ರು ನೆನಪಾದರು. ಒಬ್ಬ ಒಳ್ಳೆಯ ಶಿಕ್ಷಕ ಶಾಲೆಯನ್ನು ಬದಲಾಯಿಸಿದಂತೆ, ಎಲ್ಲಾ ಒಳ್ಳೆಯ ಶಿಕ್ಷಕರು ಇಡೀ ಸಮಾಜವನ್ನು, ಹೇಗೆ ಬದಲಾಯಿಸಬಲ್ಲರು, ಪ್ರಭಾವಿಸಬಲ್ಲರು ಎಂದು ಯೋಚಿಸುವಂತಾಯಿತು.

ಇಂದಿಗೂ ನಾನು ಬೋಧನೆಯಲ್ಲಿ ಏನಾದರೂ ಸಮಸ್ಯೆ ಎದುರಿಸಿದರೆ ಅವರಿಗೊಂದು ಕರೆ ಮಾಡುತ್ತೇನೆ. ಅದಕ್ಕೊಂದು ಚೆಂದದ ಪರಿಹಾರವನ್ನು ಸೂಚಿಸುತ್ತಾರೆ. ಒಬ್ಬ ಒಳ್ಳೆಯ ಗುರು ಹೇಗೆ ಬರೀ ಒಳ್ಳೆಯದನ್ನೇ ಬಿತ್ತುತ್ತಾ ಹೋಗುತ್ತಾರೆ ಎನ್ನುವುದಕ್ಕೆ ಇಂತಹ ಗುರುಗಳು ಯಾವತ್ತೂ ಒಂದು ಉದಾಹರಣೆಯಾಗುತ್ತಾರೆ. ಈಗೀಗ ನನ್ನ ವಿದ್ಯಾರ್ಥಿಗಳು ಕೆಲವೊಮ್ಮೆ ನನ್ನ ಮಾತನ್ನೇ ಕೇಳುವುದಿಲ್ಲ. ಅವರನ್ನು ಆ ರೀತಿ ಪ್ರಭಾವಿಸಿದ್ದು ಏನಿರಬಹುದೆಂದು ಚಿಂತಿಸುವಂತಾಗುತ್ತದೆ. ಉತ್ತಮ ಗುರು ಪರಂಪರೆಯ ತಂತುವನ್ನು ಈ ಕಾಲ ಕಿತ್ತು ಹಾಕಿತಾ? ಎಂದು ಯೋಚಿಸುವಂತಾಗುತ್ತದೆ. ಈ ದೇಶದ ಪರಂಪರೆಯಲ್ಲಿ ಗುರುವಿಗೆ ದೇವರ ಸ್ಥಾನವಿದೆ. ಅದ್ಭುತ ಗುರು ಪರಂಪರೆಯೂ ಇದೆ. ಅದು ಉಳಿಯಬೇಕು.

ಕಲಿಸುವವನಿಲ್ಲದೆ ಕಲಿಕೆ ಇಲ್ಲ. ಗುರುವಿಲ್ಲದ ಶಿಕ್ಷಣವಿಲ್ಲ. ತಂದೆ ತಾಯಿಯ ಬಳಿಕ ಕಲಿಸಿದವರೇ ಇಲ್ಲಿ ಪೂಜ್ಯ. ಎಲ್ಲರೂ ಗುರು ಮುಖೇನವೇ ಸಮಾಜದ ಅಂಗಳಕ್ಕೆ ಕಾಲಿಡಬೇಕು. ಕಾಲಿಟ್ಟ ಮೇಲೆ ಜೀವನ ಪೂರ್ತಿ ಅಂತಹ ಗುರುವಿಗೆ ಕೃತಜ್ಞರಾಗಿರಬೇಕು.

ಇಂದು ಅಂಥ ಶಿಕ್ಷಕರನ್ನು ನೆನೆವ ದಿನ. ಅಂತಹ ಶಿಕ್ಷಕರು ಹೆಚ್ಚಾದಷ್ಟು ಇಡೀ ಸಮಾಜ ನೆಮ್ಮದಿಯಲ್ಲಿರುತ್ತದೆ. ಉತ್ತಮ ಗುರು ಪರಂಪರೆ ಉಳಿದಷ್ಟು ನಾಡು ಸಂಭ್ರಮಿಸುತ್ತದೆ. ಆಗ ಶಿಕ್ಷಕರ ದಿನಾಚರಣೆಗೂ ಒಂದು ಅರ್ಥ ಬರುತ್ತದೆ. ದಾರಿ ತಪ್ಪಿದ ನಮ್ಮ ಈ ದಿನಗಳಿಗೆ, ಇಲ್ಲಿ ಯಾವುದೂ ಸರಿಯಿಲ್ಲ ಎಂಬ ಗೊಣಗಾಟಕ್ಕೆ ವಿದ್ಯೆಯೊಂದೇ ಔಷಧಿ. ಅದನ್ನು ದಯಪಾಲಿಸುವ ಗುರುವೇ ಚಿಕಿತ್ಸಕ. ಅವನೊಂದೇ ಎಲ್ಲದಕ್ಕೂ ಪರಿಹಾರ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸಮಸ್ಯೆಯನ್ನು ವಿವರಿಸಲು ಆಗದವನು ಆ ಸಮಸ್ಯೆಗೆ ಎಂದಿಗೂ ಪರಿಹಾರವನ್ನು ಕಂಡುಕೊಳ್ಳಲಾರ.

–ಕನ್‌ಫ್ಯೂಷಿಯಸ್

ಕಪ್ಪತಗುಡ್ಡದ ಸಂರಕ್ಷಣೆಗೆ ಸಮುದಾಯ ಪ್ರಜ್ಞೆಯೇ ಸೂಕ್ತ ಬೇಲಿ

ಗದಗ ಜಿಲ್ಲೆಯ ಕಪ್ಪತಗುಡ್ಡ ಪರ್ವತಶ್ರೇಣಿಯ ಸುತ್ತ ಮತ್ತೊಮ್ಮೆ ವಿವಾದದ ಹೊಗೆ ಎದ್ದಿದೆ. ನೈಸರ್ಗಿಕ ಸಂಪತ್ತು ಎಲ್ಲೇ ಇದ್ದರೂ ಅಭಿವೃದ್ಧಿಯ ಭರಾಟೆಯ ಈ ದಿನಮಾನಗಳಲ್ಲಿ ಅದು ನಾನಾ ಬಗೆಯ ವಿವಾದಗಳನ್ನು ತನ್ನತ್ತ ಸೆಳೆದುಕೊಳ್ಳುವುದು ಸಹಜವೇ ಹೌದು. ಕಪ್ಪತಗುಡ್ಡದ ಒಡಲಲ್ಲಿ ಖನಿಜ ಸಂಪತ್ತಿದೆ, ಅದರ ಮೇಲ್ಮಣ್ಣಿನಲ್ಲಿ ಅಪರೂಪದ ಸಸ್ಯ ಸಂಪತ್ತಿದೆ. ಗುಡ್ಡದತ್ತ ಧಾಳಾಗಿ ಬೀಸಿ ಬರುವ ಗಾಳಿಯೂ ಶಕ್ತಿಯ ಆಗರವಾಗಿರುವುದರಿಂದ ಅದನ್ನೂ ಬಾಚಿಕೊಳ್ಳುವ ಯತ್ನಗಳು ನಡೆಯುತ್ತವೆ. ಕಬ್ಬಿಣ ಮತ್ತು ಚಿನ್ನದ ಅದಿರಷ್ಟೇ ಅಲ್ಲ, ಈಗಂತೂ ತೀರಾ ಸಾಮಾನ್ಯ ಕಲ್ಲುಬಂಡೆಗಳಿಗೂ ಬೇಡಿಕೆ ಬಂದಿರುವುದರಿಂದ ಅವಕ್ಕೂ ಲಗ್ಗೆ ಹಾಕಲು ಪೈಪೋಟಿ ನಡೆಯುತ್ತದೆ. ಅವೆಲ್ಲ ಬಿಡಿ, ಉತ್ತರ ಕರ್ನಾಟಕದಲ್ಲಿ ಕಣ್ಮನ ಸೆಳೆಯುವ ಭೂದೃಶ್ಯಗಳು, ಆಹ್ಲಾದಕರ ತಂಗಾಳಿ ಕೂಡ ಪ್ರವಾಸೋದ್ಯಮದ ದೃಷ್ಟಿಯಿಂದ ಬೆಲೆಬಾಳುವ ಸಂಪನ್ಮೂಲಗಳೇ ಆಗುತ್ತವೆ. ಇಷ್ಟೆಲ್ಲ ಒಂದೇ ಕಡೆ ಸೇರಿರುವಾಗ ಅವುಗಳನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ನಾನಾ ಬಗೆಯ ಶಕ್ತಿಗಳು ಲಗ್ಗೆ ಹಾಕುತ್ತವೆ. ಅದನ್ನು ತಡೆಯುವ ಯತ್ನವೂ ನಡೆಯುತ್ತದೆ. ಅಂತಹ ಸಂದರ್ಭದಲ್ಲಿ ವಿವಾದ ಸಹಜವಾಗಿಯೇ ಏಳುತ್ತಿರುತ್ತದೆ. ಕಳೆದ ಶತಮಾನದ ಆದಿಯಲ್ಲೇ ಅಲ್ಲಿರಬಹುದಾದ ಚಿನ್ನವನ್ನು ಎತ್ತಲು ಜಾನ್ ಟೇಲರ್ ಗಣಿ ಕಂಪನಿ ಹತ್ತಾರು ವರ್ಷ ಅಗೆತ ನಡೆಸಿ, ನಷ್ಟ ಅನುಭವಿಸಿ ಕಾಲ್ತೆಗೆದಿತ್ತು. ನಂತರವೂ ಹಳ್ಳಕೊಳ್ಳದ ಮರಳಿನಲ್ಲಿ ಚಿನ್ನದ ಕಣಗಳಿಗಾಗಿ ಹುಡುಕಾಡುವುದು ನಡೆದಿತ್ತು. ಮೃಗಪಕ್ಷಿಗಳ ಬೇಟೆಯೂ ಸದ್ದಿಲ್ಲದೆ ನಡೆಯುತ್ತಿತ್ತು. ಅಲ್ಪ ಪ್ರಮಾಣದ ಚಿನ್ನವನ್ನೂ ಆಧುನಿಕ ತಂತ್ರಜ್ಞಾನದಿಂದ ಲಾಭದಾಯಕವಾಗಿ ಎತ್ತಲು ಸಾಧ್ಯವೆಂದು ಗೊತ್ತಾದ ನಂತರ ದೊಡ್ಡ ಪ್ರಮಾಣದ ಗಣಿಗಾರಿಕೆಯ ಸನ್ನಾಹವೂ ಮತ್ತೆ ಮತ್ತೆ ನಡೆದಾಗ ಸಮಾಜದಲ್ಲಿ ಪರಿಸರ ಪ್ರಜ್ಞೆ ಜಾಗೃತವಾಗಿತ್ತು. ಇಡೀ ಕಪ್ಪತಗುಡ್ಡ ಪ್ರದೇಶವನ್ನು ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕೆಂದು ಸ್ಥಳೀಯ ಧಾರ್ಮಿಕ ನಾಯಕರ ನೇತೃತ್ವದಲ್ಲಿ ಪರಿಸರ ಹಿತಚಿಂತಕರು, ರೈತರು, ವಿದ್ಯಾರ್ಥಿಗಳು, ಸಾಮಾಜಿಕ ಕಾರ್ಯಕರ್ತರು ಚಳವಳಿ ನಡೆಸಿ ಒತ್ತಾಯ ಹೇರಿದ್ದರಿಂದ ಕೊನೆಗೂ ಆರು ವರ್ಷಗಳ ಹಿಂದೆ ಈ ಗುಡ್ಡಶ್ರೇಣಿಗೆ ಕಾನೂನಿನ ಬೇಲಿಯೊಂದು ಸೃಷ್ಟಿಯಾಯಿತು. ಅರಣ್ಯ ಇಲಾಖೆ ಹಾಗೂ ವನ್ಯಪ್ರೇಮಿಗಳು ವಹಿಸಿದ ಮುತುವರ್ಜಿಯಿಂದಾಗಿ ಅಲ್ಲಿ ವನ್ಯಜೀವಿಧಾಮವನ್ನೂ ಘೋಷಿಸಲಾಯಿತು. 1986ರ ಅಧಿನಿಯಮಗಳ ಪ್ರಕಾರ, ವನ್ಯಧಾಮದ ಸುತ್ತಲಿನ ಹತ್ತು ಕಿಲೊಮೀಟರ್ ವ್ಯಾಪ್ತಿಯ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಪರಿಗಣಿಸಲಾಗಿತ್ತು.

ಸ್ಥಳೀಯ ಪ್ರಜೆಗಳನ್ನು ಕತ್ತಲಲ್ಲಿಟ್ಟು ಉನ್ನತಮಟ್ಟದಲ್ಲಿ ನಿರ್ಧಾರ ಕೈಗೊಂಡಾಗಲೆಲ್ಲ, ಬಲಾಢ್ಯರ ಹಿತಾಸಕ್ತಿಯೇ ಮೇಲುಗೈ ಪಡೆದು ಘರ್ಷಣೆ ಹೆಚ್ಚುತ್ತದೆ

ಇನ್ನೇನು, ಕಪ್ಪತಗುಡ್ಡದ ಐಸಿರಿಗೆ ಸರ್ಕಾರಿ ಭದ್ರತೆ ಸಿಕ್ಕಿತೆಂದು ನೆಮ್ಮದಿಯಲ್ಲಿದ್ದವರಿಗೆ ಪಟ್ಟಭದ್ರ ಹಿತಾಸಕ್ತಿಗಳ ಹೊಸ ಹೊಸ ಪಟ್ಟುಗಳು ಅರಿವಿಗೆ ಬರುತ್ತಿವೆ. ವನ್ಯಜೀವಿಧಾಮಕ್ಕೆ ನೀಡಿದ ಕಾನೂನಿನ ರಕ್ಷಣೆಯನ್ನು ಹಿಂಪಡೆದು ಅಲ್ಲಿ ಮತ್ತೆ ಚಿನ್ನದ ಗಣಿಗಾರಿಕೆಗೆ ಅನುಮತಿ ನೀಡುವಂತೆ, ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಒತ್ತಡ ಬಂದಿತ್ತು. ಸಂರಕ್ಷಿತ ಪ್ರದೇಶವೆಂಬ ಘೋಷಣೆಯನ್ನೇ ಹಿಂಪಡೆಯುವಂತೆ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಒತ್ತಡ ಬಂದಿತ್ತು. ಅವರಿಬ್ಬರೂ ಬಗ್ಗಿರಲಿಲ್ಲ ಎಂಬುದು ಶ್ಲಾಘನೀಯವೇ ಹೌದಾದರೂ ಅವರು ಬಾಗದಂತೆ ನೋಡಿಕೊಂಡ ಶ್ರೇಯ ಗದಗ ಜಿಲ್ಲೆಯ ಪರಿಸರ ಹೋರಾಟಗಾರರಿಗೆ ಹಾಗೂ ಅವರ ಬೆಂಬಲಕ್ಕಿದ್ದ ಅರಣ್ಯಾಧಿಕಾರಿಗಳಿಗೆ ಸೇರುತ್ತದೆ. ಈಗ ವಿವಾದ ಬೇರೊಂದು ಮುಖಕ್ಕೆ ಹೊರಳಿದೆ. ವನ್ಯಧಾಮದ ಸುತ್ತಲಿನ ಘೋಷಿತ 10 ಕಿಲೊಮೀಟರ್ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯನ್ನು ಕುಗ್ಗಿಸಿ ಕೇವಲ ಒಂದು ಕಿ.ಮೀ.ಗೆ ಇಳಿಸಬೇಕೆಂದು ಕೆಲವು ಜನಪ್ರತಿನಿಧಿಗಳು ಹಾಗೂ ಕಲ್ಲುಗಣಿ ಗುತ್ತಿಗೆದಾರರು ಒತ್ತಾಯಿಸುತ್ತಿದ್ದಾರೆ. ಪರಿಧಿಯಿಂದ ಹತ್ತು ಕಿಲೊಮೀಟರ್ ದೂರ ಎಂಬುದು ಅಷ್ಟೇನೂ ಕಟ್ಟುನಿಟ್ಟಿನ ನಿಯಮವೇನಲ್ಲ ನಿಜ. ಮುಂಬೈ ನಗರದಲ್ಲೇ ಇರುವ ಸಂಜಯ ಗಾಂಧಿ ರಾಷ್ಟ್ರೀಯ ಉದ್ಯಾನ, ಚೆನ್ನೈನಲ್ಲಿರುವ ಗಿಂಡಿ ರಾಷ್ಟ್ರೀಯ ಉದ್ಯಾನ, ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಸುತ್ತ ಅಲ್ಲಲ್ಲಿನ ಅಗತ್ಯಕ್ಕೆ ತಕ್ಕಂತೆ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯನ್ನು ಕಿರಿದುಗೊಳಿಸಲಾಗಿದೆ. ಸೂಕ್ಷ್ಮ ಪ್ರದೇಶದ ವ್ಯಾಪ್ತಿ ಹತ್ತು ಕಿ.ಮೀ. ಇರಬೇಕೊ, ಐದಿದ್ದರೆ ಸಾಕೊ ಅಥವಾ ಒಂದೇ ಕಿ.ಮೀ. ಇರಬೇಕೊ ಎಂಬುದು ಆಯಾ ಗ್ರಾಮ ಪಂಚಾಯಿತಿ, ವನ್ಯ ವಾರ್ಡನ್ ಹಾಗೂ ಅರಣ್ಯಾಧಿಕಾರಿಗಳ ಒಮ್ಮತದೊಂದಿಗೆ ನಿರ್ಧಾರವಾಗಬೇಕು. ಅದಕ್ಕೆಂದು ಗ್ರಾಮಮಟ್ಟದಲ್ಲಿ ಪರಿಸರ ಪ್ರಜ್ಞೆಯನ್ನು ಮತ್ತು ಕಾನೂನಿನ ಗ್ರಹಿಕೆಯನ್ನು ಸರಳ ಕನ್ನಡದ ಮೂಲಕ ನೆಲೆಗೊಳಿಸಬೇಕಿತ್ತು, ಆ ಕೆಲಸವನ್ನು ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಮಾಧವ ಗಾಡ್ಗೀಳ್– ಕಸ್ತೂರಿರಂಗನ್ ವರದಿಗಳ ಸಂದರ್ಭದಲ್ಲೂ ಮಾಡಿಲ್ಲ; ಇಲ್ಲೂ ಅದನ್ನು ಮಾಡಿದಂತಿಲ್ಲ. ಸ್ಥಳೀಯ ಪ್ರಜೆಗಳನ್ನು ಕತ್ತಲಲ್ಲಿಟ್ಟೇ ಉನ್ನತಮಟ್ಟದಲ್ಲಿ ನಿರ್ಧಾರ ಕೈಗೊಂಡಾಗಲೆಲ್ಲ ಬಲಾಢ್ಯರ ಹಿತಾಸಕ್ತಿಯೇ ಮೇಲುಗೈ ಪಡೆದು ಘರ್ಷಣೆ ಹೆಚ್ಚುತ್ತದೆ. ಕಪ್ಪತಗುಡ್ಡದ ರಕ್ಷಣೆ, ಸುಸ್ಥಿರ ನಿರ್ವಹಣೆ ಮತ್ತು ಬಲವರ್ಧನೆಯ ಕೆಲಸಗಳಲ್ಲಿ ಸ್ಥಳೀಯರನ್ನು, ಶಿಕ್ಷಕರನ್ನು, ಎಳೆಯರನ್ನು ತೊಡಗಿಸಿಕೊಂಡರೆ ನಿಸರ್ಗ ರಕ್ಷಣೆಗೆ ಅದಕ್ಕಿಂತ ಭದ್ರವಾದ ಬೇಲಿ ಬೇರೊಂದಿರಲಾರದು. ಇಡೀ ಪ್ರದೇಶವನ್ನೇ ಚಿನ್ನವಾಗಿಸುವ ಅಂಥ ಆದರ್ಶವನ್ನು ನಾವಿಲ್ಲಿ ಕಾಣುತ್ತೇವೆಯೇ?

ದಿನದ ಟ್ವೀಟ್

ಉಚಿತವಾಗಿ ಪಡೆದರೆ...

ಮೊದಲಿಗೆ, ನಿಮಗೆ ವಿಶ್ವಾಸಾರ್ಹ ಮಾಹಿತಿ ಬೇಕೆಂದಾದರೆ, ಅದಕ್ಕಾಗಿ ಹಣ ಕೊಡಿ. ಒಂದುವೇಳೆ ನೀವು ಸುದ್ದಿಯನ್ನು ಉಚಿತವಾಗಿ ಪಡೆದರೆ, ನೀವೇ ಉತ್ಪನ್ನವಾಗುವ ಸಾಧ್ಯತೆ ಇರುತ್ತದೆ. ಎರಡನೇ ಪ್ರಮುಖ ನಿಯಮವೆಂದರೆ, ಕೆಲವು ವಿಷಯಗಳು ನಿಮಗೆ ತುಂಬಾ ಮುಖ್ಯವೆಂದು ಅನ್ನಿಸಿದಾಗ ಕ್ಷೇತ್ರ ಪರಿಣತರು ಪರಾಮರ್ಶಿಸಿದ ವಿದ್ವತ್ ಪ್ರಬಂಧಗಳನ್ನು ಅಧ್ಯಯನ ಮಾಡಲು ಪ್ರಯತ್ನಿಸಿ.

ಯುವಲ್ ನೋವಾ ಹರಾರಿ, ಇತಿಹಾಸ ತಜ್ಞ

ಕಿಡಿನುಡಿ

2021ರಲ್ಲಿ 1,55,622 ಮಂದಿ ಭಾರತೀಯರು ರಸ್ತೆಗಳಲ್ಲಿ ಸಾವಿಗೀಡಾಗಿದ್ದಾರೆ. ಅವುಗಳನ್ನು ನಾವು ಅಪಘಾತಗಳು ಎನ್ನುತ್ತೇವೆ. ಆದರೆ, ವಾಸ್ತವದಲ್ಲಿ ಅವುಗಳಲ್ಲಿ ಹಲವು ಕೊಲೆಗಳು. ಅವುಗಳ ಹಿಂದೆ ಇರುವುದು: ಅತಿ ವೇಗವಾಗಿ ಚಲಿಸುವ ವಾಹನಗಳು, ಕುಡಿದು ವಾಹನ ಚಾಲನೆ, ಅವೈಜ್ಞಾನಿಕ ರಸ್ತೆಗಳ ನಿರ್ಮಾಣ, ಕಾನೂನು ಸಮರ್ಪಕವಾಗಿ ಅನುಷ್ಠಾನಗೊಳ್ಳದಿರುವುದು, ನಿಯಮಗಳ ಬಗ್ಗೆ ಅಸಡ್ಡೆ ತೋರುವ ದಾರಿಹೋಕರು, ರಸ್ತೆ ನಿಯಮ ಉಲ್ಲಂಘಿಸುವವರು. #ಸೈರಸ್ ಮಿಸ್ತ್ರಿ

ಅರುಣ್ ಬೋತ್ರ, ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಶುಕ್ರವಾರ, 5-9-1997

- **ಕಾವೇರಿ ಸಮನ್ವಯ ಸಮಿತಿ ರಚನೆ ಸಲಹೆಗೆ ಕರುಣಾನಿಧಿ ತಿರಸ್ಕಾರ**

ಚೆನ್ನೈ, ಸೆ. 4 (ಯುಎನ್‌ಐ)– ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಕಾವೇರಿ ನದಿ ಪ್ರಾಧಿಕಾರಕ್ಕೆ ಬದಲಾಗಿ ಸಮನ್ವಯ ಸಮಿತಿ ರಚಿಸಬೇಕೆಂಬ ಕರ್ನಾಟಕದ ಸಲಹೆಯನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕರುಣಾನಿಧಿ ತಿರಸ್ಕರಿಸಿದ್ದಾರೆ.

ಕಾವೇರಿ ಜಲ ವಿವಾದವನ್ನು ನ್ಯಾಯಮಂಡಳಿಯಲ್ಲಿಯೇ ಇತ್ಯರ್ಥಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಒತ್ತಾಯಿಸುವುದಾಗಿ ಅವರು ಪತ್ರಕರ್ತರಿಗೆ ತಿಳಿಸಿದರು.

ಪಟೇಲ್ ಉತ್ತರಕ್ಕೆ ಅತೃಪ್ತಿ: ಕಾಂಗ್ರೆಸ್, ಬಿಜೆಪಿ ಸಭಾತ್ಯಾಗ

ಬೆಂಗಳೂರು, ಸೆ. 4– ನೀರಾವರಿ, ಅಬಕಾರಿ, ಗಣಿ, ಕ್ರೀಡೆ, ಶಿಕ್ಷಣ, ವಿದ್ಯುತ್ ಸೇರಿದಂತೆ ವಿವಿಧ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಯ ನಂತರ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಸಮರ್ಪಕ ಉತ್ತರ ನೀಡಲಿಲ್ಲ ಎಂದು ಆರೋಪಿಸಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಇಂದು ಸಭಾತ್ಯಾಗ ಮಾಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 5-9-1972

- **ಕೆಂಗಲ್ ಮೇಲೆ ಕ್ರಮಕ್ಕೆ ಸಲಹೆ ಇಲ್ಲ**

ನವದೆಹಲಿ, ಸೆ. 4 – ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಎಚ್.ರಂಗನಾಥ್ ಅವರು ಇಂದು ಹೈಕಮಾಂಡಿಗೆ ಸಲ್ಲಿಸಿದ ವರದಿಯಲ್ಲಿ ಕೆಂಗಲ್ ಹನುಮಂತಯ್ಯನವರ ವಿರುದ್ಧ ಶಿಸ್ತಿನ ಕ್ರಮ ಶಿಫಾರಸು ಮಾಡದೇ ನಡೆದ ಸಂಗತಿಗಳ ವಾಸ್ತವಿಕ ವಿವರಣೆ ಮಾತ್ರ ನೀಡಿದ್ದಾರೆಂದು ತಿಳಿದುಬಂದಿದೆ.

ದೇವರಾಜ ಅರಸು ಮಂತ್ರಿಮಂಡಲ ಅಧಿಕಾರಕ್ಕೆ ಬಂದಂದಿನಿಂದ ರಾಜ್ಯದಲ್ಲಿ ಉಂಟಾಗಿರುವ ರಾಜಕೀಯ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ರಂಗನಾಥ್ ಅವರು ಇಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಶಂಕರ ದಯಾಳ್ ಶರ್ಮ ಅವರಿಗೆ ಏಳು ಪುಟಗಳ ವರದಿ ಸಲ್ಲಿಸಿದರು.

- **ವಿಷಮಿಶ್ರಿತ ಆಹಾರ ಸೇವಿಸಿ 5 ಜನರ ಸಾವು**

ಮಂಡ್ಯ, ಸೆ. 4 – ವಿಷಮಿಶ್ರಿತ ಆಹಾರ ಸೇವನೆಯಿಂದ ಮಂಡ್ಯದಲ್ಲಿ ಇಂದು ಐವರು ಪ್ರಾಣ ನೀಗಿದರು.

ನಿನ್ನೆ ವರ್ತಕರ ಸಹಕಾರ ಸಂಘದವರು ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಊಟ ಮಾಡಿದ ನೂರಾರು ಜನ ಅಸ್ವಸ್ಥರಾಗಿದ್ದರು.

ಲೌಕಿಕ ವೈಭೋಗದ ಜಾತಿ ನಾಯಕರನ್ನು ಸಂತರಂತೆ ಪರಿಗಣಿಸುವುದು ಅಪಾಯಕಾರಿ

ಆಂಶಿಕ ವೈರಾಗ್ಯ, ಸಮಾಜದ ಸೋಗು

ಅನುರಣನ

ನಾರಾಯಣ ಎ.

ಧರ್ಮಗುರುಗಳು ಎಂದು ಕರೆಸಿಕೊಳ್ಳುವ ಗಂಡಸರಲ್ಲಿ ಕೆಲವರು ರಹಸ್ಯವಾಗಿ ಹೆಣ್ಣಿನ ಜತೆ ಇರಿಸಿಕೊಳ್ಳುವ ಅನಧಿಕೃತ ಸಂಬಂಧಗಳಲ್ಲಿ ಮೂರು ವಿಧಗಳಿವೆ. ಮೊದಲನೆಯದ್ದು, ಒಪ್ಪಿತ ಸಂಬಂಧ. ಇದು ಕಾನೂನಿನ ಪ್ರಕಾರ ತಪ್ಪೇನಲ್ಲ. ಆದರೆ ನೈತಿಕವಾಗಿ ತಪ್ಪು ಅಂತ ಕೆಲವರು ಭಾವಿಸುತ್ತಾರೆ. ಎರಡನೆಯದ್ದು, ಬಲವಂತವಾಗಿ ಇರಿಸಿಕೊಳ್ಳುವ ದೈಹಿಕ ಸಂಬಂಧ. ಇದು ಬಲಾತ್ಕಾರ, ಅತ್ಯಾಚಾರ, ವಂಚನೆ ಇತ್ಯಾದಿ ಯಾವುದೇ ಸ್ವರೂಪದಲ್ಲೂ ಇರಬಹುದು. ಹಾಗಾಗಿ ಇಂತಹ ಸಂಬಂಧಗಳು ನೈತಿಕವಾಗಿ ತಪ್ಪು ಮತ್ತು ಕಾನೂನಿನ ಪ್ರಕಾರ ಅಪರಾಧ. ಮೂರನೆಯದ್ದು, ಮಕ್ಕಳನ್ನು ಲೈಂಗಿಕವಾಗಿ ಪೀಡಿಸುವುದು. ಇದು ಅನೈತಿಕತೆಯ ಪರಾಕಾಷ್ಠೆ, ಕಾನೂನಿನ ದೃಷ್ಟಿಯಿಂದ ಹೀನಾತಿಹೀನ ಅಪರಾಧ. ಅಷ್ಟೇ ಅಲ್ಲ, ಅಪ್ಪಟ ವಿಕೃತಿ ಕೂಡಾ.

ಮೇಲೆ ಹೇಳಿದ ಮೂರೂ ರೀತಿಯ ಪ್ರಕರಣಗಳು ದೇಶಾತೀತವಾಗಿ ಮತ್ತು ಧರ್ಮಾತೀತವಾಗಿ ಕಾಲಕಾಲಕ್ಕೆ ವರದಿಯಾಗುತ್ತಲೇ ಇವೆ. ಹೀಗಾದಾಗಲೆಲ್ಲ ಕೇಳಿಬರುವ ಒಂದು ಪ್ರತಿಕ್ರಿಯೆ ಹೀಗಿರುತ್ತದೆ: 'ಯಾರೋ ಕೆಲವರು ಹೀಗೆಲ್ಲಾ ಮಾಡುತ್ತಾರೆ. ಅದರಿಂದಾಗಿ ಎಲ್ಲರಿಗೂ ಕೆಟ್ಟಹೆಸರು ಬರುತ್ತದೆ' ಅಂತ. ಇಲ್ಲಿ 'ಯಾರೋ ಕೆಲವರು' ಎಂದರೆ ಯಾರು? ಯಾರ ರಹಸ್ಯ ವ್ಯವಹಾರಗಳು ಬಹಿರಂಗವಾಗಿವೆಯೋ ಅವರು ಮಾತ್ರವೇ ಅಥವಾ ಬಯಲಿಗೆ ಬಾರದೆ ಮುಗಿದುಹೋಗುವ ಪ್ರಕರಣಗಳಲ್ಲಿ ಭಾಗಿಯಾದವರೂ ಈ 'ಯಾರೋ ಕೆಲವರಲ್ಲಿ' ಸೇರುತ್ತಾರೆಯೇ? ಎರಡೂ ಸೇರಿದರೆ 'ಯಾರೋ ಕೆಲವರ' ಸಂಖ್ಯೆ ಒಟ್ಟು ಧರ್ಮಗುರುಗಳ ಸಮುದಾಯದಲ್ಲಿ ಎಷ್ಟು ಪ್ರತಿಶತ ಆಗಬಹುದು? ಈ ಪ್ರಶ್ನೆಯನ್ನು ಯಾರೂ ಕೇಳುವುದಿಲ್ಲ. ಇದೊಂದೇ ಅಂತ ಅಲ್ಲ, ಇಂತಹ ಪ್ರಕರಣದಲ್ಲಿ ಕೇಳಲೇಬೇಕಾದ ಯಾವ ಪ್ರಶ್ನೆಯನ್ನೂ ಯಾರೂ ಕೇಳುವುದಿಲ್ಲ.

ಇಲ್ಲದೇ ಹೋದರೆ, ಕರ್ನಾಟಕದಲ್ಲಿ ಮಠವೊಂದರ ಮುಖ್ಯಸ್ಥ ಎದುರಿಸಿದ ಅತ್ಯಾಚಾರ ಪ್ರಕರಣದಲ್ಲಿ ಹೈಕೋರ್ಟ್‌ನ ನ್ಯಾಯಮೂರ್ತಿಗಳೇ ಒಬ್ಬರಾದ ನಂತರ ಒಬ್ಬರಂತೆ ಒಟ್ಟು ಹತ್ತು ಮಂದಿಯು ವಿಚಾರಣೆಯಿಂದ ಹಿಂದೆ ಸರಿದಾಗ 'ಏನಾಗುತ್ತಿದೆ ಈ ದೇಶದಲ್ಲಿ' ಅಂತ ಯಾರಾದರೂ ಕೇಳಬೇಕಿತ್ತಲ್ಲ. ಧರ್ಮಪೀಠಕ್ಕೆ ಏನಾಗುತ್ತಿದೆ ಎನ್ನುವ ಪ್ರಶ್ನೆಯನ್ನು ಕೇಳುವ ಜವಾಬ್ದಾರಿಯನ್ನು, ಆಪಾದಿತ ವ್ಯಕ್ತಿಯನ್ನು ಧರ್ಮಗುರು ಅಂತ ಸ್ವೀಕರಿಸಿದ ಜಾತಿಯವರ ವಿವೇಚನಾಶಕ್ತಿಗೆ ಬಿಟ್ಟುಬಿಡೋಣ. ಆದರೆ ಈ ದೇಶದ ನ್ಯಾಯದಾನ ವ್ಯವಸ್ಥೆಗೆ ಏನಾಗಿದೆ ಎನ್ನುವ ಪ್ರಶ್ನೆಯನ್ನು ಯಾರಾದರೂ ದೊಡ್ಡ ಮಟ್ಟದಲ್ಲಿ ಎತ್ತಬೇಕಿತ್ತಲ್ಲ. ಇಲ್ಲ, ಹಾಗಾಗಲಿಲ್ಲ!

ಈಗ ಕರ್ನಾಟಕದಲ್ಲಿ ಸುದ್ದಿಯಾಗಿರುವ ಹೊಚ್ಚಹೊಸ ಪ್ರಕರಣದಲ್ಲಿ ರಾಜಕಾರಣಿಗಳು ಸುಮ್ಮನಿದ್ದಾರೆ ಅಂತ ಕೆಲವರು ಹೇಳುತ್ತಿದ್ದಾರೆ. ಇಂತಹ ಪ್ರಕರಣಗಳಲ್ಲಿ ನ್ಯಾಯಮೂರ್ತಿಗಳೇ ವಿಚಾರಣೆಯಿಂದ ಹಿಂದೆ ಸರಿದ ನಿದರ್ಶನಗಳಿರುವಾಗ ರಾಜಕಾರಣಿಗಳ ಅಳುಕನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ನೈತಿಕವಾಗಿ ಪತನ ಹೊಂದಿದ ವ್ಯಕ್ತಿಗಳು ದುರ್ಬಲರಾಗುತ್ತಾರೆ ಅಂತ ಇತಿಹಾಸ ಮತ್ತು ಪುರಾಣಗಳು ನಮಗೆ ತಿಳಿಸುತ್ತವೆ. ಆದರೆ ಈ ಧರ್ಮಗುರು ಸಮುದಾಯದವರು ಮತ್ತು ಅವರ ಸರೀಕರು ಇದಕ್ಕೆ ವ್ಯತಿರಿಕ್ತ. ಅವರ ನೈತಿಕತೆ ಪಾತಾಳಕ್ಕೆ ಕುಸಿದ ಸ್ಥಿತಿಯಲ್ಲೂ ಅವರು ಇಡೀ ಸಾಂವಿಧಾನಿಕ ವ್ಯವಸ್ಥೆಯನ್ನೇ ಮಣಿಸಿ ಕುಣಿಸಬಲ್ಲರು. ಇದು ಸಾತ್ವಿಕ ಶಕ್ತಿಯೇ? ರಾಜಸವೇ? ತಾಮಸವೇ? ಏನೇ ಇರಲಿ, ಇದು ತುಂಬಾ ಅಪಾಯಕಾರಿ ಶಕ್ತಿ.

ಪದೇ ಪದೇ ಇಂತಹ ಪ್ರಕರಣಗಳು ಮರುಕಳಿಸುತ್ತಲೇ ಇರುವ ವಿದ್ಯಮಾನದ ಹಿಂದೆ ಇರುವುದು 'ಕೇವಲ ಕೆಲವೇ ಕೆಲವು' ವ್ಯಕ್ತಿಗಳ ತಪ್ಪು ಮಾತ್ರವಲ್ಲ. ಇಂತಹ ಧರ್ಮಗುರುಗಳನ್ನು ಸೃಷ್ಟಿಸುವ ವ್ಯವಸ್ಥೆ ಮತ್ತು ಆ ವ್ಯವಸ್ಥೆಗೊಂದು ಉನ್ನತ ಸ್ಥಾನಮಾನ ಕಲ್ಪಿಸಿಕೊಟ್ಟ ಈ ಸಮಾಜ ಎರಡನ್ನೂ ಇಲ್ಲಿ ಕಟಕಟೆಯಲ್ಲಿ ನಿಲ್ಲಿಸಬೇಕಾಗುತ್ತದೆ.

ಒಂದು ಸಮಾಜಕ್ಕೆ ಸಂತರ ಅಗತ್ಯವಿದೆ ಎನ್ನುವುದನ್ನು ಒಪ್ಪೋಣ. ಆದರೆ ಈಗಿನ ಧರ್ಮಗುರು ಸಮೂಹದಲ್ಲಿರುವ ಬಹುತೇಕರು ಸಂತರಲ್ಲ ಎನ್ನುವುದನ್ನು ಮೊದಲು ಗುರುತಿಸಬೇಕಿದೆ. ಇವರು, ಯಾವುದೋ ಒಂದು ಪೀಠ ಇದೆ, ಅದಕ್ಕೊಂದು ಅಧಿಪತಿ ಬೇಕು ಅಂತ ಪೀಠ ಏರಿದವರು; ಯಾವುದೋ ಒಂದು ತತ್ವ ಇದೆ, ಅದಕ್ಕೊಂದು ಪ್ರಚಾರಕ ಬೇಕು ಅಂತ ನೇಮಕಗೊಂಡವರು; ರಾಜಕೀಯ- ಆರ್ಥಿಕ ಶಕ್ತಿಗಳ ಜತೆಗೆ ವ್ಯವಹರಿಸಲು ಯಾವುದೋ ಒಂದು ಜಾತಿ–ಉಪಜಾತಿಗೆ ಧರ್ಮದ ಪೋಷಾಕು ತೊಟ್ಟ ಮಧ್ಯವರ್ತಿಗಳು ಬೇಕು, ಆ ಅಗತ್ಯವನ್ನು ಪೂರೈಸುವವರು ಇವರು. ಹೀಗೆ ಸಂತತ್ವದ ಲವಲೇಶವೂ ಇಲ್ಲದವರನ್ನು ಸಂತರಂತೆ ಗೌರವಿಸುವುದು ಸಮಾಜ ಮಾಡುವ ಮೊದಲ ತಪ್ಪು.

ಸಮಾಜದ ಆಷಾಢಭೂತಿ ನಡೆ ಎಷ್ಟರಮಟ್ಟಿಗಿದೆ ಎಂದರೆ, ಈ ವ್ಯಕ್ತಿಗಳು ಎಷ್ಟು ಹಣ ಸಂಪಾದಿಸಿ ಗುಡ್ಡೆ ಹಾಕಿದರೂ ಅದಕ್ಕೆ ಸಮಾಜದ ಆಕ್ಷೇಪವೇನಿಲ್ಲ. ಅವರು ತಮ್ಮ ತಮ್ಮ ಜಾತಿ ಅಥವಾ ಧರ್ಮದ ಪರವಾಗಿ ಸಂವಿಧಾನವಿರೋಧಿ ಅತಾರ್ಕಿಕ ಬೇಡಿಕೆಗಳನ್ನು ಮುಂದಿಟ್ಟು ಚುನಾಯಿತ ಸರ್ಕಾರಗಳನ್ನು ಬ್ಲ್ಯಾಕ್‌ಮೇಲ್ ಮಾಡಿದರೆ ಸಮಾಜ ಅದನ್ನು ಆಕ್ಷೇಪಿಸುವುದಿಲ್ಲ. ಯಾವುದೋ ರಾಜಕೀಯ ಪಕ್ಷ ತನ್ನ ಮತಬೇಟೆಯ ಪ್ರಯತ್ನದಲ್ಲಿ ಹೂಡುವ ಧರ್ಮೋನ್ಮಾದದ ಹೂಟದ ಭಾಗವಾಗಿ ಇವರು ಕಾಣಿಸಿಕೊಂಡರೆ ಸಮಾಜಕ್ಕೇನೂ ಅಭ್ಯಂತರ ಇಲ್ಲ. ಅಪರಾಧಿ ಹಿನ್ನೆಲೆಯ, ಸರ್ವಾಧಿಕಾರಿ ಧೋರಣೆಯ ಅಧಿಕಾರಸ್ಥ ನಾಯಕರನ್ನು ಇವರು ಓಲೈಸುತ್ತಿದ್ದರೆ ಅದಕ್ಕೆ ಕೂಡಾ ಸಮಾಜದ ಆಕ್ಷೇಪವೇನೂ ಇಲ್ಲ. ಲೌಕಿಕ- ಭೌತಿಕ ಬದುಕಿನಲ್ಲಿ ಈ ಮಟ್ಟಕ್ಕೆ ಮುಳುಗಿರುವ ಈ ವ್ಯಕ್ತಿಗಳು ಲೌಕಿಕ ಬದುಕಿನ ಸಹಜಭಾಗವೇ ಆಗಿರುವ ಹೆಣ್ಣಿನ ಸಂಪರ್ಕವನ್ನು ಮಾತ್ರ ಬೆಳೆಸುವಂತಿಲ್ಲ ಅಂತ ಸಮಾಜ ಅಪೇಕ್ಷಿಸುತ್ತದೆ!

ಯಾವುದೋ ಜಾತಿ ಅಥವಾ ನಿರ್ದಿಷ್ಟ ಸಮುದಾಯದವರು ತಮ್ಮ ರಾಜಕೀಯ ಅಥವಾ ಆರ್ಥಿಕ ಸಬಲೀಕರಣ ಸಾಧಿಸುವ ಹಾದಿಯಲ್ಲಿ ತೋರಿಕೆಗಾಗಿ ಅಲೌಕಿಕರಂತೆ ವರ್ತಿಸುವ ವ್ಯಕ್ತಿಗಳನ್ನು ಗುರುಗಳು ಎಂದು ಪ್ರತಿಷ್ಠಾಪಿಸಿಕೊಂಡರೆ ಅದಕ್ಕೇನೂ ಮಾಡುವ ಹಾಗಿಲ್ಲ. ಅಂತಹ ವ್ಯಕ್ತಿಗಳನ್ನು ಆ ಜಾತಿ, ಉಪಜಾತಿ ಇಲ್ಲವೇ ಸಮುದಾಯದ ಗುರುಗಳಂತೆ ಕಂಡರೆ ಕ್ಷೇಮ. ಅವರನ್ನು ಜಗದ್ಗುರುಗಳೆಂದೋ ಪರತತ್ವ-ಪರಿಣತರೆಂದೋ ಸಮಸ್ತ ಧರ್ಮದ ವಕ್ತಾರರೆಂದೋ ವೈಭವೀಕರಿಸಿದರೆ, ಅದರಿಂದಾಗಿ ಅಂತಹ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗುವ ಅಧಿಕಾರ ಯಾವುದೇ ನಿಯಂತ್ರಣಕ್ಕೆ ಸಿಗದೆ ಅಪಾಯಕಾರಿಯಾಗಿ ಪರಿಣಮಿಸುತ್ತದೆ.

ಇನ್ನು, ಇವರಲ್ಲಿ ಕೆಲವರು ಶಾಲೆ ನಡೆಸುತ್ತಿದ್ದಾರೆ, ಬಡವರಿಗೆ ಉಚಿತ ವಿದ್ಯಾಭ್ಯಾಸ ನೀಡುತ್ತಿದ್ದಾರೆ, ಅನ್ನ, ಔಷಧ ನೀಡುತ್ತಾರೆ ಎಂದೆಲ್ಲಾ ಹೇಳಿಕೊಂಡು ಇವರ ಅಸ್ತಿತ್ವವನ್ನು ಸಮರ್ಥಿಸುವವರಿದ್ದಾರೆ. ಈ ಸಮರ್ಥನೆ ಈಗ ಅರ್ಥಹೀನ. ಸರ್ಕಾರದ ಬಳಿ ಹಣವಿಲ್ಲದ ಕಾಲದಲ್ಲಿ, ವಿದ್ಯಾಭ್ಯಾಸ ಇನ್ನೂ ಒಂದು ಸಾರ್ವಜನಿಕ ಆದ್ಯತೆ ಆಗದಿದ್ದ ಕಾಲದಲ್ಲಿ ಧರ್ಮಗುರು ಅಂತ ಗುರುತಿಸಲ್ಪಡುವ ಕೆಲವು ವ್ಯಕ್ತಿಗಳು ಮಾಡಿದ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸೋಣ. ಈಗ ಸರ್ಕಾರದ ಬಳಿ ಹಣವಿದೆ, ಸಾರ್ವಜನಿಕ ಆದ್ಯತೆಗಳು ಬದಲಾಗಿವೆ, ಆಹಾರ ಭದ್ರತಾ ಕಾಯ್ದೆ ಇದೆ. ಹಾಗಾಗಿ ಬಡವರಿಗೆ ಅನ್ನ, ಔಷಧ, ಶಿಕ್ಷಣ ನೀಡದೆ ಅವರನ್ನು ಯಾವುದೋ ಖಾಸಗಿ ಸಂಸ್ಥೆಗಳ ಆಶ್ರಯಕ್ಕೆ ನೂಕಿದರೆ ಅದು ಸರ್ಕಾರದ ವೈಫಲ್ಯ.

ಸರ್ಕಾರಿ ಸೌಲಭ್ಯಗಳಿರುವಾಗಲೂ ಹೆತ್ತವರು ತಮ್ಮ ಮಕ್ಕಳನ್ನು ಉಚಿತ ಶಿಕ್ಷಣ ನೀಡುವ ಸರ್ಕಾರೇತರ ಸಂಸ್ಥೆಗಳಿಗೆ ಸೇರಿಸಲು ಹೊರಟರೆ ಅವರಿಗೆ ಇಷ್ಟು ಹೇಳಬಹುದು: ಸರ್ಕಾರದಿಂದ ಉಚಿತವಾಗಿ ಶಿಕ್ಷಣ ಪಡೆದರೆ ಅದು ಹಕ್ಕು. ಇನ್ನಾವುದೇ ಬಗೆಯ ಸರ್ಕಾರೇತರ ವ್ಯವಸ್ಥೆಯಿಂದ ಉಚಿತವಾಗಿ ಏನನ್ನಾದರೂ ಪಡೆದರೆ ಅದು ಹಂಗು. ಇಲ್ಲಿ ಹಂಗಿನ ಪ್ರಶ್ನೆ ಮಾತ್ರವಲ್ಲ, ಅಪಾಯದ ಪ್ರಶ್ನೆಯೂ ಇದೆ ಅಂತ ಚಿತ್ರದುರ್ಗದ ಪ್ರಕರಣವೂ ಸೇರಿದಂತೆ ಈಗಾಗಲೇ ಆಗಿಹೋದ ಹಲವು ಪ್ರಕರಣಗಳು ಸ್ಪಷ್ಟವಾಗಿ ಸಾರುತ್ತಿವೆ.

ಚುರುಮುರಿ

1000 ದಾಟಿದ ಸಾಧನೆ

• ಸುಮಂಗಲಾ

ಟೀವಿ ನೋಡುತ್ತಿದ್ದ ಬೆಕ್ಕಣ್ಣ 'ಅಚ್ಛೇ ದಿನ್ ಬಂತು, ಅಚ್ಛೇ ದಿನ್ ಬಂದೇ ಬಿಡ್ತು ಮಂಗಳೂರಿಗೆ' ಎಂದು ವದರಿತು.

'ಮಂಗಳೂರಿಗಷ್ಟೇ ಅಚ್ಛೇ ದಿನ್ ಹೆಂಗ್ ಬಂತಲೇ' ಅಚ್ಚರಿಯಿಂದ ಕೇಳಿದೆ.

'ಮೋದಿಮಾಮಾ ಮಂಗಳೂರಿಗೆ ಕಾಲಿಟ್ಟಿದ್ದೇ ಅಚ್ಛೇ ದಿನ್ ಬಂದವು...'

'ಅಂದ್ರ ಈಗೆಂಟು ವರ್ಷದಿಂದ ಅಚ್ಛೇ ದಿನ್ ಇರಲಿಲ್ಲಂತ ನೀ ಒಪ್ಪಿಗೊಂಡಿ ಹೌದಿಲ್ಲೋ...'

'ನೀ ಬರೇ ಅಡ್ಡಮಾತು ಹೇಳಬ್ಯಾಡ. ನೋಡು...ಮೋದಿಮಾಮಾ ಮಂಗಳೂರಿಗೆ 3,800 ಕೋಟಿ ರೂಪಾಯಿ ಕೊಡುಗೆ ಕೊಟ್ಟಾನ' ಎಂದು ಹೆಮ್ಮೆಯಿಂದ ಉಲಿಯಿತು.

'ಅವರೇನು ಜೇಬಿಂದ ರೊಕ್ಕ ತೆಗದುಕೊಟ್ಟಾರೇನಲೇ? ಅವೆಲ್ಲ ಹೊಸ ಯೋಜನೆಗಳ ಅಂದಾಜುವೆಚ್ಚ, ಇನ್ನಾ ಶಂಕುಸ್ಥಾಪನೆ, ಭೂಮಿಪೂಜೆ ಹಂತದಾಗೆ ಅದಾವು. ಕೊಡುಗೆ ಈಗೆದಕ್ಕೆ ಅಂದರ ಚುನಾವಣೆ ಮೇಲೆ ಕಣ್ಣಿಟ್ಟಾರೆ ಅಷ್ಟೇ. ಇದರಾಗೆ ಯಾರಿಗೆ ಎಷ್ಟು ಕಮಿಷನ್ ಹೋಗತೈತೋ ಯಾಂವ ಬಲ್ಲ' ಎಂದೆ.

'ಕೇಂದ್ರದಿಂದ ಕೊಡ್ತಾರಂದ್ರ ಪ್ರಧಾನಿನೇ ಕೊಟ್ಟಂಗೆ. ನೋಡಿಲ್ಲಿ, ನಿರ್ಮಲಕ್ಕ ತೆಲಂಗಾಣದ ಕಾಮಾರೆಡ್ಡಿ ಜಿಲ್ಲೆಯ ಜಿಲ್ಲಾಧಿಕಾರಿಗೆ ಹೆಂಗೆ ಕ್ಲಾಸ್ ತಗೊಂಡಾಳ. ಪಡಿತರ ವಿತರಣೆಯಲ್ಲಿ ಕೇಂದ್ರದ ಪಾಲು ರಾಜ್ಯಕ್ಕಿಂತ ಜಾಸ್ತಿ ಐತಿ, ಹಂಗಿದ್ದಾಗ ಪಡಿತರ ಅಂಗಡಿ ಬಾಗಿಲಿನ ಮ್ಯಾಗೆ ನಗ್ತಾ ಇರೋ ಮೋದಿಮಾಮಾನ ಪೋಟೊ ಎದಕ್ಕ ಹಾಕಿಲ್ಲಂತ ಛಲೋತ್ನಾಗಿ ಬೈದಾಳ' ಬೆಕ್ಕಣ್ಣ ವಿವರಿಸಿತು.

'ಕೇಂದ್ರಕ್ಕೆ ಪಡಿತರದ ಅಕ್ಕಿ ಎಲ್ಲಿಂದ ಬರತೈತಿ?'

'ರಾಜ್ಯದಿಂದ'.

'ರಾಜ್ಯಕ್ಕೆ ಯಾರು ಕೊಡ್ತಾರೆ'?

'ರೈತರು ಭತ್ತ ಬೆಳೆದುಕೊಡ್ತಾರ'.

'ಅಂದ್ರ ಪಡಿತರ ಅಂಗಡಿಯ ಬಾಗಿಲಿನ ಮ್ಯಾಗೆ ರೈತರ ಫೋಟೊ ಇರಬೇಕಿಲ್ಲೋ? ಅದ್ಕೇ ಟಿಆರ್‌ಎಸ್ ಪಕ್ಷದ ಕಾರ್ಯಕರ್ತರು ಗ್ಯಾಸ್ ಸಿಲಿಂಡರ್ ಸಾವಿರ ದಾಟೈತಂತ ಅದ್ರ ಮ್ಯಾಗೆ ನಗ್ತಾ ಇರೋ ಮೋದಿಮಾಮಾನ ಫೋಟೊ ಹಾಕ್ಯಾರ' ಪೇಪರು ತೆಗೆದು ಸುದ್ದಿ ತೋರಿಸಿದೆ.

ಬೆಕ್ಕಣ್ಣ ಪೆಂಗನಂತೆ 'ಅಲ್ವಾ ಮತ್ತೇ ... ಸಾವಿರ ದಾಟಿದ ಸಾಧನೆ' ಎಂದಿತು!

ಸಂಗತ

ಕಲಿಯುವವರ ಮುಖದಲ್ಲಷ್ಟೇ ನಗು ಸಾಕೆ?

ಸಾಮಾಜಿಕ ವ್ಯವಸ್ಥೆಯು ತಾನು ಮಾತ್ರ ಬಹಳ ದೂರಬಂದು ಶಿಕ್ಷಕ ಮಾತ್ರ ಹೇಗಿದ್ದಾನೊ ಹಾಗೆಯೇ ಇರಬೇಕೆಂದು ಬಯಸುವುದು ತರವಲ್ಲ

• ಸದಾಶಿವ್ ಸೊರಟೂರು

'ಗುರು ದೊಡ್ಡ ಹೆಸರು, ನಾನು ಸಂಬಳದ ಉಪಾಧ್ಯಾಯ' ಎನ್ನುತ್ತಿದ್ದರು ದ.ರಾ.ಬೇಂದ್ರೆ. ಮೇಷ್ಟ್ರುಗಳು ಗುರುವಿನ ಪಟ್ಟ ಬಿಡಿಸಿಕೊಂಡು ತುಂಬಾ ದಿನಗಳೇ ಆದವು. ಮೇಷ್ಟ್ರು ಆದವನು ಸಮಾಜದ ಮಧ್ಯದಿಂದಲೇ ಬಂದವನು ವಿನಾ ಎಲ್ಲಿಂದಲೋ ಅವತರಿಸಿದವನಲ್ಲ. ಹಾಗಾಗಿ ಇವತ್ತಿನ ಸಮಾಜದಂತೆ ಮೇಷ್ಟ್ರು ಕೂಡ ಇರುತ್ತಾನೆ.

ತಂದೆ-ತಾಯಿಯರ ಪಾತ್ರಗಳೇ ದುರ್ಬಲವಾಗುತ್ತಿರುವ ಈ ಹೊತ್ತಿನಲ್ಲಿ, ಶಿಕ್ಷಕನಾದವನು ಮಾತ್ರ ಅದೇ ಮೊದಲಿನ ಗುರುವಿನಂತೆ ಇರಬೇಕೆಂದು ಬಯಸುವುದು ತಪ್ಪಾಗುತ್ತದೆ. ಅಷ್ಟಕ್ಕೂ ಪಾಠ ಹೇಳುವುದು ಹೆಚ್ಚಿನವರಿಗೆ ಒಂದು ಜೀವನೋಪಾಯದ ವೃತ್ತಿಯಾಗಿದೆಯೇ ವಿನಾ ಅದು ಸೇವೆಯ ಗಡಿ ದಾಟಿ ತುಂಬಾ ದಿನಗಳಾದವು. ಸಾಮಾಜಿಕ ವ್ಯವಸ್ಥೆಯು ತಾನು ಮಾತ್ರ ಬಹಳ ದೂರಬಂದು ಶಿಕ್ಷಕ ಮಾತ್ರ ಹೇಗಿದ್ದಾನೊ ಹಾಗೆಯೇ ಇರಬೇಕೆಂದು ಬಯಸುವುದು ತರವಲ್ಲ.

ಈಗ ಬರೀ ಕಲಿಸುವುದಷ್ಟೇ ಮೇಷ್ಟ್ರು ಕೆಲಸವಲ್ಲ. ಅವನಷ್ಟು ಏಕಪಾತ್ರಾಭಿನಯ ಮಾಡುವವರಿಲ್ಲ. ಪಠ್ಯಪುಸ್ತಕ, ಯೂನಿಫಾರಂ ಹೊರಬೇಕು, ಜನ, ದನ, ಕೋಳಿ ಎಣಿಸಬೇಕು, ಚುನಾವಣೆಗೆ ಹೋಗಬೇಕು, ಅಡುಗೆ ಲೆಕ್ಕ, ತರಕಾರಿ, ಮೊಟ್ಟೆ, ಬಾಳೆಹಣ್ಣು ಖರೀದಿ, ಶೌಚಾಲಯ ಜಾಗೃತಿ, ಆನ್‌ಲೈನ್‌ನಲ್ಲಿ ಮಕ್ಕಳ ಕಲಿಕಾ ಮಾಹಿತಿ ಸತತವಾಗಿ ತುಂಬುವುದು, ಕಂಪ್ಯೂಟರ್ ಮುಂದೆ ಕೂತು ಪಾಲಕರ ಪರವಾಗಿ ಸ್ಕಾಲರ್‌ಶಿಪ್ ಅರ್ಜಿ ಹಾಕುವುದರಿಂದ ಹಿಡಿದು ಶಾಲೆ ಸೋರುತ್ತಿದ್ದರೆ ಹತ್ತಿ ಹೆಂಚು ಹೊದಿಸುವವರೆಗೂ ಅವನ ಕೈಯಲ್ಲಿ ಕೆಲಸಗಳಿವೆ, ಪಾತ್ರಗಳಿವೆ.

ಮೊನ್ನೆಯಷ್ಟೆ ಬಂದ ವರದಿಯೊಂದು, ಒತ್ತಡದ ಪರಿಣಾಮವಾಗಿ ಶೇ 42ರಷ್ಟು ಶಿಕ್ಷಕಿಯರು ಮಧುಮೇಹ ಮತ್ತು ರಕ್ತದೊತ್ತಡದಿಂದ ಬಳಲುತ್ತಿದ್ದಾರೆ ಎನ್ನುತ್ತದೆ. ಆದರೆ ಈ ಸಮಾಜ ಒಂದೆರಡು ಉದಾಹರಣೆಗಳನ್ನು ತೆಗೆದುಕೊಂಡು, ಈಗೀಗ ಮೇಷ್ಟ್ರುಗಳು ಸರಿಯಿಲ್ಲ ಅನ್ನುವ ತೀರ್ಮಾನಕ್ಕೆ ಬರುತ್ತದೆ. ರಸ್ತೆಯಲ್ಲಿ ನಡೆದುಹೋಗುವ ಯಾವುದೋ ಹುಡುಗನ ಉದ್ಧಟತನವನ್ನು ಕಂಡ ಸಮಾಜ 'ಯಾರು ನಿಂಗೆ ಪಾಠ ಹೇಳಿದ್ದು?' ಅಂತ ನೇರವಾಗಿ ಶಿಕ್ಷಕನ ಬುಡಕ್ಕೆ ಬರುತ್ತದೆ. ಆದರೆ ಅದೇ ಸಾಧನೆ ಮಾಡಿದರೆ ಮಾತ್ರ 'ಯಾರ ಮಗ' ಎಂದು ಕೇಳುತ್ತದೆ. ಈಗೀಗ ಮಗುವಿನ ಮೇಲೆ ಶಿಕ್ಷಕರಿಗಿಂತ, ಶಾಲೆಗಿಂತ ಹೆಚ್ಚು ಪ್ರಭಾವ ಬೀರಲು ಅವನದೇ ಮನೆಯ ಪರಿಸರ, ಮಾಧ್ಯಮಗಳಿವೆ. ಮಕ್ಕಳನ್ನು ಅಡ್ಡದಾರಿಗೆ ಎಳೆಯುವ ಹೆದ್ದಾರಿಗಳು ಮನೆ ಮುಂದೆ ಬಂದು ನಿಂತಿವೆ. ಕಲಿಸುವ ಶಿಕ್ಷಕ ಗೌಣವಾಗುತ್ತಿರುವುದು ಇದೇ ಕಾರಣಕ್ಕೆ. 'ಯ ರ ಲ ವ ಕಲಿಸಿದವನನ್ನೇ ಯಾರ್ಲಾ ಅಂವ?' ಅನ್ನುವ ಪೀಳಿಗೆಯ ಮಧ್ಯೆ, ಒಬ್ಬ ಒಳ್ಳೆಯ ಶಿಕ್ಷಕ ನಿಜಕ್ಕೂ ಕಳೆದು ಹೋಗುತ್ತಿದ್ದಾನೆ.

ಮಕ್ಕಳು ನಲಿಯುತ್ತಾ ಕಲಿಯಬೇಕು. ಅದರಂತೆ ಕಲಿಸುವವನು ಕೂಡ ಅಷ್ಟೇ ಖುಷಿಯಿಂದ ಕಲಿಸಬೇಕು. ಆಗ ಮಾತ್ರ ಬೋಧನೆ ಪರಿಣಾಮಕಾರಿ. ನಾವೀಗ ಯೋಚಿಸಬೇಕಾದದ್ದು ಕಲಿಸುವವರ ಮುಖದಲ್ಲಿ ನಗು ಇದೆಯಾ ಎಂಬ ಬಗ್ಗೆ. 'ಶಿಕ್ಷಕನ ಸ್ಥಾನಮಾನಗಳು ಉತ್ತಮವಾಗಿ ಇಲ್ಲದ ನಾಡು ಪ್ರಗತಿ ಕಾಣುವುದು ಕಷ್ಟ' ಎಂದು ಹೇಳುತ್ತದೆ ಒಂದು ಇಂಗ್ಲಿಷ್ ನಾಣ್ನುಡಿ.

ಸರಿಯಾದ ಸಮಯಕ್ಕೆ ಆಗದ ಸಂಬಳ, ನಿವೃತ್ತಿ ಅಂಚಿಗೆ ಬಂದರೂ ಸಿಗದ ಬಡ್ತಿ, ಒಂದೇ ಬಗೆಯ ಕೆಲಸವಾದರೂ ಕೇಂದ್ರಕ್ಕೂ ರಾಜ್ಯಕ್ಕೂ ಬೇರೆ ಬೇರೆ ವೇತನ ಎನ್ನುವ ಅಸಮಾಧಾನ, 'ಬಡಮೇಷ್ಟ್ರು' ಅನ್ನುವ ಪದವನ್ನು ನಾವು ಅಷ್ಟೇ ಜತನವಾಗಿ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಶಿಕ್ಷಕರ ಪಾಲಿಗೆ ಲೈಫ್ ಟೈಮ್ ಖುಷಿಕೊಡುವ ವರ್ಗಾವಣೆ ಶೇ 90 ಶಿಕ್ಷಕರಿಗೆ ತಮ್ಮ ಸೇವಾವಧಿಯಲ್ಲಿ ಒಮ್ಮೆಯೂ ಸಿಗುವುದಿಲ್ಲ. ತರಬೇತಿಗಳು ಯಾಕೋ ಅವರನ್ನು ಅಪ್‌ಡೇಟ್ ಮಾಡುತ್ತಿಲ್ಲ. ಶಾಲೆ ಮುಚ್ಚುವುದರ ಬಗ್ಗೆ ಈಗ ಅವನನ್ನೇ ಮೊದಲ ಹೊಣೆಗಾರನನ್ನಾಗಿ ಮಾಡಿ ನಿಲ್ಲಿಸಲಾಗಿದೆ. ಇದಲ್ಲದೆ ಇಲಾಖೆಯ ಒಳಗೂ ಹತ್ತಾರು ಒತ್ತಡಗಳಿವೆ.

ಬೋಧಿಸುವ ವೃತ್ತಿ ಯಾಕೆ ಬೇರೆ ವೃತ್ತಿಗಳಷ್ಟು ಆಕರ್ಷಣೀಯವಾಗಿಲ್ಲ, ಯಾಕೆ ಯುವಕರು ಶಿಕ್ಷಕ ವೃತ್ತಿಯನ್ನು ಕೊನೆಯ ಆಯ್ಕೆಯಾಗಿ ಇಟ್ಟುಕೊಳ್ಳುತ್ತಾರೆ? ಉತ್ತರವೇನೂ ಕಷ್ಟವಲ್ಲ. ಏಕೆಂದರೆ ಹೆಚ್ಚು ಸಂಬಳ, ಹೆಚ್ಚು ಅಧಿಕಾರದ ವೃತ್ತಿಯತ್ತಲೇ ಎಲ್ಲರ ಗಮನ.

ಶಿಕ್ಷಕ ಸರಿಯಾಗಿ ಬೋಧಿಸುತ್ತಿಲ್ಲ. ಅವನು ಬಹಳಷ್ಟು ಓದಿಕೊಳ್ಳುವುದಿಲ್ಲ. ರಾಜಕೀಯ ಮಾಡ್ತಾನೆ. ಸರಿಯಾದ ಟೈಮಿಗೆ ಸ್ಕೂಲಿಗೆ ಬರಲ್ಲ... ಹೀಗೆ ಕೆಲವು ದೂರುಗಳಿವೆ. ಇವತ್ತಿಗೂ ಮೊದಲ ಬಾರಿಗೆ ಶಾಲೆಗೆ ಬರುವ ಮಗುವಿಗೆ ಶಿಕ್ಷಕನೇ ದೇವರು. ಶಿಕ್ಷಕ ವೃತ್ತಿ ಅತೀ ಜವಾಬ್ದಾರಿಯುತವಾದದ್ದು, ತಮ್ಮ ವೈಯಕ್ತಿಕ ವಿಚಾರಗಳಿಂದ ಮಕ್ಕಳಿಗೆ ಅನ್ಯಾಯವಾಗುವುದು ಸರಿಯಲ್ಲ ಎಂದು ಯೋಚಿಸುವ ಶಿಕ್ಷಕರ ಸಂಖ್ಯೆ ಕಡಿಮೆ. ಅವೆಲ್ಲವೂ ಸರಿಯಾದರೆ ಇಡೀ ಸಮಾಜಕ್ಕೆ ಶಿಕ್ಷಕರನ್ನು ದೂರಲು ಒಂದೇ ಒಂದು ಕಾರಣ ಇರುವುದಿಲ್ಲ.

ಮತ್ತೊಂದು ಶಿಕ್ಷಕರ ದಿನಾಚರಣೆ ಬಂದಿದೆ. ಮೇಷ್ಟ್ರುಗಳನ್ನು ಹೊಗಳಲು ಎಲ್ಲರೂ ಸಜ್ಜಾಗಿದ್ದಾರೆ. ಅವನಿಗೆ ಹೊಗಳಿಕೆ ಅಷ್ಟೇ ಸಾಕೆ? ಬದಲಾದ ಕಾಲದಲ್ಲಿ ತನ್ನ ಸ್ಥಾನಕ್ಕಾಗಿ ಹೊಡೆದಾಡುವ ಈ ಹೊತ್ತಿನಲ್ಲಿ, ಶಿಕ್ಷಕರ ದಿನದಂದು ಅವನ ಮುಖದಲ್ಲಿ ಒಂದು ನಗು ತರುವ ಪ್ರಯತ್ನವಾದರೂ ಆಗಬೇಕಲ್ಲವೇ? ಈ ದಿನಕ್ಕೊಂದು ಅರ್ಥವಾದರೂ ಬರಬೇಕಲ್ಲವೇ?

ಲೇಖಕ: ಶಿಕ್ಷಕ, ಹೊನ್ನಾಳಿ

ವಾಚಕರ ವಾಣಿ

ಆಡಳಿತ ನೇರ್ಪುಗೊಳ್ಳಬೇಕೆಂದರೆ...

'ರಾಜ್ಯದಲ್ಲೂ ಭ್ರಷ್ಟಾಚಾರಮುಕ್ತ, ಅಭಿವೃದ್ಧಿಪರ ಸರ್ಕಾರದ ಅಗತ್ಯ ಇದೆ' ಎಂದು ಉದ್ಯಮಿ ಮೋಹನದಾಸ್ ಪೈ ಅವರು ಟ್ವೀಟ್ ಮೂಲಕ ಪ್ರಧಾನಿಯನ್ನು ಕೋರಿದ್ದಾರೆ. 'ನೀವು ದೆಹಲಿಯಿಂದ ನಡೆಸುತ್ತಿರುವ ಭ್ರಷ್ಟಾಚಾರಮುಕ್ತ ಸರ್ಕಾರವು ಇಲ್ಲಿಯೂ ಬೇಕು' ಎಂಬುದು ಪೈ ಅವರ, ಅಂತೆಯೇ ಸಾಮಾನ್ಯ ಜನರ ಅಪೇಕ್ಷೆ ಕೂಡ. ಶೇ 40ರಷ್ಟು ಕಮಿಷನ್ ಈ ಸಂದರ್ಭದಲ್ಲಿ ನೆನಪಾಗುತ್ತದೆ. ಪ್ರಧಾನಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಪಕ್ಷದ ಪ್ರಮುಖರ ಸಭೆಯಲ್ಲಿ ಪ್ರಸ್ತಾಪ ಮಾಡುವುದು ಅಗತ್ಯ.

ಸ್ವಾತಂತ್ರ್ಯೋತ್ಸವದಂದು ದೆಹಲಿಯ ಕೆಂಪುಕೋಟೆಯಿಂದ ಮಾತನಾಡಿದ ಪ್ರಧಾನಿ, ಭ್ರಷ್ಟಾಚಾರದ ವಿರುದ್ಧ ಯುದ್ಧ ಸಾರಿದ್ದಾರೆ. ಈ ಯುದ್ಧವನ್ನು ಅವರು ಕರ್ನಾಟಕದಿಂದ ಪ್ರಾರಂಭಿಸಲಿ. ಮೊದಲು ಪಕ್ಷದಲ್ಲಿ ಧಂಡಿಯಾಗಿ ಸಂಗ್ರಹವಾಗಿರುವ ಕೊಳಕುಗಳನ್ನು, ಹಳಸಿದವರನ್ನು ಮುಲಾಜಿಲ್ಲದೆ ತೆಗೆದುಹಾಕುವ ಪ್ರಕ್ರಿಯೆಯಿಂದ ಬಿಜೆಪಿಯ ಶುದ್ಧೀಕರಣವನ್ನು ಪ್ರಾರಂಭಿಸುವುದು ಮುಖ್ಯ. ಪ್ರಧಾನಿ ಈ ಬಗ್ಗೆ ಸಂದೇಹಾತೀತವಾದ ಆದೇಶವನ್ನು ಪಕ್ಷಕ್ಕೆ ನೀಡುವುದಲ್ಲದೆ, ಅದರ ಅನುಷ್ಠಾನದ ಬಗ್ಗೆ ನಿಗಾ ವಹಿಸಬೇಕು. ಅದರಿಂದ, ಪಕ್ಷದ ವರ್ಚಸ್ಸನ್ನು ಹೆಚ್ಚಿಸಲು ಸಾಧ್ಯ. ಇದಾದಾಗ ಆಡಳಿತ ನೇರ್ಪುಗೊಳ್ಳುತ್ತದೆ. ಜನರಲ್ಲಿ ಭರವಸೆ ಮೂಡುತ್ತದೆ. ಆಸೆ, ಅಪೇಕ್ಷೆಗಳು ಬೇಕಾದಷ್ಟಿವೆ. ಅವುಗಳನ್ನು ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಪೂರೈಸುವವರು ಎಲ್ಲಿದ್ದಾರೆ? ಇದು ಈಗ ಜನರ ಮುಂದಿರುವ ಪ್ರಶ್ನೆ.

ಸಾಮಗ ದತ್ತಾತ್ರಿ, ಬೆಂಗಳೂರು

ಗುರುವೇ ನಮಃ...

ಡಾ. ಎಸ್.ರಾಧಾಕೃಷ್ಣನ್‌ರ
ಜನ್ಮದಿನ ಇಂದು,
ಅರ್ಥಾತ್ ಶಿಕ್ಷಕರ ದಿನ,
ಹೇಳೋಣ ಶ್ರೀ
ಗುರುವೇ ನಮಃ,
ಅನಿಸದಿರಲಿ ಎಂದಿಗೂ
ಗುರು ಏನು ಮಹಾ?!

ಮ.ಗು.ಬಸವಣ್ಣ
ಸುತ್ತೂರು, ಮೈಸೂರು

ಪರಿಹಾರ ಕಾರ್ಯ: ವಿಳಂಬ ಸಲ್ಲ

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯು ಗೌರಿ ಗಣೇಶ ಹಬ್ಬದ ಸಂಭ್ರಮವನ್ನೇ ಕಸಿದುಕೊಂಡಿದೆ. ಮಳೆಯಿಂದ ಆಗಿರುವ ಹಾನಿಯ ಕುರಿತು ಸರ್ಕಾರ ಲೆಕ್ಕ ಕೊಟ್ಟಿದೆಯಾದರೂ ಲೆಕ್ಕಕ್ಕೆ ಸಿಗದಿರುವ ಸಾವು-ನೋವು ಮತ್ತು ನಷ್ಟದ ಪ್ರಮಾಣ ಹಲವು ಪಟ್ಟು ಹೆಚ್ಚಾಗಿರುವ ಸಾಧ್ಯತೆ ಇದೆ. ಸರ್ಕಾರದ ಅಂದಾಜಿನಂತೆ, 2019ರಿಂದ 2021ರವರೆಗೆ ಮಳೆಯಿಂದ ಆಗಿರುವ ಒಟ್ಟಾರೆ ನಷ್ಟ ₹ 2 ಲಕ್ಷ ಕೋಟಿ. ಆದರೂ ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಿರುವ ಪರಿಹಾರದ ಹಣ ಸುಮಾರು ₹ 4,200 ಕೋಟಿ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಕಷ್ಟಕ್ಕೆ ಹೆಗಲು ಕೊಟ್ಟು ಆಸರೆಯಾಗಬೇಕಾದ ಕೇಂದ್ರ ಸರ್ಕಾರವು ಇದರಿಂದ ನುಣುಚಿಕೊಳ್ಳುತ್ತಲೇ ಇದೆ. ಅದು ಹಾಗೆ ಮಾಡಬಾರದು.

ಕೇಂದ್ರವು ಕೂಡಲೇ ಅಧ್ಯಯನ ತಂಡವೊಂದನ್ನು ರಚಿಸಿ, ಅದರಿಂದ ತುರ್ತು ವರದಿ ತರಿಸಿಕೊಂಡು ಪರಿಹಾರ ಘೋಷಣೆ ಮಾಡಬೇಕು. ರಾಜ್ಯದಿಂದ ಆಯ್ಕೆಯಾಗಿರುವ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ರಾಜ್ಯಕ್ಕೆ ಪರಿಹಾರದ ಹಣ ತಂದುಕೊಡಲು ಶ್ರಮಿಸಬೇಕು. ರಾಜ್ಯ ಸರ್ಕಾರವು ಅಲ್ಲಿಯವರೆಗೆ ಕಾಯದೆ ಪರಿಹಾರ ಕಾರ್ಯಗಳಿಗೆ ಚುರುಕು ಮುಟ್ಟಿಸಬೇಕು. ಸಂತ್ರಸ್ತರಿಗೆ ಆಸರೆಯಾಗಿ ನಿಲ್ಲಬೇಕು.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

ಎಲ್ಲ ಇಲಾಖೆಗಳಿಗೂ ಬರಲಿ ಬಯೊಮೆಟ್ರಿಕ್

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬಯೊಮೆಟ್ರಿಕ್ ಹಾಜರಾತಿ ಪದ್ಧತಿಯನ್ನು ಕಡ್ಡಾಯಗೊಳಿಸಿರುವುದು ಸ್ವಾಗತಾರ್ಹ. ಎಲ್ಲ ಇಲಾಖೆಗಳಲ್ಲೂ ಈ ಪದ್ಧತಿಯನ್ನು ಅಳವಡಿಸುವುದು ಸೂಕ್ತ. ಇದರಿಂದ ನೌಕರ ವರ್ಗವು ಕಚೇರಿಯ ವೇಳಾಪಟ್ಟಿಗೆ ಅನುಗುಣವಾಗಿ ಕರ್ತವ್ಯದಲ್ಲಿ ಕಡ್ಡಾಯವಾಗಿ ಹಾಜರಿರುವಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಮೂಲಕ ಆಡಳಿತದಲ್ಲಿ ಸುಧಾರಣೆ ತರಬಹುದು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಆಘಾತಕಾರಿ, ಸಂವೇದನಾರಹಿತ ನಡೆ

ತಲೆಯಲ್ಲಿ ಏನು ಓಡುತ್ತಿರುತ್ತದೋ ಅದೇ ತುಟಿಯಿಂದಾಚೆ ಹೊರಬರುತ್ತದೆ ಎಂಬ ಮಾತಿದೆ. ಅಂತೆಯೇ ಅಹವಾಲು ಹೇಳಿಕೊಳ್ಳಲು ಬಂದ ಮಹಿಳೆಯೊಬ್ಬರನ್ನು ಶಾಸಕ ಅರವಿಂದ ಲಿಂಬಾವಳಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಹಾಗೂ ಅದನ್ನೇ ಸಮರ್ಥಿಸಿಕೊಂಡಿದ್ದಾರೆ. ಆ ಮಹಿಳೆ ತಪ್ಪೇ ಎಸಗಿರಲಿ, ಆದರೂ ಇಂಥ ವರ್ತನೆ ಖಂಡಿತ ಆಘಾತಕರ. ಎಂಥ ನಿರಕ್ಷರಕುಕ್ಷಿಯೇ ಇರಲಿ, ಅಪರಿಚಿತ ಮಹಿಳೆಯರೊಂದಿಗೆ ಇಷ್ಟು ಕುಹಕತನ ತೋರಲಾರ.

ರಾಮಚಂದ್ರ ಎಸ್.ಕುಲಕರ್ಣಿ, ಧಾರವಾಡ

ಗಣೇಶ ವಿಸರ್ಜನೆ ಅರ್ಥಪೂರ್ಣವಾಗಿರಲಿ

ಎಲ್ಲೆಲ್ಲೂ ಈಗ ಗಣೇಶೋತ್ಸವದ ಸಂಭ್ರಮ. ಅಲ್ಲಲ್ಲಿ ಪುರಾಣ ಪ್ರವಚನ, ಕೆಲವೆಡೆ ಸಾಂಸ್ಕೃತಿಕ ಕಾರ್ಯಕ್ರಮ, ಕ್ಯಾಸೆಟ್ ಹಾಡುಗಳ ಸುರಿಮಳೆ. ಒಂದು ರೀತಿಯಲ್ಲಿ ಈ ಹಬ್ಬವು ಮನರಂಜನೆಯೊಂದಿಗೆ ಆಧ್ಯಾತ್ಮಿಕ ಅರಿವು ಮೂಡಿಸುವ ಧರ್ಮಸಂಸ್ಕೃತಿಯಾಗಿದೆ. ಈಗ ಅಷ್ಟೇ ಸರಳವಾಗಿ ಗಣೇಶನ ವಿಸರ್ಜನೆಯೂ ಆಗಬೇಕೆಂಬುದು ಕಳಕಳಿ.

ವಿಸರ್ಜನೆ ವೇಳೆ ಶಬ್ದಮಾಲಿನ್ಯಕ್ಕೆ ಅವಕಾಶ ನೀಡುವುದು ಬೇಡ. ಅದರ ದುಷ್ಪರಿಣಾಮಗಳು ಎಲ್ಲರಿಗೂ ತಿಳಿದಿವೆ. ತಿಳಿದೂ ತಪ್ಪು ಎಸಗುವುದು ಬೇಡ. ಕಿವಿಗೆ ಇಂಪು ನೀಡುವ ಭಕ್ತಿಗೀತೆ, ಮಂಗಳವಾದ್ಯಗಳ ಮೂಲಕ ಮೆರವಣಿಗೆ ಸಾಗಿದರೆ ಚೆಂದ. ಇಂತಹ ಆಚರಣೆಯಿಂದ ಹಣದ ಅಪವ್ಯಯ ಆಗದು. ಪರಿಸರಮಾಲಿನ್ಯ, ಶಬ್ದಮಾಲಿನ್ಯ ಇರದು.

ಜಿ.ಎಸ್.ಸುತಾರ, ಜಮಖಂಡಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಿಕ್ಷಕರ ದಿನ ಇಂದು

ಗುರುನಮನ

ವಿವಿಧ ಕ್ಷೇತ್ರಗಳ ಸಾಧಕರು ತಮ್ಮ ಸಾಧನೆಗೆ ಅಡಿಪಾಯ ಹಾಕಿಕೊಟ್ಟ ಗುರುಗಳನ್ನು ಇಲ್ಲಿ ನೆನಪಿಸಿಕೊಂಡಿದ್ದಾರೆ

ಅನುಭವಿಗಳ ನುಡಿಯೇ ಪ್ರೇರಣೆ

ಯಶಸ್ವಿ ಉದ್ಯಮಿಯಾಗಿ ಬೆಳೆಯಲು ಅನುಭವಿ, ಹಿರಿಯ ಉದ್ಯಮಿಗಳ ಮಾತುಗಳೇ ಸ್ಫೂರ್ತಿ. ನಾನು ಹುಟ್ಟಿದ್ದು, ಹಾಸನ ಜಿಲ್ಲೆಯ ಹಾಲೇನಹಳ್ಳಿಯಲ್ಲಿ. ಅಲ್ಲಿ ರೈತರು ಎದುರಿಸುತ್ತಿದ್ದ ವಿದ್ಯುತ್ ಸಮಸ್ಯೆಯನ್ನು ಗಮನಿಸಿ ಸೋಲಾರ್ ಪಂಪ್ ತಯಾರಿಸಲು ನಿರ್ಧರಿಸಿದೆ. 2017ರಲ್ಲಿ ಬೆಂಗಳೂರಿನಲ್ಲಿ ಮೆಕ್‌ವಿನ್ ಟೆಕ್ನಾಲಜೀಸ್ ಕಂಪನಿಯನ್ನು ಸ್ಥಾಪಿಸಿದೆ. ಈ ಕಂಪನಿಯು ಈಗ ವಾರ್ಷಿಕ ₹84 ಕೋಟಿ ವಹಿವಾಟು ನಡೆಸುತ್ತಿದೆ.

ಈ ವರ್ಷದ ಅಂತ್ಯದ ವೇಳೆಗೆ ವಹಿವಾಟು ಮೊತ್ತವು ₹100 ಕೋಟಿ ದಾಟಲಿದೆ. ಇನ್ವರ್ಟರ್, ವಿದ್ಯುತ್ ಚಾಲಿತ ವಾಹನಗಳಿಗೆ ಮೋಟರ್ ತಯಾರಿಕೆಗೆ ಈಗ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ಈ ಹಾದಿಯಲ್ಲಿ ಹಲವು ಅನುಭವಿ ಉದ್ಯಮಿಗಳ ಮಾತುಗಳು ಉತ್ತೇಜನ ನೀಡಿವೆ. ‘ಪಾಲುದಾರಿಕೆಯೊಂದಿಗೆ ಉದ್ದಿಮೆ ಮಾಡಬಾರದು’ ಎನ್ನುವ ಅನುಭವಿಗಳ ಮಾತನ್ನು ಪಾಲಿಸುತ್ತಿದ್ದೇನೆ. ಹಣಕಾಸಿನ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳುವಂತೆ ಕ್ಯಾಪ್ಟನ್ ಗೋಪಿನಾಥ್ ಅವರು ನನಗೆ ಸಲಹೆ ನೀಡಿದರು. ‘ಡೌನ್ ಟು ಅರ್ತ್’ ಆಗಿರಬೇಕು ಎನ್ನುವ ಇನ್ಫೊಸಿಸ್ ಸ್ಥಾಪಕ ನಾರಾಯಣ ಮೂರ್ತಿ ಅವರ ಮಾತನ್ನು ಅನುಸರಿಸುತ್ತಿದ್ದೇನೆ.

ನೇರವಾಗಿ 216 ಮಂದಿ, ಪರೋಕ್ಷವಾಗಿ 300 ಮಂದಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಚೆನ್ನೈನಲ್ಲಿ 13 ಎಕರೆ ಜಾಗ ಖರೀದಿಸಿದ್ದು, ಮೋಟರ್ ತಯಾರಿಕಾ ಘಟಕವು ಐದರಿಂದ ಆರು ತಿಂಗಳಿನಲ್ಲಿ ಕಾರ್ಯಾರಂಭ ಮಾಡಲಿದೆ. ಈ ವರ್ಷದಲ್ಲಿ ಒಟ್ಟು ಉದ್ಯೋಗಿಗಳ ಸಂಖ್ಯೆ ಗರಿಷ್ಠ ಒಂದು ಸಾವಿರಕ್ಕೆ ತಲುಪಲಿದೆ.

ಶಿವಕುಮಾರ ಎಚ್.ಎಂ., ಮೆಕ್‌ವಿನ್ ಕಂಪನಿಯ ಸಂಸ್ಥಾಪಕ ಮತ್ತು ನಿರ್ದೇಶಕ

ವಿಜ್ಞಾನದಲ್ಲಿ ಆಸಕ್ತಿ ಹುಟ್ಟಿಸಿದ ಮೇಡಂ



ಎಚ್.ಎಸ್.ಸುಧೀರ

ಶಾಲಾ ದಿನಗಳಲ್ಲೇ ವಿಜ್ಞಾನದ ಬಗ್ಗೆ ವಿಶೇಷ ಆಸಕ್ತಿ ಇತ್ತು. ಅದರಲ್ಲೂ ಆವಿಷ್ಕಾರಗಳ ಬಗ್ಗೆ ಎಲ್ಲಿಲ್ಲದ ಕುತೂಹಲ. ಪ್ರೌಢಶಾಲೆಗೆ ಬಂದಾಗ ವಿಜ್ಞಾನದಲ್ಲಿ ತಿಳಿಯುವುದು ಬಹಳಷ್ಟು ಇದೆ ಎಂಬ ತಿಳಿವಳಿಕೆ ಬಂದಿತು. ಆಗ ನಮ್ಮ ಶಾಲೆಯಲ್ಲಿ ‘ಹೂಪೂ ನೇಚರ್ ಕ್ಲಬ್’ ಇತ್ತು. ಅಲ್ಲಿ ರಸಾಯನವಿಜ್ಞಾನ ಪಾಠ ಮಾಡುತ್ತಿದ್ದ ಮಂಜುನಾಥ್ ಸರ್, ಡಿ.ವಿ.ಗಿರೀಶ್ ಮತ್ತು ಪ್ರಾಂಶುಪಾಲರಾಗಿದ್ದ ಅಜ್ರಾ ಮೇಡಂ ಅವರನ್ನು ಸ್ಮರಿಸಲೇಬೇಕು. ಪಕ್ಷಿ ವೀಕ್ಷಣೆ, ವನ್ಯಜೀವಿಗಳು, ಪರಿಸರ ಮತ್ತು ವಿಜ್ಞಾನದ ಬಗ್ಗೆ ನನ್ನ ಮುಂದಿನ ಜೀವನಕ್ಕೆ ಬುನಾದಿ ಹಾಕಿದ್ದೇ ಇವರು. ಗಾಡ್‌ಫಾದರ್‌ಗಳು ಎಂದರೆ ತಪ್ಪಾಗುವುದಿಲ್ಲ.

ಪಿಯು ಪರೀಕ್ಷೆ ಮುಗಿದ ನಂತರ ಎಂಜಿನಿಯರಿಂಗ್ ಸೇರಲು ಕೆಲವು ತಿಂಗಳು ಇತ್ತು. ನನ್ನ ಹಿತೈಷಿಗಳು ವಿಜ್ಞಾನಿ ಪ್ರೊ.ರಾಘವೇಂದ್ರ ಗದಗಕರ್ ಅವರನ್ನು ಸಂಪರ್ಕಿಸಲು ಸಲಹೆ ನೀಡಿದರು. ಅವರು ಐಐಎಸ್‌ಸಿ ಪರಿಸರ ವಿಜ್ಞಾನ ಕೇಂದ್ರದ ಮುಖ್ಯಸ್ಥರಾಗಿದ್ದರು. ಮೊದಲಿಗೆ ಅವರಿಗೆ ಪತ್ರ ಬರೆದೆ. ಆ ಬಳಿಕ ಕೆಲ ಬಾರಿ ದೂರವಾಣಿ ಕರೆ ಮಾಡಿದ ಬಳಿಕ ಗದಗಕರ್ ಭೇಟಿಗೆ ಒಪ್ಪಿದರು. ಏನಾದರೂ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬುದಷ್ಟೇ ನನ್ನ ಮನಸ್ಸಿನಲ್ಲಿತ್ತು. ಅವರು ಮೊದಲಿಗೆ ನನ್ನ ಜ್ಞಾನವೃದ್ಧಿಗೆ ಹಲವು ಪುಸ್ತಕಗಳನ್ನು ಓದಲು ಸೂಚಿಸಿದರು. ಐಐಎಸ್‌ಸಿ ಗ್ರಂಥಾಲಯಕ್ಕೆ ಭೇಟಿಗೆ ಅವಕಾಶ ಮಾಡಿಕೊಟ್ಟರು. ಪಕ್ಷಿಗಳ ಮೇಲೆ ನನಗೆ ಆಸಕ್ತಿ ಇರುವುದನ್ನು ಗಮನಿಸಿ, ಪಕ್ಷಿಗಳ ಸಣ್ಣ ಅಧ್ಯಯನವನ್ನು ಸುರೇಂದ್ರ ವರ್ಮಾ ಮಾರ್ಗದರ್ಶನದಲ್ಲಿ ಮಾಡುವಂತೆ ಸೂಚಿಸಿದರು. ನಾನು ಎಂಜಿನಿಯರಿಂಗ್ ಸೇರುವ ಮೊದಲೇ ವಿಜ್ಞಾನ ಮತ್ತು ಸಂಶೋಧನೆಯ ರುಚಿ ಹಿಡಿಸಿದ್ದು ಇವರು. ಇವರು ನನ್ನ ಎರಡನೇ ಹಂತದ ಗಾಡ್‌ಫಾದರ್‌ಗಳು.

ಎಚ್.ಎಸ್.ಸುಧೀರ, ಸಂಶೋಧಕ, ಗುಬ್ಬಿ ಲ್ಯಾಬ್ಸ್

‘ಶಿವರಾಮ ಕಾರಂತರ ಸಿದ್ಧಾಂತವೇ ನನಗೆ ಆದರ್ಶ’

ಬದುಕಿಗೆ ಹೊಸ ತಿರುವು ನೀಡಿದವರು ಮತ್ತು ಜೀವನ ಕ್ರಮದ ಬಗ್ಗೆ ತಿಳಿವಳಿಕೆ ನೀಡಿದವರನ್ನು ಶಿಕ್ಷಕರು ಎಂದು ಪರಿಗಣಿಸುತ್ತೇನೆ. ಈ ದಿಸೆಯಲ್ಲಿ ಶಿವರಾಮ ಕಾರಂತರ ನಡೆ-ನುಡಿ ನನಗೆ ಆದರ್ಶ. ಕಲಾ ಶಿಕ್ಷಕರಾದ ಜಿ.ಆರ್. ಗೋವಿಂದರಾಜ್ ಅವರು ಕಲೆಯ ತಾಂತ್ರಿಕ ಅಭ್ಯಾಸಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಆದರೆ, ಸಾಂಸ್ಕೃತಿಕವಾಗಿ, ಬೌದ್ಧಿಕವಾಗಿ, ವೈಚಾರಿಕವಾಗಿ, ಸೈದ್ಧಾಂತಿಕವಾಗಿ ಶಿವರಾಮ ಕಾರಂತ ಅವರೇ ನನಗೆ ಸ್ಫೂರ್ತಿ.

ಶಾಲೆಯಲ್ಲಿ ಅವರು ನನಗೆ ಪಾಠ ಮಾಡದಿದ್ದರೂ ಶಿವರಾಮ ಕಾರಂತರು ಬದುಕು ನೋಡುವ ದೃಷ್ಟಿಕೋನವನ್ನು ಕಲಿಸಿದರು. ಬದುಕು ಹೇಗೆ ರೂಪಿಸಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಟ್ಟವರು ಅವರು. ಬಹುತೇಕ ಶಿಕ್ಷಕರು ಇಂದು ಹೊಟ್ಟೆಪಾಡಿಗಾಗಿ ಬೋಧನೆ ಮಾಡುತ್ತಾರೆ. ಇಂತಹವರನ್ನು ನಾನು ಗುರುಗಳು ಎಂದು ಕರೆಯುವುದಿಲ್ಲ. ಬದುಕಿನ ಪ್ರತಿ ಕ್ಷಣವನ್ನು ನಡೆ ನುಡಿಯ ಮೂಲಕ ಪರಿಶೀಲಿಸಿಕೊಳ್ಳುವವನೇ ಗುರು. ಯಾವ ರೀತಿಯ ಆದರ್ಶಗಳ ಮೂಲಕ ಗುರುಗಳು, ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದ್ದಾರೆ ಮತ್ತು ಎಂತಹ ವ್ಯಕ್ತಿತ್ವ ರೂಪಿಸಿದ್ದಾರೆ ಎನ್ನುವುದು ಮುಖ್ಯ. ಉತ್ತಮ ಗುರುಗಳಿಂದಲೇ ಉತ್ತಮ ವ್ಯಕ್ತಿತ್ವ ರೂಪಿಸಲು ಸಾಧ್ಯ. ಟಿ. ಎಸ್. ವೆಂಕಣ್ಣಯ್ಯ ಅವರಂಥ ಗುರುಗಳು ದೊರೆತಿದ್ದರಿಂದ ಕುವೆಂಪು ಅವರು ಶ್ರೇಷ್ಠ ವ್ಯಕ್ತಿಯಾದರು. ವಿನಯ ಮತ್ತು ಸಾವಧಾನ ಕಲಿಸುವ ಶಿಕ್ಷಣ ಇಂದಿನ ತುರ್ತು ಅಗತ್ಯ. ಆಗ ಮಾತ್ರ ಸಮಾಜದಲ್ಲಿ ಹೊಸ ಚೈತನ್ಯ ಮೂಡಲು ಸಾಧ್ಯ.

ಎಂ.ಎಸ್. ಮೂರ್ತಿ, ಕಲಾವಿದ

ಕ್ರೀಡಾ ಪ್ರೀತಿ ಬೆಳೆಸಿದ ದೈಹಿಕ ಶಿಕ್ಷಕ

ನನಗಾಗ 16 ವರ್ಷ. ಕೊಲ್ಲೂರಿನ ಮೂಕಾಂಬಿಕಾ ಪದವಿಪೂರ್ವ ಕಾಲೇಜಿನಲ್ಲಿ ಓದುತ್ತಿದ್ದೆ. ಕ್ರೀಡೆಯಲ್ಲಿ ನನಗೆ ಇದ್ದ ಆಸಕ್ತಿ ಗುರುತಿಸಿದವರು ದೈಹಿಕ ಶಿಕ್ಷಣ ಶಿಕ್ಷಕ ಸುಕೇಶ್ ಶೆಟ್ಟಿ ಹೊಸ್ಮಠ. ತಮ್ಮ ವಿದ್ಯಾರ್ಥಿದೆಸೆಯಲ್ಲಿ ಕುಸ್ತಿಪಟುವಾಗಿದ್ದವರು. ಉಡುಪಿ ಜಿಲ್ಲೆಯಿಂದ ಉತ್ತಮ ಕುಸ್ತಿಪಟುಗಳನ್ನು ನಾಡಿಗೆ ಕಾಣಿಕೆ ನೀಡುವ ಹೆಬ್ಬಯಕೆ ಅವರದ್ದಾಗಿತ್ತು. ಕೊಲ್ಲೂರು ಭಾಗದಲ್ಲಿ ಕುಸ್ತಿ ಕ್ರೀಡೆಯನ್ನು ಮೊಟ್ಟಮೊದಲಿಗೆ ಪರಿಚಯಿಸಿದವರೂ ಅವರೇ. ನಾನು ಕುಸ್ತಿ ಕಲಿಯಲು ಪ್ರೇರೇಪಿಸಿದರು. ತರಬೇತಿಯನ್ನೂ ನೀಡಿದರು.

ನಮ್ಮ ವಿದ್ಯಾರ್ಥಿ ವಸತಿನಿಲಯದೊಳಗಿನ ಹಾಸಿಗೆಗಳನ್ನು ತಂದು ಮೈದಾನದಲ್ಲಿ ಜೋಡಿಸುತ್ತಿದ್ದರು. ಅದನ್ನೇ ಕುಸ್ತಿ ಮ್ಯಾಟ್ ಮಾದರಿಯಲ್ಲಿ ಸಿದ್ಧಗೊಳಿಸಿ ತರಬೇತಿ ಕೊಡುತ್ತಿದ್ದರು. ಅವರ ಮಾರ್ಗದರ್ಶನದಲ್ಲಿ ನಾನು ರಾಜ್ಯಮಟ್ಟದಲ್ಲಿ ಎರಡು ಬಾರಿ ಕುಸ್ತಿ ಆಡಿದ್ದೆ. 42 ಕೆ.ಜಿ ಫ್ರೀಸ್ಟೈಲ್ ವಿಭಾಗದಲ್ಲಿ ಸ್ಪರ್ಧೆ ಮಾಡುತ್ತಿದ್ದೆ. ಬೇರೆ ಮಕ್ಕಳಲ್ಲಿಯೂ ಕುಸ್ತಿಪ್ರೀತಿ ಬೆಳೆಸಲು ಅವರು ಪ್ರಯತ್ನಿಸಿದರು. ನನ್ನೊಂದಿಗೆ ಇಬ್ಬರು ಮೂವರು ಕಲಿತರು. ಅವರು ರಾಜ್ಯ ತಂಡದಲ್ಲಿ ಆಡಿದ್ದರು. ನಾನು 2010ರಲ್ಲಿ ಉಜಿರೆಯಲ್ಲಿ ಕಾಲೇಜು ಸೇರಿದ ನಂತರ ವೇಟ್‌ಲಿಫ್ಟಿಂಗ್ ಅಭ್ಯಾಸ ಶುರುಮಾಡಿದೆ. ಅಲ್ಲಿಂದ ನನ್ನ ದಿಕ್ಕು ಬದಲಾಯಿತು. ಆದರೆ ಅಂದು ಸುಕೇಶ್ ಸರ್ ನೀಡಿದ ಮಾರ್ಗದರ್ಶನ ನನ್ನ ಸಾಧನೆಗೆ ಉತ್ತಮ ಅಡಿಪಾಯವಾಯಿತು.

ಗುರುರಾಜ್ ಪೂಜಾರಿ, ಕಾಮನ್‌ವೆಲ್ತ್ ಕ್ರೀಡಾಕೂಟದ ಬೆಳ್ಳಿ ಹಾಗೂ ಕಂಚಿನ ಪದಕ ವಿಜೇತ ವೇಟ್‌ಲಿಫ್ಟರ್

‘ಗುರುವಿನಲ್ಲಿ ದೇವರನ್ನು ಕಾಣ್ತೀನಿ’

ನಾನು ಗುರುವಿನ ಅನುಗ್ರಹದಿಂದಲೇ ಸಂಗೀತದಲ್ಲಿ ಇಲ್ಲಿಯವರೆಗೆ ಬಂದೆ. ತಂದೆಯೇ ನನಗೆ ಸಂಗೀತದ ಮೊದಲ ಗುರು. ನಾಲ್ಕನೇ ವರ್ಷಕ್ಕೇ ಎಂದರೆ 1970ರಲ್ಲಿ ಮೊದಲಿಗೆ ಪಂ. ಶೇಷಗಿರಿ ದಂಡಾಪುರ ಅವರ ಬಳಿ ಸರಿಗಮ ಅಭ್ಯಾಸ ಶುರುಮಾಡಿದೆ. ತಂದೆಯವರೇ ನನ್ನನ್ನು ಸೈಕಲ್‌ನಲ್ಲಿ ಕೂರಿಸಿ ಗುರುಗಳ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಅದಾಗಿ ಪಂ. ಚಂದ್ರಶೇಖರ ಪುರಾಣಿಕಮಠ ಅವರಲ್ಲಿ ಸಂಗೀತಾಭ್ಯಾಸ ಮಾಡಿದೆ. ಹಲವು ವರ್ಷ ಕಲಿತ ಬಳಿಕ ಪುರಾಣಿಕಮಠ ಅವರೇ ನನ್ನನ್ನು ಗುರು ಪಂ. ಬಸವರಾಜ ರಾಜಗುರು ಅವರ ಬಳಿ ಕರೆದುಕೊಂಡು ಹೋಗಿ ಸೇರಿಸಿದ್ರು.

12 ವರ್ಷ ಕಾಲ ಗುರುಗಳ ಕೃಪೆಯಲ್ಲೇ ಸಂಗೀತ ಕಲಿತೆ. ಅವರು ತೀರಿಹೋದ ಮೇಲೆ ಎರಡು ವರ್ಷ ಕಾಲ ಮತ್ತೊಂದು ಗುರುವಿಗಾಗಿ ಹುಡುಕಾಟ ನಡೆಸಿದೆ. ಆಗ ನನಗೆ ಸಿಕ್ಕಿದ್ದು ‘ಸಂಗೀತ ತಾಯಿ’ ವಿದುಷಿ ಕಿಶೋರಿ ಅಮೋನಕರ್. ಮುಂಬೈಯಲ್ಲಿ ಅವರ ಮನೆಯಲ್ಲೇ ಇದ್ದು ಸಂಗೀತ ಕಲಿಯುವ ಸದವಕಾಶ! ಎಷ್ಟು ಮಂದಿ ಕಲಾವಿದರಿಗೆ ಈ ಸೌಭಾಗ್ಯ ಸಿಗುತ್ತೆ ಹೇಳಿ? ಗುರು ಪ್ರೇರಣೆ ಇಲ್ಲದೇ ಇದ್ದರೆ ಇವೆಲ್ಲ ಸಾಧ್ಯವೇ?

ಇಷ್ಟು ಸಂಗೀತ ಶಿಕ್ಷಕರ ಆಶೀರ್ವಾದ ನನ್ನ ಬದುಕಿನ ಹೆಜ್ಜೆ ಹೆಜ್ಜೆಗೂ ಇದೆ. ಗುರು-ಶಿಷ್ಯ ಪರಂಪರೆಯಲ್ಲೇ ಒಂದು ಎಥಿಕ್ಸ್ ಇದೆ. ರಾಗ-ರಸ-ಸಿದ್ಧಾಂತ- ಪದ್ಧತಿ ಎಂಬ ಏಸ್ತೆಟಿಕ್ಸ್‌ನ ಪಾಲನೆ ಮಾಡ್ತೀನಿ. ಗುರು ಎಂದರೆ ಒಂದು ಶಕ್ತಿ. ಗುರು ಎಂದರೆ ಅಂತರ್ಯಾಮಿ. ಗುರು-ಶಿಷ್ಯ ಇಬ್ಬರೂ ಸಂಗೀತದ ಮೂಲಕ ಭಾವನಾತ್ಮಕವಾಗಿ ಕನೆಕ್ಟ್ ಆಗಬೇಕು. ಇದಕ್ಕಾಗಿ ಗುರುವಿನಲ್ಲೇ ದೇವರನ್ನು ಕಾಣ್ತೀನಿ. ನನ್ನೊಳಗಡೆನೇ ಈ ದೇವರಿಗೆ ನಮಸ್ಕಾರ ಮಾಡ್ತೀನಿ... ‘ಗುರುಭ್ಯೋ ನಮಃ’!

ಸಂಗೀತಾ ಕಟ್ಟಿ, ಗಾಯಕಿ

ನಿರೂಪಣೆ:
ಎಸ್.ರವಿಪ್ರಕಾಶ್, ಸಚ್ಚಿದಾನಂದ ಕುರಗುಂದ
ಗಿರೀಶ ದೊಡ್ಡಮನಿ, ಉಮಾ ಅನಂತ್
ವಿಶ್ವನಾಥ ಎಸ್., ಅಭಿಲಾಷ್ ಪಿ.ಎಸ್.

ದೈಹಿಕ ಶಿಕ್ಷಕ, ಅಪ್ಪ-ಅಮ್ಮ ಮೊದಲ ಗುರು

ಐದು ವರ್ಷಗಳ ಹಿಂದೆ ಸಂತ ಫ್ರಾನ್ಸಿಸ್ ಪ್ರೌಢಶಾಲೆಯ ವಿದ್ಯಾರ್ಥಿನಿಯಾಗಿದ್ದೆ. ಆಗ ಐಸಿಐಸಿಐ ಸಿಲೆಬಸ್ ಶಾಲೆಗಳ ರಾಜ್ಯಮಟ್ಟದ ಕ್ರೀಡಾಕೂಟ ಕಂಠೀರವ ಕ್ರೀಡಾಂಗಣದಲ್ಲಿ ನಡೆದಿತ್ತು. ಶಾಲೆಯ ದೈಹಿಕ ಶಿಕ್ಷಕ ಲೋಕೇಶ ಅವರು ನನಗೆ 400 ಮೀ ಓಟದಲ್ಲಿ ಭಾಗವಹಿಸಲು ಹೇಳಿದರು. ಅದರಲ್ಲಿ ಜಯಸಿದೆ ಅಲ್ಲಿಂದ ಮುಂದೆ ಪುಣೆಗೆ ರಾಷ್ಟ್ರ ಮಟ್ಟದ ಕೂಟಕ್ಕೆ ಹೋಗಬೇಕಿತ್ತು. ತಂದೆಯವರಿಗೆ (ಎಚ್. ಮೋಹನ್, ನ್ಯಾಯಾಧೀಶರು) ಈ ವಿಷಯ ತಿಳಿಸಿದೆ. ಅವರು ಮತ್ತು ಅಮ್ಮ ಖುಷಿಯಿಂದ ಒಪ್ಪಿದರು. ಪುಣೆಗೆ ಕರೆದುಕೊಂಡು ಹೋಗಿ ಕ್ರೀಡೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟರು. ನನ್ನ ಕ್ರೀಡಾಸಕ್ತಿಯನ್ನು ಗುರುತಿಸಿದ ಮೊದಲ ಗುರುಗಳು ಅವರೇ. ಪುಣೆಯಲ್ಲಿ ಒಂದು ಕೂಟಕ್ಕೆ ಹೋದಾಗ ಕೋಚ್ ಅರ್ಜುನ್ ಪರಿಚಯವಾಯಿತು. ಅವರಿಂದಲೇ ತರಬೇತಿ ಕೊಡಿಸಲು ಅಪ್ಪ ವ್ಯವಸ್ಥೆ ಮಾಡಿದರು. ಇದರಿಂದಾಗಿ 2018ರಿಂದ ಅರ್ಜುನ್ ತರಬೇತಿ ನೀಡುತ್ತಿದ್ದಾರೆ. ರಾಷ್ಟ್ರೀಯ ಕೂಟದಲ್ಲಿ ಮಹಿಳೆಯರ 400 ಮೀ ಓಟದಲ್ಲಿ ನಾನು ಪ್ರಥಮ ಸ್ಥಾನದಲ್ಲಿದ್ದೇನೆ. 2021 ಹಾಗೂ 2022ರಲ್ಲಿ ವಿಶ್ವ ಜೂನಿಯರ್ ಅಥ್ಲೆಟಿಕ್ಸ್‌ನ ಮಿಶ್ರ ರಿಲೆಯಲ್ಲಿ ಪದಕ ಸಾಧನೆ ಮಾಡಿರುವೆ. ಫ್ರಾನ್ಸಿಸ್ ಶಾಲೆ ಹಾಗೂ ಈಗ ಬಿಎಸ್‌ಸಿ ಓದುತ್ತಿರುವ ಮೌಂಟ್ ಕಾರ್ಮೆಲ್ ಕಾಲೇಜಿನ ಶಿಕ್ಷಕರ ಪ್ರೋತ್ಸಾಹವೂ ಅಪಾರವಾಗಿದೆ.

ಪ್ರಿಯಾ ಮೋಹನ್, ಅಂತರರಾಷ್ಟ್ರೀಯ ಅಥ್ಲೀಟ್

ತಾಯಿಯೇ ಮೊದಲ ಗುರು

ವೃತ್ತಿಯಲ್ಲಿ ಸರ್ಕಾರಿ ಶಾಲಾ ಶಿಕ್ಷಕಿಯಾಗಿದ್ದ ನನ್ನ ತಾಯಿ ಕೆ.ಎಸ್. ಭಾರ್ಗವಿ ಅವರೇ ನನಗೆ ಮೊದಲ ಗುರು. ನಾನು ಇಂದು ಜೀವನದಲ್ಲಿ, ಬೆಳ್ಳಿತೆರೆಯಲ್ಲಿ ಏನಾದರೂ ಸಾಧಿಸಿದ್ದೇನೆ ಎಂದರೆ ಅದರ ಹಿಂದೆ ಶಿಕ್ಷಕಿಯಾಗಿ ಅನುಭವ ಹೊಂದಿದ್ದ ಅಮ್ಮನ ಪ್ರೇರಣೆಯಿದೆ. ಕನ್ನಡ ಮತ್ತು ಸಮಾಜ ವಿಜ್ಞಾನ ಶಿಕ್ಷಕಿಯಾಗಿದ್ದ ಅವರು ಸುಮಾರು 40 ವರ್ಷ ನಂಜನಗೂಡು, ಮೈಸೂರು, ಸುತ್ತೂರಿನ ಸರ್ಕಾರಿ ಶಾಲೆಗಳಲ್ಲಿ ಸೇವೆ ಸಲ್ಲಿಸಿದ್ದರು. ನಾನು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿತೆ. ಅಲ್ಲಿ ಆಂಗ್ಲ ಭಾಷೆಗೆ ಮತ್ತು ಪಠ್ಯದಲ್ಲೇನಿದೆ ಅದಕ್ಕಷ್ಟೇ ಪ್ರಾಧಾನ್ಯತೆ. ಆದರೆ ನಿಜವಾದ ಮೌಲ್ಯ ಶಿಕ್ಷಣ ದೊರೆಯುತ್ತಿದ್ದದ್ದು ಮನೆಯಲ್ಲಿ. ಅದೂ ಅಮ್ಮನಿಂದ.

ನಾನಿಂದು ಇಷ್ಟು ಸ್ಪಷ್ಟವಾಗಿ ಕನ್ನಡ ಮಾತನಾಡುತ್ತೇನೆ ಎಂದರೆ, ಸಾವಿರಾರು ಜನರೆದುರಿಗೆ ನಿಂತಿದ್ದೇನೆ, ನಟನೆಯಲ್ಲಿ ಇಷ್ಟು ಸಾಧಿಸಿದ್ದೇನೆ ಎಂದರೆ ಅದರ ಹಿಂದೆ ಅಮ್ಮನ ಪರಿಶ್ರಮವಿದೆ. ಮಕ್ಕಳ ಮೇಲೆ ಆಕೆಯ ಪ್ರಭಾವ ಎಷ್ಟಿತ್ತೆಂದು ನನಗೆ ಇತ್ತೀಚೆಗೆ ತಿಳಿಯಲಾರಂಭಿಸಿತು. ದೇಶ, ವಿದೇಶಗಳಲ್ಲಿ ನೆಲೆಸಿರುವ ಅವರ ಶಿಷ್ಯರು ಮೈಸೂರಿಗೆ ಭೇಟಿ ನೀಡಿದಾಗಲೆಲ್ಲ ಅಮ್ಮನ ಬಳಿಗೆ ಬಂದೇ ಬರುತ್ತಿದ್ದರು. ಅವರಿಗೆ ನೀಡುತ್ತಿದ್ದ ಗೌರವ ನೋಡಿ ನಾನೂ ಹೆಮ್ಮೆ ಪಡುತ್ತಿದ್ದೆ. ಜೊತೆಗೆ ಮಹಾಜನಾಸ್ ಕಾಲೇಜಿನ ಮನೋವಿಜ್ಞಾನ ವಿಭಾಗದ ಸುಜಾತಾ ಹಾಗೂ ಅರವಿಂದ್ ಅವರೂ ನನ್ನ ಶೈಕ್ಷಣಿಕ ಸಾಧನೆಯ ಹಿಂದಿನ ಪ್ರೇರಣಾ ಶಕ್ತಿ.

ಅಮೃತಾ ಅಯ್ಯಂಗಾರ್, ನಟಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 216

ಶಿವನ ಒಲಿಸಲು ಹೊರಟ ಮನ್ಮಥ

ಮನ್ಮಥ, ‘ನನ್ನಲ್ಲಿ ಐದೇ ಐದು ಬಾಣಗಳಿವೆ. ಅವು ಹೂವಿನಿಂದ ಮಾಡಿದ ಬಾಣಗಳು. ನನ್ನಲ್ಲಿರುವ ಧನುಸ್ಸುಗಳು ಮೂರು ವಿಧವಾಗಿವೆ. ಅವೂ ಹೂವಿನಿಂದಲೇ ತಯಾರಿಸಲಾಗಿವೆ. ಮೌರ್ವಿ(ಧನುಸ್ಸಿನ ಹಗ್ಗ)ಯು ದುಂಬಿಗಳಿಂದ ಮಾಡಲಾಗಿದೆ. ನನ್ನ ಪತ್ನಿಯಾದ ರತಿಯೇ ನನ್ನ ಬಲವು. ವಸಂತನೇ ಮಂತ್ರಿಯು. ಚಂದ್ರನು ನನ್ನ ಮಿತ್ರನು. ಶೃಂಗಾರರಸವು ನನ್ನ ಸೇನಾಪತಿಯು. ಸುಂದರಿಯಾದ ಹಾವಭಾವಗಳು ನನ್ನ ಸೈನಿಕರು. ಹೀಗೆ ನಾನು ಐದು ವಿಧವಾಗಿ ಬಲವುಳ್ಳವನಾಗಿರುವೆ. ಈ ನನ್ನ ಬಲವೆಲ್ಲವೂ ಮೃದುವಾದುದಾಗಿದೆ. ನಾನೂ ಮೃದುವಾದವನು. ಯಾರು ಯಾವ ಕಾರ್ಯವನ್ನು ಬುದ್ಧಿವಂತಿಕೆಯಿಂದ ನಿರ್ವಹಿಸಬಲ್ಲರು ಎಂಬುದನ್ನು ತಿಳಿದುಕೊಂಡು, ಅಂಥವನನ್ನು ಆ ಕಾರ್ಯದಲ್ಲಿ ನಿಯೋಗಿಸಬೇಕು. ಅದರಂತೆ ಈಗ ನನಗೆ ಯೋಗ್ಯವಾದ ಕಾರ್ಯವನ್ನು ನಿಯಮಿಸಲು ನೀನು ಯೋಚಿಸಿರುವೆ. ಅದೇನೆಂಬುದನ್ನು ನನಗೆ ಹೇಳು. ಅದನ್ನು ಶಿರಸ್ಸಾವಹಿಸಿ ಮಾಡುವೆ’ ಎಂದ.

ಮನ್ಮಥನ ಮಾತುಗಳನ್ನು ಕೇಳಿ ಇಂದ್ರನಿಗೆ ತುಂಬಾ ಸಂತೋಷವಾಯಿತು. ‘ಎಲೈ ಮನ್ಮಥನೆ, ನಾನು ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡಿರುವ ಕಾರ್ಯವನ್ನು ಮಾಡಲು ನೀನೇ ಸಮರ್ಥ. ಯಾವುದನ್ನು ಮಾಡುವುದಕ್ಕಾಗಿ ನೀನು ಆತುರಗೊಂಡಿರುವೆಯೋ ಆ ಕಾರ್ಯ ಏನೆಂದು ಈಗ ಹೇಳುವೆ ಕೇಳು. ತಾರಕನೆಂಬ ಮಹಾದೈತ್ಯನು ಬ್ರಹ್ಮನಿಂದ ಅದ್ಭುತವಾದ ವರವೊಂದನ್ನು ಪಡೆದು ಎಲ್ಲರಿಗೂ ಅಜೇಯನಾಗಿರುವನು. ಎಲ್ಲರನ್ನೂ ಪೀಡಿಸುತ್ತಲಿರುವನು. ಆ ದೈತ್ಯನ ಅಟ್ಟಹಾಸದಿಂದ ಧರ್ಮಗಳೆಲ್ಲವೂ ನಷ್ಟವಾಗಿವೆ. ದೇವತೆಗಳು ಋಷಿಗಳು ಎಲ್ಲರೂ ದುಃಖಿತರಾಗಿರುವರು. ದೇವತೆಗಳೆಲ್ಲರೂ ಆ ದೈತ್ಯನೊಡನೆ ಶಕ್ತಿ ಮೀರಿ ಯುದ್ಧ ಮಾಡಿದರು. ಆದರೆ ಎಲ್ಲರ ಆಯುಧಗಳೂ ವ್ಯರ್ಥವಾದುವು. ವರುಣನ ಪಾಶವು ಭಗ್ನವಾಯಿತು. ವಿಷ್ಣು ಪ್ರಯೋಗಿಸಿದ ಸುದರ್ಶನ ಚಕ್ರ ಆ ದೈತ್ಯನ ಕತ್ತನ್ನ ಅಲಂಕರಿಸಿ ಅಲ್ಲಿಯೇ ಕುಳಿತುಬಿಟ್ಟಿತು. ಈಗ ಆ ದೈತ್ಯನನ್ನು ಸಂಹರಿಸಲು ಪರಮೇಶ್ವರನ ಕುಮಾರನಿಂದ ಮಾತ್ರ ಸಾಧ್ಯವಾಗುವುದೆಂದು ಬ್ರಹ್ಮ ಹೇಳಿದ್ದಾನೆ.

ತಾರಕಾಸುರ ವರವನ್ನು ಬೇಡುವಾಗ ಯಾರಿಂದಲೂ ತನಗೆ ಸಾವು ಬರಬಾರದೆಂದು ಕೇಳಿದ್ದ. ಇದಕ್ಕೆ ಬ್ರಹ್ಮ ಯಾರಿಂದಾದರೂ ನಿನಗೆ ಸಾವು ಬರಲೇ ಬೇಕು ಎಂದಾಗ, ಸತಿವಿಹೀನದಿಂದ ವೈರಾಗಿಯಾದ ಶಿವ ಮತ್ತೆಂದೂ ಮದುವೆಯಾಗಲಾರ ಅಂತ ಭಾವಿಸಿದ ತಾರಕ, ತನಗೆ ಶಿವನ ಪುತ್ರನ ಹೊರತು ಬೇರಾರಿಂದಲೂ ಸಾವು ಬಾರದಿರಲಿ ಎಂದು ಕೋರಿದ. ಇದಕ್ಕೆ ಬ್ರಹ್ಮ ಅಸ್ತು ಎಂದು ಹೇಳಿದ್ದಾನೆ. ಶಂಕರ ಹಿಮಾಲಯದಲ್ಲಿ ವಿರಾಗಿಯಾಗಿ ತಪಸ್ಸನ್ನ ಆಚರಿಸುತ್ತಿದ್ದಾನೆ. ಅವನು ವಿರಕ್ತಭಾವದಿಂದ ಮತ್ತೆ ಅನುರಕ್ತನಾಗುವಂತೆ ಮಾಡಬೇಕು. ಈ ಕಾರ್ಯ ನಿನ್ನಿಂದ ಮಾತ್ರ ಸಾಧ್ಯ. ಈಗ ಶಿವನ ಸಮೀಪದಲ್ಲೇ ಸತಿಯ ಪುನರಾವತಾರವಾದ ಪಾರ್ವತಿಯು ಶಂಕರನನ್ನು ಸೇವೆ ಮಾಡುತ್ತಿದ್ದಾಳೆ. ನಿನ್ನ ಮನ್ಮಥಲೀಲೆಯಿಂದ ಪಾರ್ವತಿಯಲ್ಲಿ ಶಿವನಿಗೆ ಪ್ರೀತಿ ಉಂಟಾಗುವಂತೆ ಮಾಡಬೇಕು. ಹಾಗೆ ಮಾಡಿದರೆ, ನೀನು ಕೃತಕೃತ್ಯನಾಗುವೆ. ಎಲ್ಲರ ದುಃಖವೂ ನಾಶವಾಗುವುದು. ಲೋಕದಲ್ಲಿ ನಿನ್ನ ಪ್ರತಾಪವು ಸ್ಥಿರವಾಗಿ ನಿಲ್ಲುವುದು’ ಎಂದ.

ಇಂದ್ರನ ಮಾತನ್ನು ಕೇಳಿದ ಮನ್ಮಥನ ಮನಸ್ಸು ಹಗುರವಾಯಿತು. ‘ಇಂದ್ರ! ಈ ಕಾರ್ಯ ನನಗೆ ಬಹಳ ಸರಳವಾದುದು. ನೀನು ನಿಶ್ಚಿಂತೆಯಿಂದಿರು’ ಎಂದ ಮನ್ಮಥ, ಪತ್ನಿ ರತಿ ಮತ್ತು ಗೆಳೆಯ ವಸಂತನೊಡನೆ ಪರಮೇಶ್ವರ ತಪಸ್ಸು ಮಾಡುತ್ತಿರುವಲ್ಲಿಗೆ ತೆರಳಿದ. ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಹದಿನೇಳನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘₹22ಕ್ಕೆ ಒಂದು ಲೀಟರ್ ಹಿಟ್ಟು ಸಿಗುತ್ತಿತ್ತು, ಈಗ ಲೀಟರ್‌ಗೆ ₹40 ಆಗಿದೆ’ ಎಂದು ಕಾಂಗ್ರೆಸ್ ನಾಯಕ ಹೇಳುತ್ತಿರುವ ವಿಡಿಯೊ ವೈರಲ್ ಆಗಿದೆ. ‘ಹಿಟ್ಟನ್ನು ಕೆ.ಜಿಯಲ್ಲಿ ಮಾರುತ್ತಾರೋ ಅಥವಾ ಲೀಟರ್‌ನಲ್ಲಿ ಮಾರುತ್ತಾರೋ ಎಂಬುದು ರಾಹುಲ್ ಗಾಂಧಿಗೆ ಗೊತ್ತಿಲ್ಲ. ಅವರು ಬೆಲೆ ಏರಿಕೆ ವಿರುದ್ಧ ಏಕೆ ಮಾತನಾಡುತ್ತಿದ್ದಾರೆ’ ಎಂದು ಈ ವಿಡಿಯೊಗೆ ಅಡಿಬರಹ ನೀಡಲಾಗಿದೆ. ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ಹಲವರು ಈ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ. ‘ಹಿಟ್ಟನ್ನು ಲೀಟರ್ ಲೆಕ್ಕದಲ್ಲಿ ಮಾರಾಟ ಮಾಡಲು ಯಾವಾಗಿನಿಂದ ಆರಂಭಿಸಿದರೋ’ ಎಂದು ಹಲವರು ಲೇವಡಿ ಮಾಡಿದ್ದಾರೆ.

‘ಈ ವಿಡಿಯೊದಲ್ಲಿ ಪೂರ್ಣ ಮಾಹಿತಿ ಇಲ್ಲ’ ಎಂದು ಇಂಡಿಯಾ ಟುಡೇ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ದೆಹಲಿಯ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಭಾನುವಾರ ಆಯೋಜಿಸಿದ್ದ ಮಹಂಗಾಯಿ ಪೆ ಹಲ್ಲಾ ಬೋಲ್ ರ‍್ಯಾಲಿಯಲ್ಲಿ ರಾಹುಲ್ ಮಾತನಾಡಿದ್ದರು. ₹22ಕ್ಕೆ ಒಂದು ಲೀಟರ್ ಹಿಟ್ಟು ಸಿಗುತ್ತಿತ್ತು, ಈಗ ಲೀಟರ್‌ಗೆ ₹40 ಆಗಿದೆ ಎಂದು ರಾಹುಲ್ ಹೇಳಿದರು. ಆದರೆ ತಕ್ಷಣವೇ ಕೆ.ಜಿಗೆ ಎಂದು ತಿದ್ದಿಕೊಂಡರು. ಭಾರತೀಯ ನ್ಯಾಷನಲ್ ಕಾಂಗ್ರೆಸ್‌ನ ಟ್ವಿಟರ್ ಖಾತೆಯಲ್ಲಿ ಕಾರ್ಯಕ್ರಮದ ಪೂರ್ಣ ವಿಡಿಯೊವನ್ನು ಪ್ರಕಟಿಸಲಾಗಿದೆ. ವಿಡಿಯೊದಲ್ಲಿ 1 ಗಂಟೆ 52ನೇ ನಿಮಿಷದ ನಂತರ ರಾಹುಲ್ ಅವರ ಈ ಮಾತು ಆರಂಭವಾಗುತ್ತದೆ. ಆದರೆ ಈ ವಿಡಿಯೊವನ್ನು ಕತ್ತರಿಸಿ, ಮೊದಲ ವಾಕ್ಯವಿರುವ ವಿಡಿಯೊವನ್ನಷ್ಟೇ ಹಂಚಿಕೊಳ್ಳಲಾಗಿದೆ’ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ನೀಡಬೇಕಾದ ಉತ್ತರ

ಒಡೆಯನೆಂದೋ ಬಂದು ಕೇಳ್ವನದಕತ್ತರವ |
ಕೊಡಬೇಕು ತಾನೆನುವವೊಲು ಋಜುತೆಯಿಂದ ||
ಒಡಲ, ಜಾಣಿನ, ಜೀವಶಕ್ತಿಗಳನೆಲ್ಲವನು |
ಮುಡುಪುಕೊಟ್ಟನು ಭರತ – ಮಂಕುತಿಮ್ಮ || 707

ಪದ-ಅರ್ಥ: ಒಡೆಯನೆಂದೋ = ಒಡೆಯನು + ಎಂದೋ, ಕೇಳ್ವನದಕುತ್ತರವ = ಕೇಳ್ವನು (ಕೇಳುವನು) + ಅದಕೆ + ಉತ್ತರವ, ತಾನೆನುವವೊಲು = ತಾನು + ಎನುವವೊಲು (ಎನ್ನುವಂತೆ), ಋಜತೆಯಿಂದ = ಪ್ರಾಮಾಣಿಕತೆಯಿಂದ, ಒಡಲ = ದೇಹದ, ಜಾಣತನ = ಜಾಣತನದ, ಮುಡುಪುಕೊಟ್ಟನು = ಮುಡಿಪಾಗಿಟ್ಟನು.

ವಾಚ್ಯಾರ್ಥ: ಯಜಮಾನ ಯಾವಾಗಲೋ ಬಂದು ಕೇಳಿದಾಗ ಉತ್ತರವನ್ನು ತಾನು ಕೊಡಬೇಕಾಗುತ್ತದೆ ಎನ್ನುವಂತೆ ಅತ್ಯಂತ ಪ್ರಾಮಾಣಿಕತೆಯಿಂದ ತನ್ನ ದೇಹ, ಬುದ್ಧಿ ಮತ್ತು ಜೀವಶಕ್ತಿಗಳನ್ನೆಲ್ಲ ಮುಡಿಪಾಗಿಟ್ಟನು ಭರತ.

ವಿವರಣೆ: ಇದೊಂದು ನಡೆದ ಘಟನೆ. ಯಜಮಾನರೊಬ್ಬರು ಬಟ್ಟೆಯ ಅಂಗಡಿಯನ್ನು ನಡೆಸುತ್ತಿದ್ದರು. ಅವರೊಂದಿಗೆ ಒಬ್ಬ ತರುಣ ಕೆಲಸ ಮಾಡುತ್ತಿದ್ದ. ಆ ಅಂಗಡಿಯೇ ಮನೆಗೆ ಜೀವನಾಧಾರ. ಯಾವುದೋ ದಾಯಾದಿಗಳ ಕಲಹ ಬಂದು ಯಜಮಾನರು ಮನೆ ಬಿಟ್ಟು ಹೋಗಿಬಿಟ್ಟರು. ಎಲ್ಲಿ ಹೋದರೆಂಬುದು ಯಾರಿಗೂ ತಿಳಿಯಲಿಲ್ಲ. ಮನೆಯವರಿಗೆ ಬದುಕು ಪ್ರಶ್ನಾರ್ಥಕವಾಯಿತು. ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಹುಡುಗ ಮನೆಯವರಿಗೆ ಧೈರ್ಯ ಹೇಳಿ ತಾನೇ ಅಂಗಡಿ ನಡೆಸಿದ. ಒಂದೊಂದು ರೂಪಾಯಿಯನ್ನೂ ವ್ಯರ್ಥಮಾಡದೆ, ಬುದ್ಧಿವಂತಿಕೆಯಿಂದ ದುಡಿದು ಅಂಗಡಿಯನ್ನು ಬಹುದೊಡ್ಡದನ್ನಾಗಿ ಮಾಡಿದ. ಈಗ ಲಕ್ಷಾಂತರ ರೂಪಾಯಿಗಳ ವ್ಯವಹಾರ. ಯಜಮಾನರ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿದ. ಅವರ ಪರಿವಾರಕ್ಕೆ ದೊಡ್ಡ ಮನೆ ಕಟ್ಟಿಸಿದ. ಆದರೆ ತಾನು ಮದುವೆಯಾಗದೆ ಉಳಿದ. ಒಂದು ದಿನ ಯಜಮಾನರು ಮರಳಿ ಬಂದರು.

ಈಗಾಗಲೇ ಸುಮಾರು ಇಪ್ಪತ್ತು ವರ್ಷಗಳು ಸರಿದು ಹೋಗಿವೆ. ಹುಡುಗ ವ್ಯಾಪಾರ ಬೆಳೆಸಿದ್ದನ್ನು, ತನ್ನ ಮನೆಯನ್ನು ಕಾಪಾಡಿದ್ದನ್ನು ಕಂಡು ಅವರಿಗೆ ಅಪಾರ ಸಂತೋಷವಾಯಿತು. ಅವರು ಬಂದ ಮರುದಿನವೇ ಆ ಹುಡುಗ ಇಷ್ಟು ವರ್ಷದ ವ್ಯಾಪಾರದ ಲೆಕ್ಕವನ್ನು ಚಾಚೂತಪ್ಪದಂತೆ ಒಪ್ಪಿಸಿದ. ಅದೆಲ್ಲ ನಿನ್ನದೇ ಎಂದರು ಯಜಮಾನರು. ಹುಡುಗ ಒಪ್ಪಲಿಲ್ಲ. “ಸ್ವಾಮೀ ಇದು ತಮ್ಮ ಅಂಗಡಿ. ವ್ಯವಹಾರವೆಲ್ಲ ತಮ್ಮ ಹೆಸರಿನಲ್ಲಿಯೇ ನಡೆದದ್ದು. ನಾನು ಕೇವಲ ನಿಮ್ಮ ಸೇವಕನಾಗಿ ದುಡಿದಿದ್ದೇನೆ” ಎಂದು ಒಪ್ಪಿಸಿಬಿಟ್ಟು ನಿರಾಳವಾದ.

ರಾಮಾಯಣದ ಭರತ ನಂದೀಗ್ರಾಮದಲ್ಲೇ ಸನ್ಯಾಸಿಯಂತೆಯೇ ಬದುಕಿ, ಹದಿನಾಲ್ಕು ವರ್ಷಗಳ ನಂತರ ರಾಮ ಬರುತ್ತಾನೆ, ಇದು ಅವನ ರಾಜ್ಯ, ತಾನು ಕೇವಲ ಅವನ ಪ್ರತಿನಿಧಿ. ರಾಜ ಬಂದು ಕೇಳಿದಾಗ ತಾನು ಅದಕ್ಕೆಲ್ಲ ಉತ್ತರ ಕೊಡಬೇಕು ಎನ್ನುವ ರೀತಿಯಲ್ಲಿ ತನ್ನ ದೇಹ, ಬುದ್ಧಿ, ಆತ್ಮಶಕ್ತಿಯನ್ನು ಮುಡಿಪಾಗಿಟ್ಟವನು ಭರತ. ಇದರಲ್ಲಿ ನಮಗೊಂದು ಸಂದೇಶವಿದೆ.

ನಮ್ಮ ಬದುಕಿನ ಅವಧಿ ಮುಗಿದು ಮರಳಿದ ಮೇಲೆ ನಮ್ಮ ಜೀವದ ಯಜಮಾನ, ಭಗವಂತ, ಏನೇನು ಸತ್ಕಾರ್ಯಗಳನ್ನು ಮಾಡಿ ಬಂದಿರಿ ಎಂಬ ಪ್ರಶ್ನೆಯನ್ನು ಕೇಳಿದಾಗ ಉತ್ತರ ನೀಡಬೇಕಲ್ಲವೇ? ಹಾಗೆ ಉತ್ತರ ನೀಡಲು ಸಾಧ್ಯವಾಗುವಂತೆ ನಮ್ಮೆಲ್ಲ ಜೀವಶಕ್ತಿಗಳನ್ನು ಮುಡಿಪಾಗಿಟ್ಟು ದುಡಿದು ಜೀವನ ನಡೆಸಬೇಕು. ಭರತ ಒಂದು ಸುಂದರ ಉದಾಹರಣೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಸೆಪ್ಟೆಂಬರ್ 5, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ನವಮಿ ಗಂ. 08-28 ನಕ್ಷತ್ರ: ಮೂಲಾ ಗಂ. 20-06 ಯೋಗ: ಪ್ರೀತಿ ಗಂ. 11-27, ಕರಣ: ಕೌಲವ ಗಂ. 08-28, ಸಿಂಹ ಮಾಸದ 19 ನೇ ದಿನ.
ರಾಹುಕಾಲ : ಬೆಳಿಗ್ಗೆ 07:30 – 09:00
ಸೂರ್ಯೋದಯ : 06-23 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 08 ಸಫರ್
ಅದೃಷ್ಟ ಸಂಖ್ಯೆ : 1, 10

ಮೇಷ: ಜವಾಬ್ದಾರಿಯುತವಾದ ಕಾರ್ಯಗಳ ಬಗ್ಗೆ ಗಮನವಿರಲಿ. ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸಿದ ಸಂತೋಷ ಸಿಗುವುದು. ಈ ದಿನ ಗ್ರಹದ ಚಲನೆಯು ನಿಮಗೆ ಕೆಲಸದಲ್ಲಿದ್ದ ಅಡೆತಡೆಗಳನ್ನು ನಿವಾರಿಸುವುದು.

ವೃಷಭ: ಸರ್ಕಾರಿ ವೃತ್ತಿಯವರಿಗೆ ಸ್ಥಾನ ಪಲ್ಲಟ ಯೋಗ ಅಥವಾ ನೂತನ ಕ್ಷೇತ್ರದ ಹೊಣೆಗಾರಿಕೆಯನ್ನು ವಹಿಸಬೇಕಾದ ಸ್ಥಿತಿ ಎದುರಾಗಲಿದೆ. ಮನೆಯ ವಿಷಯದಲ್ಲಿ ಯಾವುದೇ ಚಿಂತೆ ಬೇಡ.

ಮಿಥುನ: ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಗಲಿದೆ. ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಯಾವುದೇ ರೀತಿಯ ತೀರ್ಮಾನ ತೆಗೆದುಕೊಳ್ಳಬೇಡಿ. ಕೆಲಸದಲ್ಲಿ ಪ್ರಾಮಾಣಿಕವಾದ ಶ್ರಮವಿರಲಿ.

ಕರ್ಕಾಟಕ: ನಿಮ್ಮ ಪ್ರಯತ್ನಕ್ಕೆ ಸರಿಯಾಗಿ ನಿಮ್ಮ ಸಂಪಾದನೆಯನ್ನು ಉಳಿಸಿಕೊಳ್ಳಲು ಅಸಾಧ್ಯವಾಗಲಿದೆ. ಆಗಾಗ ಮನಸ್ಸಿನಲ್ಲಿ ಕಾಡುವ ಭಯಕ್ಕೆ ಹೆದರುವ ಅವಶ್ಯಕತೆ ಇಲ್ಲ. ಅಧ್ಯಯನಶೀಲರಿಗೆ ಅವಕಾಶ ತೋರಿಬರುವುದು.

ಸಿಂಹ: ಮಾನಸಿಕ ಕೊರಗು ನಿಮ್ಮ ಸಂತೋಷಕ್ಕೆ ಭಂಗ ಉಂಟು ಮಾಡುವುದು. ಹಣಕಾಸಿನ ವಿಚಾರದಲ್ಲಿ ಮತ್ತೊಬ್ಬರಲ್ಲಿ ವ್ಯವಹರಿಸುವಾಗ ದಾಕ್ಷಿಣ್ಯಕ್ಕೆ ಸಿಕ್ಕಿಕೊಳ್ಳದೇ ಇರುವ ರೀತಿಯಲ್ಲಿ ವ್ಯವಹರಿಸಿ.

ಕನ್ಯಾ: ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರಿಸಲು ಒತ್ತಡ ಬರಬಹುದು. ಇಷ್ಟು ದಿನ ನಿಮ್ಮಲ್ಲಿದ್ದ ಅಭದ್ರತೆಯ ಭಾವ ಈ ದಿನದಿಂದ ಬಿಟ್ಟು ಹೋಗಲಿದೆ. ಇದು ನೀವು ಸಾಧನೆಯಲ್ಲಿ ಮೇಲಕ್ಕೆ ಸಾಗಲು ಸಹಕಾರಿ.

ತುಲಾ: ಸದ್ಯದ ಪರಿಸ್ಥಿತಿಯಲ್ಲಿ ಇರುವ ಕೆಲಸ ಬಿಡುವ ಯೋಚನೆ ಸರಿಯೆನಿಸುವುದಿಲ್ಲ. ಕನಸುಗಳು ಸಾಕಾರಗೊಳ್ಳ ಬೇಕಾದರೆ ಅವಿಶ್ರಾಂತ ದುಡಿಮೆ ಅಗತ್ಯ. ಕಬ್ಬಿಣ ಮುಂತಾದ ಕಟ್ಟಡ ನಿರ್ಮಾಣದ ಸಾಮಗ್ರಿಗಳಿಂದ ಲಾಭವಿದೆ.

ವೃಶ್ಚಿಕ: ಕೆಲಸ ನಿಧಾನವಾಗಿ ನಡೆದರೂ ಸಹಚರರು ಸಮರ್ಪಕವಾಗಿ ಪೂರೈಸಿ ಕೊಡುವರು. ಸಂಗೀತ ಕಲಾವಿದರಿಗೆ ಬಿಡುವಿಲ್ಲದ ಕಾರ್ಯಕ್ರಮಗಳಿಂದ ಅಧಿಕ ಆದಾಯವಿರುತ್ತದೆ. ಶ್ರೀದೇವಿ ಸ್ತುತಿಯಿಂದ ನೆಮ್ಮದಿ.

ಧನು: ವೃತ್ತಿರಂಗದಲ್ಲಿ ನಿಮಗಾಗಿ ಅದೃಷ್ಟದ ಬಾಗಿಲು ತೆರೆಯುವುದು. ವ್ಯಾಪಾರ ವ್ಯವಹಾರಗಳು ಸರಾಗವಾಗಿ ನಡೆಯಲಿದೆ. ದಂಪತಿ ಮಧ್ಯೆ ಅನವಶ್ಯಕ ವಾದ ವಿವಾದವು ಸಂಬಂಧವನ್ನು ಹಾಳುಮಾಡಬಹುದು.

ಮಕರ: ನಿಮ್ಮ ಕೆಲಸಗಳ ಬಗ್ಗೆ ಪುನರಾವಲೋಕನೆ ಮಾಡುವುದು, ಇನ್ನೊಬ್ಬರ ಸಲಹೆಯನ್ನು ಸ್ವೀಕರಿಸುವುದು ಒಳ್ಳೆಯದು. ಆರ್ಥಿಕ ತಾಪತ್ರಯಗಳು ಹೇಳಿಕೊಳ್ಳಲಾಗದಂತಾಗಲಿದೆ. ಹೂಗಳ ರಫ್ತು ವ್ಯಾಪಾರದಲ್ಲಿ ಲಾಭವಿದೆ.

ಕುಂಭ: ಲೆಕ್ಕ ಪರಿಶೋಧಕರಿಗೆ ಮತ್ತು ನ್ಯಾಯವಾದಿಗಳಿಗೆ ತೃಪ್ತಿಕರವಾದ ದಿನಗಳು. ಮಹಿಳೆಯರಿಗೆ ಆಡಳಿತ ಅಧಿಕಾರಗಳು ಲಭ್ಯವಾಗಲಿದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು.

ಮೀನ: ಹಲವಾರು ಆಸಕ್ತಿದಾಯಕ ವಿಚಾರಗಳು ನಿಮ್ಮ ಕಿವಿಗೆ ಬೀಳಲಿದೆ. ಕೋರ್ಟು ವಿಚಾರಗಳಿಗಾಗಿ ಪ್ರಯಾಣ ಬೆಳಸ ಬೇಕಾಗುವುದು. ಕಂದಾಯ ಅಧಿಕಾರಿಗಳಿಗೆ ಕೆಲಸದ ಹೊಣೆ ಹೆಚ್ಚುವುದು.

ಪದಬಂಧ 5070 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೊದಲ ಸಲ ನೋಡಿದ ಮಾತ್ರಕ್ಕೆ ಉಂಟಾಗುವ ಪ್ರೀತಿ (4)
3.ಮೇಜವಾನಿ ಮಾಡಲು ಅಡುಗೆಗೆ ಬೇಕಾದ ಸಾಮಗ್ರಿ (4)
5.ಹೆಂಡತಿಯನ್ನು ಕಳೆದು ಕೊಂಡವನು (3)
6.ಅಡಗಲು ಸೂಕ್ತವಾದ ಕಾಡು (3)
7.ಜನದ ಹತ್ತಿರ ಕಾಣಿಸಿರುವ ರಾಕ್ಷಸ (3)
9.ಮನವಿಟ್ಟು ಸಾಧಿಸಿದ ಹತೋಟಿ (3)
11.ಮನಸ್ಸಿನ ಒಲವು (3)
12.ಆ ಪಾತ್ರ ಬೇಕೆಂದು ಕೇಳುತ್ತಿರುವ ಅಯೋಗ್ಯ! (3)
13.ಅಂಗಳದಲ್ಲಿದ್ದಾಗ ಕಾಣಿಸಿದ ಮಂಗಳಗ್ರಹ (4)
15. ಯೋಗವಿದ್ದುದ್ದಕ್ಕೆ ಈ ಹಂಚಿಕೆ (4)

ಮೇಲಿಂದ ಕೆಳಕ್ಕೆ
1.ಈತ ಚರ್ಮದ ಕೆಲಸಗಾರ (3)
2.ತಿಕ್ಕಲನ ಹಿಡಿದಿರುವ ಎಳ್ಳು (2)
4.ಈತ ಮಾತಿನಲ್ಲಿ ನಿಪುಣ (4)
5.ದುಃಖವು ಈ ರೀತಿ ಬಂದಿದೆ (3)
6.ಅರಿಯುತ್ತಾ ಜಾರಿದಾಗ ಅಡರಿದ ಕಾಯಿಲೆ! (3)
8.ನೀರಿನಲ್ಲಿ ವಾಸಿಸುವ ಪ್ರಾಣಿ (4)
10.ಕ್ಷತ್ರಿಯನಿಗೆ ಕಾಣಿಸಿದ ತಾರೆ (3)
12.ಮನ್ಮಥನ ಇನ್ನೊಂದು ಹೆಸರು (3)
14.ಕವಿತೆ ರಚಿಸುವವನು (2)



5069ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ವನದುರ್ಗ 4.ಕಮಠ
5.ಏಮಾರು 6.ಕದನ
8.ವ್ಯವಕಲನ 10.ಗುಲಾಬಿ
12.ಮರಣ 13.ಜರಡಿ
15.ಕೆನೆಹಾಲು

ಮೇಲಿಂದ ಕೆಳಕ್ಕೆ:
1.ಧನ 2.ನಾಮ
3.ವರ್ತಕ 4.ಕರು
5.ಏಕೀಕರಣ 7.ನವ್ಯ
9.ನಗು 11.ಬಿಸಿಲು
12.ಮಡಿ 14.ರತ್ನ
16.ಹಾಡಿ

ಸುಡೊಕು 5456

	1				5	4		9
4		7	6				5	
	6			4	8	1		
	2				7			6
5		1		6			2	
			5					7
	3	9				6		
6			8		4		3	1
		4		3		2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5455 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಅಶೋಕ್ ಗೆಹಲೋತ್–ತರೂರ್ ಭೇಟಿ

ಶಶಿ ತರೂರ್

ನವದೆಹಲಿ(ಪಿಟಿಐ) : ಕಾಂಗ್ರೆಸ್‌ನ ಹಿರಿಯ ನಾಯಕ ಶಶಿ ತರೂರ್ ಅವರು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಭಾನುವಾರ ಭೇಟಿಯಾಗಿ ಪಕ್ಷದ ಅಧ್ಯಕ್ಷೀಯ ಚುನಾವಣೆಯ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಂಬರುವ ಚುನಾವಣೆಗಳು ಮತ್ತು ಪಕ್ಷದ ಭವಿಷ್ಯದ ವಿಚಾರವಾಗಿ ಹಿರಿಯ ನಾಯಕರಿಬ್ಬರು ಅರ್ಧ ಗಂಟೆಗಳ ಕಾಲ ಚರ್ಚೆ ನಡೆಸಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಎ ಐ ಸಿ ಸಿ ಅಧ್ಯಕ್ಷ ಸ್ಥಾನಕ್ಕೆ ಈ ಇಬ್ಬರು ನಾಯಕರೂ ನಿರೀಕ್ಷಿತ ಆಕಾಂಕ್ಷಿಗಳು ಆಗಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

OBITUARY

C V RAMANNA
T T Srinivasa Electricals
Expired On 04:09:2022
Guptha Layout, Lakkasandra.
Condolences By
Wife, Daughter,
Son and Grand Children's.

‘ಶಬಾನಾ, ಜಾವೇದ್, ನಾಸಿರುದ್ದೀನ್ ತುಕ್ಡೆ ಗ್ಯಾಂಗ್ ಸದಸ್ಯರು’

ಭೋಪಾಲ್ (ಪಿಟಿಐ): ಬಾಲಿವುಡ್ ನಟರಾದ ಶಬಾನಾ ಅಜ್ಮಿ, ನಾಸಿರುದ್ದೀನ್ ಶಾ ಹಾಗೂ ಗೀತ ರಚನೆಕಾರ ಜಾವೇದ್ ಅಖ್ತರ್ ಅವರು ತುಕ್ಡೆ-ತುಕ್ಡೆ ಗ್ಯಾಂಗ್ ಸ್ಲೀಪರ್ ಸೆಲ್‌ನ ಸದಸ್ಯರು ಎಂದು ಮಧ್ಯ ಪ್ರದೇಶದ ಗೃಹ ಸಚಿವ ನರೋತ್ತಮ ಮಿಶ್ರಾ ಆಪಾದಿಸಿದ್ದಾರೆ.

ರಾಜಸ್ಥಾನದಲ್ಲಿ ಟೈಲರ್ ಹತ್ಯೆ, ಜಾರ್ಖಂಡ್‌ನಲ್ಲಿ ಮಹಿಳೆಗೆ ಬೆಂಕಿ ಹಚ್ಚಿದ ಪ್ರಕರಣಗಳನ್ನು ಖಂಡಿಸದಿರುವುದು ಇವರ ಸಣ್ಣತನವನ್ನು ತೋರಿಸುತ್ತದೆ ಎಂದು ನರೋತ್ತಮ ಮಿಶ್ರಾ ಆರೋಪಿಸಿದ್ದಾರೆ. ‘ಜಾರ್ಖಂಡ್‌ನಲ್ಲಿ ನಮ್ಮ ಮಗಳಿಗೆ ಬೆಂಕಿ ಹಚ್ಚಲಾಯಿತು. ಅವರು ಏನಾದರು ಹೇಳಿದರೆ? ಇಲ್ಲ. ಬಿಜೆಪಿ ಆಡಳಿತವಿರುವ ರಾಜ್ಯದಲ್ಲಿ ಇಂಥ ಘಟನೆ ನಡೆದಿದ್ದರೆ ಅವರೆಲ್ಲರೂ ಕೂಗಾಡುತ್ತಿದ್ದರು’ ಎಂದು ಮಿಶ್ರಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಕೈ’ ಅಧಿಕೃತ ಬಣದ ಅಭ್ಯರ್ಥಿ ಘೋಷಣೆ

ಸೋನಿಯಾ ವಾಪಸ್ ಬಳಿಕ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಚುನಾವಣೆಯಲ್ಲಿ ಪಕ್ಷದ ಅಧಿಕೃತ ಬಣದ ಅಭ್ಯರ್ಥಿ ಯಾರು ಎಂಬುದನ್ನು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ವಿದೇಶದಿಂದ ಮರಳಿದ ಬಳಿಕ ನಿರ್ಧರಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಸೋನಿಯಾ ಅವರು ಇದೇ 10ರಂದು ದೇಶಕ್ಕೆ ಮರಳಲಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಿಲ್ಲ ಎಂಬ ನಿಲುವನ್ನು ರಾಹುಲ್ ಗಾಂಧಿ ಅವರು ಬದಲಿಸಿಲ್ಲ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವಂತೆ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಸೋನಿಯಾ ಅವರು ಕೋರಿದ್ದಾರೆ ಎನ್ನಲಾಗಿದೆ. ಆದರೆ, ಗೆಹಲೋತ್ ಅವರೂ ಈ ಕುರಿತು ಆಸಕ್ತಿ ತೋರ್ಪಡಿಸಿಲ್ಲ.

ಸೋನಿಯಾ ಗಾಂಧಿ ಅವರು ಭಾರತಕ್ಕೆ ಬಂದ ಬಳಿಕ ಗೆಹಲೋತ್ ಸೇರಿದಂತೆ ಪ್ರಮುಖ ಮುಖಂಡರ ಜತೆಗೆ ಸಮಾಲೋಚನೆ ನಡೆಸಲಿದ್ದಾರೆ. ಜಿ–23 ಗುಂಪು ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲು ಸಜ್ಜಾಗಿದೆ. ಈ ಗುಂಪಿನಿಂದ ಶಶಿ ತರೂರ್ ಅವರು ಅಭ್ಯರ್ಥಿ ಯಾಗುವ ಸಾಧ್ಯತೆ ಇದೆ. ಮತದಾರರ ಯಾದಿಯನ್ನು ಬಹಿರಂಗಪಡಿಸಬೇಕು ಎಂಬ ಕೂಗು ಈ ಗುಂಪಿನಿಂದ ಬಲವಾಗಿ ಕೇಳಿ ಬಂದಿದೆ.

ಅಶೋಕ್ ಗೆಹಲೋತ್ ಅವರಿಗೆ ರಾಜಸ್ಥಾನ ಬಿಟ್ಟು ಹೋಗಲು ಇಷ್ಟ ಇಲ್ಲ. ಅದರಲ್ಲೂ ವಿಧಾನಸಭೆಗೆ ಚುನಾವಣೆ ನಡೆಯಲು ವರ್ಷವಷ್ಟೇ ಇರುವ ಈ ಸಂದರ್ಭದಲ್ಲಿ ಮತ್ತೊಂದು ಬಾರಿ ಅದೃಷ್ಟ ಪರೀಕ್ಷೆಗಿಳಿಯಲು ಅವರು ಸಿದ್ಧರಾಗುತ್ತಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಕುರಿತು ಅವರು ಈವರೆಗೆ ಏನನ್ನೂ ಹೇಳಿಲ್ಲ.

ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದರೂ ರಾಜಸ್ಥಾನ ಮುಖ್ಯಮಂತ್ರಿಯಾಗಿ ಮುಂದುವರಿಯಲು ಅವಕಾಶ ಕೊಡಬೇಕು ಅಥವಾ ತಮ್ಮ ಆಯ್ಕೆಯ ವ್ಯಕ್ತಿಯನ್ನು ಮುಖ್ಯಮಂತ್ರಿಯಾಗಿ ನೇಮಿಸಬೇಕು. ಸಚಿನ್ ಪೈಲಟ್ ಅವರನ್ನು ಮುಖ್ಯಮಂತ್ರಿ ಮಾಡಬಾರದು ಎಂಬ ಷರತ್ತುಗಳನ್ನು ಗೆಹಲೋತ್ ಮುಂದಿಟ್ಟಿದ್ದಾರೆ. ಪಕ್ಷದ ನಾಯಕತ್ವಕ್ಕೆ ಈ ಷರತ್ತುಗಳು ಇಷ್ಟವಾಗಿಲ್ಲ.

ಅಶೋಕ್ ಗೆಹಲೋತ್ ಅವರ ಮನವೊಲಿಸುವುದು ಸೋನಿಯಾ ಅವರಿಗೆ ಸಾಧ್ಯವಾಗಬಹುದು ಎಂದು ಪಕ್ಷದ ಹಲವು ಮುಖಂಡರು ಭಾವಿಸಿದ್ದಾರೆ.

ರಾಹುಲ್ ಗಾಂಧಿ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬೇಕು ಎಂದು ಕಾಂಗ್ರೆಸ್‌ನ ಹಲವು ಮುಖಂಡರು ಒತ್ತಾಯಿಸಿದ್ದಾರೆ. ಆದರೆ, ‘ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಿಲ್ಲ ಎಂದು ರಾಹುಲ್ ಅವರು ಸ್ಪಷ್ಟವಾಗಿ ಹೇಳಿದ್ದಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಇತ್ತೀಚೆಗೆ ಹೇಳಿದ್ದರು.

ರಾಹುಲ್ ಅವರನ್ನು ಮನವೊಲಿಸುವ ಪ್ರಯತ್ನ ಮತ್ತೆ ನಡೆಯಬಹುದು ಎನ್ನಲಾಗಿದೆ.

ಅಧ್ಯಕ್ಷ ಸ್ಥಾನವನ್ನು ಹೊಂದಿಲ್ಲದಿದ್ದರೂ ಪಕ್ಷದ ಚಾಲಕ ಶಕ್ತಿಯಾಗಿ ರಾಹುಲ್ ಗಾಂಧಿ ಅವರೇ ಇದ್ದಾರೆ. ಇದೇ 7ರಿಂದ ಆರಂಭವಾಗುವ ‘ಭಾರತ ಒಗ್ಗೂಡಿಸಿ’ ಯಾತ್ರೆಗೂ ಅವರದ್ದೇ ನೇತೃತ್ವ ಇರಲಿದೆ. ವಿಧಾನಸಭೆಗೆ ಚುನಾವಣೆ ನಡೆಯಲಿರುವ ಗುಜರಾತ್‌ನ ಮತಗಟ್ಟೆ ಮಟ್ಟದ ಕಾರ್ಯಕರ್ತರ ಜತೆಗೆ ಸಂವಾದ ನಡೆಸಲು ಅವರು ಅಹಮದಾಬಾದ್‌ಗೆ ಸೋಮವಾರ ಹೋಗಲಿದ್ದಾರೆ.

ಪಕ್ಷ ತೊರೆದ ಗುಜರಾತ್ ಯುವ ಕಾಂಗ್ರೆಸ್ ಅಧ್ಯಕ್ಷ

(ಅಹಮದಾಬಾದ್ ವರದಿ): ಗುಜರಾತ್ ಯುವ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್ ವಘೇಲಾ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಭಾನುವಾರ ರಾಜೀನಾಮೆ ನೀಡಿದ್ದಾರೆ. ಅವರ ಸ್ಥಾನಕ್ಕೆ ಹರಪಾಲ್‌ಸಿಂಹ ಚೂಡಾಸಮಾ ಅವರನ್ನು ನೇಮಿಸಲಾಗಿದೆ. ರಾಹುಲ್ ಗಾಂಧಿ ಅವರು ಗುಜರಾತ್‌ಗೆ ಸೋಮವಾರ ಭೇಟಿ ನೀಡಲಿದ್ದಾರೆ. ಅದರ ಮುನ್ನಾದಿನ ಈ ಬೆಳವಣಿಗೆ ನಡೆದಿದೆ.

ಪಕ್ಷದಲ್ಲಿನ ಗುಂಪುಗಾರಿಕೆಯೇ ತಮ್ಮ ರಾಜೀನಾಮೆಗೆ ಕಾರಣ ಎಂದು ವಘೇಲಾ ಹೇಳಿದ್ದಾರೆ. ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕಾಗಿ ₹1.70 ಕೋಟಿ ನೀಡಿದ್ದೆ ಎಂದೂ ಅವರು ಆರೋಪಿಸಿದ್ದಾರೆ. ಆದರೆ, ಈ ಆರೋಪವನ್ನು ಕಾಂಗ್ರೆಸ್ ಅಲ್ಲಗಳೆದಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಎಸ್‌ಕೆಎಂ ಸಮಿತಿ: ಯೋಗೇಂದ್ರ ರಾಜೀನಾಮೆ

ನವದೆಹಲಿ (ಪಿಟಿಐ): ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಸಮನ್ವಯ ಸಮಿತಿಗೆ ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ, ರೈತರ ಸಂಘಟಿತ ಹೋರಾಟದಲ್ಲಿ ಮುಂದುವರಿಯುವುದಾಗಿ ಅವರು ತಿಳಿಸಿದ್ದಾರೆ.

ಯಾದವ್ ರಾಜೀನಾಮೆ ಪತ್ರವನ್ನು ಎಸ್‌ಕೆಎಂ ಬಹಿರಂಗಗೊಳಿಸಿದೆ

ಎಸ್‌ಕೆಎಂನ ಸಮನ್ವಯ ಸಮಿತಿಯಲ್ಲಿ ಇನ್ನು ಮುಂದೆ ತಾವು ಇರುವುದಿಲ್ಲ ಎಂದು ಯಾದವ್ ಹೇಳಿದ್ದಾರೆ. ‘ಸಮಿತಿ ಸದಸ್ಯನ ಜವಾಬ್ದಾರಿ ಹೊರಲು ಸಾಧ್ಯವಿಲ್ಲ. ಮೋದಿ ಸರ್ಕಾರದ ವಿರುದ್ಧ ಹೋರಾಡಲು ಎಲ್ಲಾ ಚಳುವಳಿಗಳು ಮತ್ತು ವಿಪಕ್ಷ ರಾಜಕೀಯ ಪಕ್ಷಗಳ ಶಕ್ತಿಗಳು ಸೇರಿಕೊಳ್ಳುವುದು ಮುಖ್ಯವಾಗಿದೆ. ಇದಕ್ಕಾಗಿ ರೈತ ಚಳವಳಿಯ ಹೊರತಾಗಿ ಇತರೆ ಚಳವಳಿಗಳೊಂದಿಗೆ ಸಂಪರ್ಕದಲ್ಲಿದ್ದೇನೆ. ಸಮಿತಿಯ ಜವಾಬ್ದಾರಿಯೊಂದಿಗೆ ನನಗೆ ನ್ಯಾಯ ಸಲ್ಲಿಸಲು ಸಾಧ್ಯವಾಗುವುದಿಲ್ಲ’ ಎಂದು ಯಾದವ್ ಪತ್ರದಲ್ಲಿ ತಿಳಿಸಿದ್ದಾರೆ.

ರಸ್ತೆ ಅಪಘಾತ: 2021ರಲ್ಲಿ ಅತ್ಯಧಿಕ ಸಾವು

ನವದೆಹಲಿ (ಪಿಟಿಐ): 2021ರಲ್ಲಿ ರಸ್ತೆ ಅಪಘಾತದಿಂದಾಗಿ 1.55 ಲಕ್ಷ ಜನರು ಮೃತಪಟ್ಟಿದ್ದಾರೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ತನ್ನ ‘ಆ್ಯಕ್ಸಿಡೆಂಟಲ್ ಡೆತ್ಸ್ ಆ್ಯಂಡ್ ಸೂಸೈಡ್ಸ್ ಇನ್ ಇಂಡಿಯಾ 2021’ ವರದಿಯಲ್ಲಿ ಹೇಳಿದೆ. ಇದು ಒಂದು ವರ್ಷದ ಅವಧಿಯಲ್ಲಿ ಈವರೆಗಿನ ಗರಿಷ್ಠ ಸಂಖ್ಯೆ. ಹೆಚ್ಚಿನ ರಸ್ತೆ ಅಪಘಾತವು (ಶೇ 59.7) ಅತಿಯಾದ ವೇಗದಿಂದಲೇ ಸಂಭವಿಸಿವೆ. ಈ ಕಾರಣದಿಂದಾಗಿ 87,050 ಮಂದಿ ಮೃತಪಟ್ಟಿದ್ದಾರೆ. 2.28 ಲಕ್ಷ ಮಂದಿ ಗಾಯಗೊಂಡಿದ್ದಾರೆ.



ಶಾಸಕರ ಮನೆ ಮೇಲೆ ಸಿಬಿಐ ದಾಳಿ

ಕೋಲ್ಕತ್ತ (ಪಿಟಿಐ): ಚಿಟ್ ಫಂಡ್ ಪ್ರಕರಣದ ತನಿಖೆಯ ಭಾಗವಾಗಿ ಸಿಬಿಐ ಭಾನುವಾರ, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಶಾಸಕ ಸುಬೋಧ್ ಅಧಿಕಾರಿ ಮತ್ತು ಅವರ ಸಹೋದರ ಕಮಲ್ ಅಧಿಕಾರಿ ನಿವಾಸ, ಕಚೇರಿ ಸೇರಿದಂತೆ ಪಶ್ಚಿಮ ಬಂಗಾಳದ ಆರು ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

‘ಜೊತೆಗಿರುವವರು ಸದಾಚಾರಿಗಳು ವಿರೋಧಿಗಳು ಭ್ರಷ್ಟಾಚಾರಿಗಳು’

ಪಟ್ನಾ (ಪಿಟಿಐ): ತನ್ನ ಜೊತೆಯಲ್ಲಿರುವವರನ್ನು ಬಿಜೆಪಿಯು ‘ಸದಾಚಾರಿ’ ಎಂದು ಪರಿಗಣಿಸುತ್ತದೆ ಮತ್ತು ವಿರೋಧಿಗಳನ್ನು ‘ಭ್ರಷ್ಟಾಚಾರಿ’ ಎಂದು ಪರಿಗಣಿಸುತ್ತದೆ’ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬಿಜೆಪಿ ವಿರುದ್ಧ ಭಾನುವಾರ ವ್ಯಂಗ್ಯವಾಡಿದ್ದಾರೆ.

ಇಲ್ಲಿ ನಡೆದ ಜೆಡಿಯು ರಾಷ್ಟ್ರೀಯ ಕಾರ್ಯಕಾರಿ ಸಭೆಯಲ್ಲಿ ಅವರು ಮಾತನಾಡಿದರು. ಹಲವಾರು ರಾಜ್ಯಗಳ ವಿರೋಧ ಪಕ್ಷಗಳ ನಾಯಕರನ್ನು ಬಿಜೆಪಿಗೆ ಸೇರಿಸಿಕೊಳ್ಳುತ್ತಿರುವುದನ್ನು ಉಲ್ಲೇಖಿಸಿದ ಅವರು, ಬೇರೆ ಪಕ್ಷಗಳಿಂದ ನಾಯಕರನ್ನು ಕಳ್ಳಬೇಟೆ ಆಡುವುದು ಭ್ರಷ್ಟಾಚಾರವಲ್ಲವೇ ಎಂದು ಬಿಜೆಪಿಯನ್ನು ಪ್ರಶ್ನಿಸಿದರು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಕಳೆದುಕೊಳ್ಳುವ ನಿಟ್ಟಿನಲ್ಲಿ ಎಲ್ಲಾ ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ಕೆಲಸ ಮಾಡುವುದಾಗಿ ಅವರು ಸಭೆ ಬಳಿಕ ಸುದ್ದಿಗಾರರಿಗೆ ಹೇಳಿದರು.

ಸೆಪ್ಟೆಂಬರ್ 5ರಿಂದ 8ರ ವರೆಗೆ ದೆಹಲಿ ಪ್ರವಾಸದಲ್ಲಿರುವ ನಿತೀಶ್, ಕಾಂಗ್ರೆಸ್ ಜೊತೆ ಇತರ ಆರು ಪ್ರಾದೇಶಿಕ ಪಕ್ಷಗಳ ನಾಯಕರನ್ನು ಭೇಟಿ ಆಗಲಿದ್ದಾರೆ ಎಂದು ಜೆಡಿಯು ವಕ್ತಾರ ಕೆ.ಸಿ. ತ್ಯಾಗಿ ತಿಳಿಸಿದ್ದಾರೆ.

ರೆಸಾರ್ಟ್‌ನಿಂದ ಮರಳಿದ ಜಾರ್ಖಂಡ್ ಶಾಸಕರು

ರಾಯಪುರ (ಪಿಟಿಐ): ಛತ್ತೀಸ್‌ಗಡ ರಾಜಧಾನಿ ರಾಯಪುರ ಸಮೀಪದ ರೆಸಾರ್ಟ್‌ನಲ್ಲಿ ಕಳೆದ ಆಗಸ್ಟ್ 30ರಿಂದ ತಂಗಿದ್ದ ಜಾರ್ಖಂಡ್‌ನ ಆಡಳಿತಾರೂಢ ಯುಪಿಎ ಮೈತ್ರಿಕೂಟದ ಕನಿಷ್ಠ 30 ಶಾಸಕರು ಭಾನುವಾರ ಮಧ್ಯಾಹ್ನ ಜಾರ್ಖಂಡ್‌ಗೆ ಮರಳಿದ್ದಾರೆ.

ಸೋಮವಾರ ನಿಗದಿಯಾಗಿರುವ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಭಾಗಿಯಾಗುವ ಸಲುವಾಗಿ ರಾಂಚಿಗೆ ಮರಳಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಅಧಿವೇಶನದಲ್ಲಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ವಿಶ್ವಾಸಮತ ಯಾಚಿಸಲಿದ್ದಾರೆ.

30 ಶಾಸಕರು ಹಾಗೂ ಜೆಎಂಎಂ, ಕಾಂಗ್ರೆಸ್ ಪಕ್ಷದ ಕೆಲ ನಾಯಕರಿದ್ದ ವಿಶೇಷ ವಿಮಾನವು ರಾಯಪುರದ ಸ್ವಾಮಿ ವಿವೇಕಾನಂದ ವಿಮಾನ ನಿಲ್ದಾಣದಿಂದ ಭಾನುವಾರ ಮಧ್ಯಾಹ್ನ 3:45ಕ್ಕೆ ಹೊರಟಿತು ಎಂದು ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದ್ದಾರೆ.

ಪೊಲೀಸ್ ಬೆಂಗಾವಲು ವಾಹನದೊಂದಿಗೆ ಬಸ್‌ನಲ್ಲಿ ಶಾಸಕರು ಮತ್ತು ಇತರ ನಾಯಕರನ್ನು ವಿಮಾನ ನಿಲ್ದಾಣಕ್ಕೆ ಕರೆತರಲಾಗಿತ್ತು. ವಿಮಾನ ಹತ್ತುವ ಮೊದಲು ಶಾಸಕರು ಮಾಧ್ಯಮಗಳತ್ತ ಕೈಬೀಸಿದರು.

ಆಡಳಿತರೂಢ ಮೈತ್ರಿಕೂಟದ ಶಾಸಕರನ್ನು ಬಿಜೆಪಿ ಸೆಳೆಯುವ ಭೀತಿ ಇದ್ದ ಕಾರಣ, ಮೈತ್ರಿಕೂಟವು ತನ್ನ ಶಾಸಕರನ್ನು ರಾಯಪುರದ ಐಷಾರಾಮಿ ರೆಸಾರ್ಟ್‌ಗೆ ಸ್ಥಳಾಂತರಿಸಿತ್ತು. ಒಟ್ಟು 32 ಶಾಸಕರು ಆಗಸ್ಟ್ 30ರಿಂದ ಮೇಫೇರ್ ಗಾಲ್ಫ್ ರೆಸಾರ್ಟ್‌ನಲ್ಲಿ ತಂಗಿದ್ದರು. ಈ ಪೈಕಿ ನಾಲ್ವರು ಶಾಸಕರು ಗುರುವಾರ ನಡೆದ ಸಂಪುಟ ಸಭೆಯಲ್ಲಿ ಭಾಗಿಯಾಗಲು ರಾಂಚಿಗೆ ಮರಳಿದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಜಮ್ಮು–ಕಾಶ್ಮೀರ ಚುನಾವಣೆಯಿಂದ ಪಕ್ಷ ಕಾರ್ಯಾರಂಭ

‘ಹೊಸ ಪಕ್ಷಕ್ಕೆ ಜನರೇ ಹೆಸರಿಡಲಿದ್ದಾರೆ’

ಪ್ರಜಾವಾಣಿ ವಾರ್ತೆ

ಗುಲಾಂ ನಬಿ ಆಜಾದ್ ಅವರು ರ್‍ಯಾಲಿಯಲ್ಲಿ ಕೈಬೀಸಿದರು —ಪಿಟಿಐ ಚಿತ್ರ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನವನ್ನು ಮರಳಿ ಪಡೆಯುವುದು, ಕಾಶ್ಮೀರಿ ಪಂಡಿತರಿಗೆ ಪುನರ್‌ವಸತಿ, ಇಲ್ಲಿನ ಜನರಿಗೆ ಭೂಮಿ ಹಕ್ಕು ಮತ್ತು ಉದ್ಯೋಗವನ್ನು ದೊರಕಿಸಿಕೊಡುವುದಕ್ಕಾಗಿ ತಮ್ಮ ಹೊಸ ಪಕ್ಷವು ಹೋರಾಡಲಿದೆ ಎಂದು ಗುಲಾಂ ನಬಿ ಆಜಾದ್ ಭಾನುವಾರ ಹೇಳಿದರು.

ಜಮ್ಮುವಿನ ಸೈನಿಕ್ ಕಾಲೊನಿಯಲ್ಲಿ ಆಯೋಜಿಸಿದ್ದ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಹೊಸ ಪಕ್ಷಕ್ಕೆ ಎಲ್ಲರಿಗೂ ಅರ್ಥವಾಗುವಂತಹ ಹಿಂದೂಸ್ತಾನಿ ಹೆಸರನ್ನು ಇಡಲಾಗುವುದು. ಹೆಸರನ್ನು ಜಮ್ಮು ಮತ್ತು ಕಾಶ್ಮೀರದ ಜನರೇ ನಿರ್ಧರಿಸಲಿದ್ದಾರೆ. ಜೊತೆಗೆ ಪಕ್ಷದ ಧ್ವಜದ ಬಗ್ಗೆಯೂ ಅವರೇ ನಿರ್ಧರಿಸಲಿದ್ದಾರೆ’ ಎಂದು ಹೇಳಿದರು.

‘ಜಮ್ಮು ಮತ್ತು ಕಾಶ್ಮೀರದ ಜನರನ್ನು ‘ಸಂತೋಷ’ವಾಗಿರಿಸುವುದು ನನ್ನ ಬಹುವರ್ಷಗಳ ಕನಸು. 2005–2008ರ ವರೆಗೆ ನಾನು ಮುಖ್ಯಮಂತ್ರಿ ಆಗಿದ್ದಾಗ, ಹಲವು ಸಹೋದ್ಯೋಗಿಗಳು ಮಧ್ಯದಲ್ಲೇ ನನ್ನನ್ನು ಬಿಟ್ಟು ಹೋದರು. ಆದ್ದರಿಂದ ನನ್ನ ಕನಸು ಕನಸಾಗಿಯೇ ಉಳಿಯಿತು. ಆ ಸಮಯದಲ್ಲಿ ನನ್ನ ಸಂಪುಟ ಸಹೋದ್ಯೋಗಿಗಳಾಗಿದ್ದವರು ಈಗ ನನ್ನೊಂದಿಗೆ ಬನ್ನಿ. ಎಲ್ಲರೂ ಸೇರಿ ಆ ಕನಸನ್ನು ನನಸು ಮಾಡೋಣ’ ಎಂದು ಕರೆ ನೀಡಿದರು.

‘ಹೊಸ ಪಕ್ಷವು ರಾಷ್ಟ್ರೀಯ ಪಕ್ಷವಾಗಿರಲಿದೆ. ಆದರೆ, ಈ ಕೂಡಲೇ ರಾಷ್ಟ್ರ ರಾಜಕಾರಣದಲ್ಲಿ ಧುಮುಕುವ ಅವಸರ ಇಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿ ಯಾವಾಗ ಬೇಕಾದರೂ ಚುನಾವಣೆ ಘೋಷಣೆ ಆಗಬಹುದು. ಆದ್ದರಿಂದ ಪಕ್ಷವು ಇಲ್ಲಿಂದಲೇ ಕಾರ್ಯಾರಂಭ ಮಾಡಲಿದೆ’ ಎಂದು ಹೇಳಿದರು.

ಪಕ್ಷವು ಇಲ್ಲಿನ ಜನರ ಘನತೆ, ಗೌರವವನ್ನು ಕಾಪಾಡುವ ಭರವಸೆ ನೀಡುತ್ತದೆ. ಎಲ್ಲರನ್ನೂ ಒಗ್ಗೂಡಿಸಿಕೊಂಡು ಎಲ್ಲರಲ್ಲೂ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡಲಾಗುವುದು. ಜಮ್ಮುವಿನಲ್ಲಿ ಮನೆ ಕಳೆದುಕೊಂಡ 2.50 ಲಕ್ಷ ಜನರಿಗೆ ಮನೆ ಕಟ್ಟಿ ಕೊಡಲಾಗುವುದು. ಜಿಲ್ಲಾಮಟ್ಟದಲ್ಲಿ ಕ್ರೀಡಾ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲಾಗುವುದು. ಐ.ಟಿ ಪಾರ್ಕ್ ಸ್ಥಾಪನೆ, ಉತ್ತಮ ಆರೋಗ್ಯ ಸೇವೆಯನ್ನು ನೀಡಲಾಗುವುದು ಎಂದರು.

ಕಾಂಗ್ರೆಸ್ ಟ್ವಿಟರ್‌ಗೆ ಮಾತ್ರ ಸೀಮಿತ: ಕಾಂಗ್ರೆಸ್ ವಿರುದ್ಧ ವಾಗ್ದಾಳಿಯನ್ನು ಮುಂದುವರಿಸಿದ ಆಜಾದ್ ಅವರು, ‘ಕಾಂಗ್ರೆಸ್ ಅನ್ನು ನಾವು ನಮ್ಮ ರಕ್ತದಿಂದ ಕಟ್ಟಿದೆವು; ಕಂಪ್ಯೂಟರ್, ಟ್ವಿಟರ್‌ನಿಂದ ಅಲ್ಲ. ಪಕ್ಷದ ಕಾರ್ಯವ್ಯಾಪ್ತಿ ಕಂಪ್ಯೂಟರ್ ಮತ್ತು ಟ್ವಿಟರ್‌ಗೆ ಸೀಮಿತವಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಕಾಂಗ್ರೆಸ್ ಸುಳ್ಳುಗಳನ್ನು ಹರಡುತ್ತಿದೆ. ಈ ಕಾರಣಕ್ಕಾಗಿಯೇ ಪಕ್ಷವು ಜನರೊಂದಿಗೆ ಬೆರೆಯುತ್ತಿಲ್ಲ’ ಎಂದರು.

ಅಶೋಕ್ ಶರ್ಮಾ ರಾಜೀನಾಮೆ

ಕಾಂಗ್ರೆಸ್ ನಾಯಕ, ಮಾಜಿ ಶಾಸಕ ಅಶೋಕ್ ಶರ್ಮಾ ಅವರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿರುವ ಶರ್ಮಾ, ಸದ್ಯದ ಪರಿಸ್ಥಿತಿ ಮತ್ತು ಅನಿವಾರ್ಯ ಕಾರಣಗಳಿಂದ ರಾಜೀನಾಮೆ ನೀಡುತ್ತಿರುವುದಾಗಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಶರ್ಮಾ ಅವರು ಎಐಸಿಸಿಯ ‘ವಿಚಾರ್ ವಿಭಾಗ್’ನ ರಾಷ್ಟ್ರೀಯ ಸಂಚಾಲಕ ಮತ್ತು ಪ್ರದೇಶ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿ ಕಾರ್ಯ ನಿರ್ವಹಿಸಿದ್ದಾರೆ.

ಗೊಟಬಯಗೆ ಈಗ ಕಾನೂನು ಕ್ರಮದ ಆತಂಕ

ಕೊಲಂಬೊ(ಎಪಿ): ಶ್ರೀಲಂಕಾದಿಂದ ಪಲಾಯನ ಮಾಡಿದ್ದ ಪದಚ್ಯುತ ಅಧ್ಯಕ್ಷ ಗೊಟಬಯ ರಾಜಪಕ್ಸೆ ಅವರು ಏಳು ವಾರಗಳ ನಂತರ ಸ್ವದೇಶಕ್ಕೆ ವಾಪಸಾಗಿದ್ದು, ಸದ್ಯ ಅವರಿಗೆ ಸಾಂವಿಧಾನಿಕ ವಿನಾಯಿತಿಗಳ ರಕ್ಷಣೆ ಇಲ್ಲ. 12 ವರ್ಷಗಳ ಹಿಂದೆ ಇಬ್ಬರು ಯುವ ರಾಜಕೀಯ ಹೋರಾಟಗಾರರನ್ನು ಕಣ್ಮರೆಗೊಳಿಸಿದ ಸಂಬಂಧ ಈಗ ಅವರು ಕಾನೂನು ಕ್ರಮ ಎದುರಿಸಬೇಕಾಗಬಹುದು ಎಂದು ವಕೀಲರು ಶನಿವಾರ ತಿಳಿಸಿದರು.

ಇಬ್ಬರು ಯುವ ರಾಜಕೀಯ ಹೋರಾಟಗಾರರ ಕಣ್ಮರೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗಲು ಕಳೆದ ಜೂನ್‌ನಲ್ಲೇ ರಾಜಪಕ್ಸ ಅವರಿಗೆ ಸಮನ್ಸ್ ನೀಡಲಾಗಿತ್ತು. ಆಗ ಅವರು ದೇಶದಿಂದ ಪರಾರಿಯಾಗಿದ್ದರು. ಮುಂದಿನ ವಾರ ಸುಪ್ರೀಂಕೋರ್ಟ್ ಎದುರು ವಿಚಾರಣೆಗೆ ಹಾಜರಿರಲು ಸಮನ್ಸ್ ಕೊಡಿಸಲಾಗುವುದು ಎಂದು ಸಂತ್ರಸ್ತ ಕುಟುಂಬಗಳ ಪ್ರತಿನಿಧಿ ವಕೀಲ ನುವಾನ್ ಬೋಪೆಜ್ ಹೇಳಿದ್ದಾರೆ. ಅಧ್ಯಕ್ಷರಾಗಿದ್ದಾಗ ಅವರಿಗಿದ್ದ ಸಾಂವಿಧಾನಿಕ ವಿನಾಯಿತಿ ರಕ್ಷಣೆಯಿಂದಾಗಿ ನ್ಯಾಯಾಲಯ ಪ್ರಕರಣಗಳು ಬಾಕಿ ಇರಲಿಲ್ಲ. 2019ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಗೊಟಬಯ ಅವರ ವಿರುದ್ಧದ ಭ್ರಷ್ಟಾಚಾರ ಪ್ರಕರಣವನ್ನೂ ರಕ್ಷಣಾ ಅಧಿಕಾರಿಗಳು ಹಿಂಪಡೆದಿದ್ದರು.

ಬ್ರಿಟನ್ ಪ್ರಧಾನಿ ಪಟ್ಟ: ಇಂದು ಘೋಷಣೆ

ಲಂಡನ್(ಪಿಟಿಐ): ಬ್ರಿಟನ್‌ನ ಮುಂದಿನ ಪ್ರಧಾನಿಯ ಆಯ್ಕೆ ಸೋಮವಾರ ನಡೆಯಲಿದ್ದು, ಅಂತಿಮವಾಗಿ ಕಣದಲ್ಲಿರುವ ಭಾರತೀಯ ಮೂಲದ ರಿಷಿ ಸುನಕ್ ಮತ್ತು ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಅವರು ಇಂಧನ ಬಿಕ್ಕಟ್ಟನ್ನು ಬಗೆಹರಿಸಿ ದೇಶದ ಜನತೆಯನ್ನು ಬೆಲೆ ಏರಿಕೆಯ ಆಘಾತದಿಂದ ಪಾರು ಮಾಡುವ ವಾಗ್ದಾನ ನೀಡಿದ್ದಾರೆ.

ರಿಷಿ ಸುನಕ್ ಅವರು ಕಡಿಮೆ ಆದಾಯದ ಜನರನ್ನು ಗುರಿಯಾಗಿಟ್ಟುಕೊಂಡು ತಮ್ಮ ಪ್ರಚಾರ ಕಾರ್ಯ ನಡೆಸಿದ್ದರೆ, ಲಿಜ್ ಟ್ರಸ್ ಅವರು ಜನರನ್ನು ಬೆಲೆ ಏರಿಕೆಯಿಂದ ಪಾರು ಮಾಡಲು ಏನು ಕ್ರಮ ಕೈಗೊಳ್ಳುವರು ಎಂಬುದನ್ನು ಬಹಿರಂಗವಾಗಿ ಹೇಳಿಲ್ಲ, ಕನ್‌ಸರ್ವೇಟಿವ್ ಪಾರ್ಟಿ ನಾಯಕಿಯಾಗಿ ಆಯ್ಕೆಯಾದರೆ ‘ತಕ್ಷಣ ಕ್ರಮ’ ಕೈಗೊಳ್ಳುವ ಭರವಸೆಯನ್ನಷ್ಟೇ ಅವರು ನೀಡಿದ್ದಾರೆ.

ಇದುವರೆಗೆ ನಡೆದ ಹೆಚ್ಚಿನ ಎಲ್ಲಾ ಸಮೀಕ್ಷೆಗಳೂ 47 ವರ್ಷದ ಲಿಜ್ ಟ್ರಸ್ ಅವರೇ ಪ್ರಧಾನಿ ಹುದ್ದೆಯ ರೇಸ್‌ನಲ್ಲಿ ಮುಂದಿದ್ದಾರೆ ಎಂದು ಹೇಳಿದ್ದು, 42 ವರ್ಷದ ರಿಷಿ ಸುನಕ್ ಅವರಿಗೆ ಸೋಲು ಉಂಟಾಗಬಹುದು ಎಂದು ಹೇಳಿವೆ. ಇದೇ ಪ್ರಥಮ ಬಾರಿಗೆ ಭಾರತೀಯ ಮೂಲದ ರಾಜಕಾರಣಿಯೊಬ್ಬರು ಬ್ರಿಟಿಷ್ ಪ್ರಧಾನಿ ಪಟ್ಟಕ್ಕೆ ಸ್ಪರ್ಧಿಸಿದ್ದಾರೆ. ಟ್ರಸ್ ಅವರು ಆಯ್ಕೆಯಾದರೆ, ಮಾರ್ಗರೇಟ್ ಥ್ಯಾಚರ್ ಮತ್ತು ಥೆರೆಸಾ ಮೇ ಅವರ ಬಳಿಕ ಪ್ರಧಾನಿ ಪಟ್ಟ ಏರಿದ ಮೂರನೇ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

ಟೋರಿ ಸಂಸದರ ಬಳಗದಲ್ಲಿ ಸುನಕ್ ಅವರೇ ಪ್ರಧಾನಿ ಪಟ್ಟದ ನೆಚ್ಚಿನ ಅಭ್ಯರ್ಥಿಯಾಗಿದ್ದರು. ಆದರೆ ಆನ್‌ಲೈನ್ ಮತ್ತು ಅಂಚೆ ಮೂಲಕ ಚಲಾವಣೆಯಾದ 1.60 ಲಕ್ಷ ಮತಗಳಲ್ಲಿ ಲಿಜ್ ಟ್ರಸ್ ಅವರು ಸುನಕ್ ಅವರನ್ನು ಹಿಂದಿಕ್ಕಿರುವುದು ಸಮೀಕ್ಷೆಗಳಿಂದ ದೃಢಪಟ್ಟಿದೆ. ಸೋಮವಾರ ಮಧ್ಯಾಹ್ನ 12.30ಕ್ಕೆ (ಸ್ಥಳೀಯ ಕಾಲಮಾನ) ಪ್ರಧಾನಿ ಸ್ಪರ್ಧೆಯಲ್ಲಿ ಗೆದ್ದವರ ಹೆಸರನ್ನು ಚುನಾವಣಾ ಅಧಿಕಾರಿ ಸರ್ ಗ್ರಹಾಂ ಬ್ರಾಡಿ ಪ್ರಕಟಿಸಲಿದ್ದಾರೆ.

ಸುವೆಲ್ಲಾ ಬ್ರೇವರ್‌ಮನ್‌ಗೆ ಸಚಿವ ಸ್ಥಾನ?

ಒಂದು ವೇಳೆ ಲಿಜ್ ಟ್ರಸ್ ಅವರು ಪ್ರಧಾನಿಯಾಗಿ ಆಯ್ಕೆಯಾದರೆ ಅವರ ಸಂಪುಟದಲ್ಲಿ ಭಾರತೀಯ ಮೂಲದ ಸುವೆಲ್ಲಾ ಬ್ರೇವರ್‌ಮನ್ ಅವರು ಸಚಿವರಾಗಿ ಆಯ್ಕೆಯಾಗುವ ಸಾಧ್ಯತೆ ಇದೆ.

ಸದ್ಯ ಅಟಾರ್ನಿ ಜನರಲ್ ಆಗಿರುವ ಗೋವಾ ಮೂಲದ ಸುವೆಲ್ಲಾ ಅವರೂ ಆರಂಭಿಕ ಹಂತದಲ್ಲಿ ಪ್ರಧಾನಿ ಸ್ಪರ್ಧೆಯಲ್ಲಿದ್ದರು. ಎರಡನೇ ಸುತ್ತಿನ ಮತದಾನದ ಬಳಿಕ ಅವರು ಸ್ಪರ್ಧೆಯಿಂದ ಹೊರಬಿದ್ದಿದ್ದರು, ಬಳಿಕ ಟ್ರಸ್ ಅವರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದರು. ಅವರು ಪ್ರೀತಿ ಪಟೇಲ್ ಹೊಂದಿದ್ದ ಗೃಹ ಕಾರ್ಯದರ್ಶಿ ಹುದ್ದೆಗೆ ಆಯ್ಕೆಯಾಗುವ ಸಾಧ್ಯತೆ ಇದೆ.

ಔಷಧ ಕ್ಷೇತ್ರ: ಸ್ವಾತಿ ಅರೂರ್ ಹೆಗ್ಗಳಿಕೆ

ಹ್ಯೂಸ್ಟನ್ (ಪಿಟಿಐ):ಟೆಕ್ಸಾಸ್ ವಿಶ್ವವಿದ್ಯಾಲಯದ ತಳಿ ವಿಜ್ಞಾನ ವಿಭಾಗದ ಉಪಾಧ್ಯಕ್ಷೆ ಮತ್ತು ಎಂ.ಡಿ ಆ್ಯಂಡರ್‌ಸನ್ ಕ್ಯಾನ್ಸರ್ ಕೇಂದ್ರದ ಪ್ರೊಫೆಸರ್, ಭಾರತೀಯ ಮೂಲದ ಡಾ.ಸ್ವಾತಿ ಅರೂರ್ ಅವರು 2022ನೇ ಸಾಲಿನ ಆರೋಗ್ಯ ಮತ್ತು ಔಷಧ ಕ್ಷೇತ್ರದ ಉದಯೋನ್ಮುಖ ಮೇಧಾವಿ ನಾಯಕರಾಗಿ ಆಯ್ಕೆಯಾಗಿದ್ದಾರೆ.

ರಾಷ್ಟ್ರೀಯ ವೈದ್ಯಕೀಯ ಅಕಾಡೆಮಿ (ಎನ್‌ಎಎಂ) ಆರೋಗ್ಯ ಮತ್ತು ಔಷಧ ಕ್ಷೇತ್ರದ ಉದಯೋನ್ಮುಖ ಮೇಧಾವಿ ನಾಯಕರನ್ನು ಗುರುತಿಸಿದೆ. 2001ರಲ್ಲಿ ಏಮ್ಸ್‌ನಲ್ಲಿ ಮೈಕ್ರೊಬಯಾಲಜಿಯಲ್ಲಿ ಪಿಎಚ್.ಡಿ ಪಡೆದಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

ELECTRICAL SUPERVISORS and Electricians, are required for software /BPO /property maintenance in Bangalore, Handsome salary along with PF, ESI, bonus Candidates with ITI/ Diploma pls Contact: 9731105253, 8867619227, 9740496632

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು, ಹುಡುಗರು ಬೇಕಾಗಿದ್ದಾರೆ ಊಟವಸತಿಯಿದೆ 10,000 - 15,000. 8951315839, 9880545002

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18,000-20,000 ಪ್ರತಿ ತಿಂಗಳು+ ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 1500020000 ಗಳಿಸಿ. ಕರೆಮಾಡಿ: 9611225388/ 9611225266

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Banashankari

40*60 SOUTH facing semi commercial site for sale in banashankri 6th stage bengaluru 7000/sqft ph 9945861392,9591191563

ಪ್ರವಾಸ

Travel

★ಶ್ರೇಯಸ್ ಟೂರ್ಸ್★ ಹಾರ್ನೋಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

15/9/22, 8/10/22 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್, 6/10/22 ನೇಪಾಳ್, ಮುಕ್ತಿನಾಥ್, ಕಾಶಿ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ್) 9845035349, 9482435755

ಒದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
THE RcsS SPOKEN ENGLISH ACADEMY
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

10.09.2022 26.09.2022 10.10.2022 ವಿಮಾನ/ರೈಲು/ಬಸ್ಸಿನಲ್ಲಿ ದೆಹಲಿ ಅಮೃತ್ಸರ್ ವೈಷ್ಣೋದೇವಿ ಹರಿದ್ವಾರ್ ಚಾರ್‌ಧಾಮ್ ಸಮೇತ 09.10.2022 ನೇಪಾಳ ಮುಕ್ತಿನಾಥ್ ಪೋಖ್ರಾ,ಲೂಂಬಿನಿ 09.11.2022 ಸೋಮನಾಥ್ ದ್ವಾರಕಾ ಬಾವನಗರ್ ಓಂಕಾರೇಶ್ವರ್ ದಕ್ಷಿಣ/ಮಧ್ಯ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 26574131 8317446683 9916408171

6.9.2022 ಮತ್ತು 16.9.2022 ರಿಂದ 13 ದಿನಗಳು ಎ/ಸಿ ರೈಲು ಮತ್ತು ಎ/ಸಿ ಬಸ್ಸಿನಲ್ಲಿ ಕಾಶಿ-ನೇಪಾಳ- ಗಯಾ- ಅಯೋಧ್ಯ ಸೀತಾಮುಡಿ- ಅಲಹಾಬಾದ್. 8.9.2022 ರಿಂದ 4ದಿನಗಳು. ಧರ್ಮಸ್ಥಳ, ಮುರಡೇಶ್ವರ-ಹೊರನಾಡು, ಕೊಲ್ಲೂರು. 24.9.2022 ರಿಂದ 2ದಿನ ಮಡಿಕೇರಿ, ಅಬ್ಬೆಫಾಲ್ಸ್, ಮೈಸೂರು. 15.11.2022 ರಿಂದ 9ದಿನ ಅಹಮದಾಬಾದ್, ಸೋಮನಾಥ, ಮೌಂಟ್‌ಅಬು, ಸ್ಟ್ಯಾಚು ಆಫ್ ಯುನಿಟಿ. ಶ್ರೀಗುರುರಾಜ ಟ್ರಾವೆಲ್ಸ್ (ರಿ) 9900124333, 9611082432, 8123099913

05.10.2022ರಿಂದ 13ದಿನಗಳು ವಿಮಾನ ಮತ್ತು ಡೀಲಕ್ಸ್ ಬಸ್ಸಿನಲ್ಲಿ ಚಾರಧಾಮ್ ಸಮೇತ ಮಸ್ಸೂರಿ, ಹರಿದ್ವಾರ,ದೆಹಲಿ.ಹಾಗೂ ಅಷ್ಟಜ್ಯೋತಿರ್ಲಿಂಗ ಸಮೇತ ಅಹಮದಾಬಾದ್,ದ್ವಾರಕ, ಸರ್ದಾರ್‌ಪಟೇಲ್ ಪ್ರತಿಮೆ 18ದಿನಗಳು.`ಏಷ್ಯನ್ ಟ್ರಾವೆಲ್ ಲೈನ್ಸ್,164/3,ಆರ್.ವಿ.ರಸ್ತೆ, ಬೆಂಗಳೂರು..04. 8105657052, 26565085.

To place your ad in Deccan Herald & Prajavani Classifieds
DH Classifieds
More value, more impact
For details contact:
Vishal : 9845114560
Jerry : 9731810277
Tanveer : 9886213331
Ravichandra : 9901641752
E-mail: dhclassifieds@deccanherald.co.in

ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿ: ವಿರಾಟ್ ಕೊಹ್ಲಿ ಅರ್ಧಶತಕ ವ್ಯರ್ಥ; ಭಾರತಕ್ಕೆ ನಿರಾಸೆ

ರಿಜ್ವಾನ್ ಆಟ: ಪಾಕ್‌ಗೆ ಒಲಿದ ಜಯ

ಪಾಕಿಸ್ತಾನ ತಂಡದ ಮೊಹಮ್ಮದ್ ರಿಜ್ವಾನ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ದುಬೈ(ಪಿಟಿಐ): ಗಾಯದ ನೋವು ಸಹಿಸಿಕೊಂಡು ಆಡಿದ ಮೊಹಮ್ಮದ್ ರಿಜ್ವಾನ್, ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದ ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ಜಯಕ್ಕೆ ಕಾರಣರಾದರು.

ದುಬೈ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರೋಚಕ ಪಂದ್ಯದಲ್ಲಿ ಪಾಕ್ ತಂಡವು 5 ವಿಕೆಟ್‌ಗಳಿಂದ ಭಾರತವನ್ನು ಮಣಿಸಿತು. ವಿರಾಟ್ ಕೊಹ್ಲಿ ಅರ್ಧಶತಕದ (60; 44ಎ) ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 181 ರನ್ ಗಳಿಸಿತ್ತು. ಈ ಗುರಿಯನ್ನು ಬೆನ್ನಟ್ಟಿದ ಪಾಕ್ ತಂಡವು 19.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 182 ರನ್ ಗಳಿಸಿ ಗೆದ್ದಿತು.

ಪಾಕ್ ತಂಡದ ರಿಜ್ವಾನ್ ವಿಕೆಟ್ ಕೀಪಿಂಗ್ ಮಾಡುವಾಗಲೇ ಬಲಗಾಲಿಗೆ ಪೆಟ್ಟುಮಾಡಿಕೊಂಡು ಚಿಕಿತ್ಸೆ ಪಡೆದಿದ್ದರು. ಬ್ಯಾಟಿಂಗ್ ಮಾಡುವಾಗಲೂ ಈ ನೋವು ಅವರನ್ನು ಕಾಡಿತು. ಆದರೆ, ಭಾರತದ ಬೌಲರ್‌ಗಳ ಎಸೆತಗಳನ್ನು ಅವರು ಲೀಲಾಜಾಲವಾಗಿ ಎದುರಿಸಿದರು. ಯುವ ಸ್ಪಿನ್ನರ್ ರವಿ ಬಿಷ್ಣೋಯಿ ಬೌಲಿಂಗ್‌ನಲ್ಲಿ ಬಾಬರ್ ಆಜಂ ಹಾಗೂ ಅನುಭವಿ ಸ್ಪಿನ್ನರ್ ಯಜುವೇಂದ್ರ ಚಾಹಲ್ ಎಸೆತದಲ್ಲಿ ಫಕರ್ ಜಮಾನ್ ಔಟಾದರು. ಈ ಹಂತದಲ್ಲಿ ರಿಜ್ವಾನ್ (71; 51ಎ) ಹಾಗೂ ಮೊಹಮ್ಮದ್ ನವಾಜ್ (42; 20ಎ) ಜೊತೆಗೂಡಿ 72 ರನ್ ಸೇರಿಸಿದರು. 16ನೇ ಓವರ್‌ನವರೆಗೂ ಇವರ ಆಟ ನಡೆಯಿತು. ಭುವನೇಶ್ವರ್ ಬೌಲಿಂಗ್‌ನಲ್ಲಿ ನವಾಜ್ ಔಟಾದಾಗ ಭಾರತವು ಮತ್ತೆ ಗೆಲುವಿನ ಆಸೆ ಜೀವಂತವಾಯಿತು. ನಂತರದ ಓವರ್‌ನಲ್ಲಿಯೇ ರಿಜ್ವಾನ್ ವಿಕೆಟ್ ಕಬಳಿಸುವಲ್ಲಿ ಯಶಸ್ವಿಯಾದ ಹಾರ್ದಿಕ್ ಭಾರತದ ವಿಶ್ವಾಸ ಹೆಚ್ಚಿಸಿದರು.

ಆದರೆ, ರವಿ ಹಾಕಿದ 18ನೇ ಓವರ್‌ನಲ್ಲಿ ಅರ್ಷದೀಪ್ ಸುಲಭ ಕ್ಯಾಚ್ ಕೈಚೆಲ್ಲಿ ಆಸಿಫ್‌ಗೆ ಜೀವದಾನ ಕೊಟ್ಟರು. ಆಸಿಫ್ ಉಪಯುಕ್ತ ಕಾಣಿಕೆ ನೀಡಿದರು. ತಂಡ ಗೆಲುವಿನ ಸನಿಹ ಸಾಗಿತು.

ಅರ್ಷದೀಪ್ ಅವರೇ ಹಾಕಿದ ಕೊನೆಯ ಓವರ್‌ನಲ್ಲಿ ಪಾಕ್ ತಂಡಕ್ಕೆ ಗೆಲುವಿಗಾಗಿ ಏಳು ರನ್‌ಗಳ ಅಗತ್ಯವಿತ್ತು. ಮೊದಲ ಎಸೆತದಲ್ಲಿ ಖುಷದಿಲ್ ಒಂದು ರನ್ ಗಳಿಸಿದರು. ಎರಡನೇ ಎಸೆತವನ್ನು ಆಸಿಫ್ ಬೌಂಡರಿಗೆರೆ ದಾಟಿಸಿದರು. ಮೂರನೇ ಎಸೆತವನ್ನು ಡಾಟ್ ಮಾಡಿದ ಅರ್ಷದೀಪ್, ನಂತರ ಯಾರ್ಕರ್ ಎಸೆತದಲ್ಲಿ ಆಸಿಫ್ ಅವರನ್ನು ಎಲ್‌ಬಿ ಬಲೆಗೆ ಕೆಡವಿದರು. ಕೊನೆಯ ಎರಡು ಎಸೆತಗಳಲ್ಲಿ ಎರಡು ರನ್‌ಗಳಷ್ಟೇ ಬೇಕಾಗಿತ್ತು. ಅರ್ಷದೀಪ್ ಹಾಕಿದ ಫುಲ್‌ಟಾಸ್ ಎಸೆತವನ್ನು ಹೊಡೆದು ಎರಡು ರನ್ ಗಳಿಸಿದ ಇಫ್ತಿಕಾರ್ ಅಹಮದ್ ಸಂಭ್ರಮಿಸಿದರು.

ರೋಹಿತ್–ರಾಹುಲ್ ಅಬ್ಬರ: ಇದಕ್ಕೂ ಮುನ್ನ ಭಾರತದ ಆರಂಭಿಕ ಜೋಡಿ ರೋಹಿತ್ ಶರ್ಮಾ (28; 20ಎ) ಹಾಗೂ ಕೆ.ಎಲ್. ರಾಹುಲ್ (28; 16ಎ) ಅಮೋಘ ಆರಂಭ ನೀಡಿತು. ಇಬ್ಬರೂ ಸೇರಿ ಐದು ಓವರ್‌ಗಳಲ್ಲಿ 54 ರನ್ ಗಳಿಸಿದರು.

ಇವರಿಬ್ಬರೂ ಔಟಾದ ನಂತರ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ನಿರೀಕ್ಷಿತ ರೀತಿಯಲ್ಲಿ ಆಡಲಿಲ್ಲ. ಸೂರ್ಯಕುಮಾರ್ ಯಾದವ್ ಮತ್ತು ರಿಷಭ್ ಪಂತ್ ವಿಫಲರಾದರು. ವಿರಾಟ್ ಕೊಹ್ಲಿ ತಮ್ಮ ಅಮೋಘ ಆಟದಿಂದ ಇನಿಂಗ್ಸ್‌ಗೆ ಬಲ ತುಂಬಿದರು. ಪಾಕ್ ಪರ ಶಾದಾಬ್ ಖಾನ್ ಎರಡು ವಿಕೆಟ್ ಪಡೆದರು.

ಮುಂದಿನ ಪಂದ್ಯ: ಭಾರತ– ಶ್ರೀಲಂಕಾ (ಸೆ.6)

ಸ್ಕೋರ್ ಕಾರ್ಡ್

ಭಾರತ 7ಕ್ಕೆ 181 (20 ಓವರ್)
ರಾಹುಲ್ ಸಿ ನವಾಜ್ ಬಿ ಶಾದಾಬ್ 28 (20ಎ, 4X1, 6X2), ರೋಹಿತ್ ಸಿ ಖುಷ್‌ದಿಲ್ ಶಾ ಬಿ ರವೂಫ್ 28 (16ಎ, 4X3, 6X2), ವಿರಾಟ್ ರನೌಟ್ (ಆಸಿಫ್) 60 (44ಎ, 4X4, 6X1), ಸೂರ್ಯಕುಮಾರ್ ಸಿ ಆಸಿಫ್ ಬಿ ನವಾಜ್ 13 (10ಎ, 4X2), ರಿಷಭ್ ಸಿ ಆಸಿಫ್ ಬಿ ಶಾದಾಬ್ 14 (12ಎ, 4X2), ಹಾರ್ದಿಕ್ ಸಿ ನವಾಜ್ ಬಿ ಹಸನೈನ್ 0 (2ಎ), ದೀಪಕ್ ಸಿ ನವಾಜ್ ಬಿ ನಸೀಂ 16 (14ಎ, 4X2), ಭುವನೇಶ್ವರ್ ಔಟಾಗದೆ 0 (0ಎ), ರವಿ ಔಟಾಗದೆ 8 (2ಎ, 4X2)
ಇತರೆ: 14 (ಬೈ 4, ವೈಡ್ 10)
ವಿಕೆಟ್ ಪತನ: 1-54 (ರೋಹಿತ್ ಶರ್ಮಾ, 5.1), 2-62 (ಕೆ. ಎಲ್.ರಾಹುಲ್, 6.1), 3-91 (ಸೂರ್ಯಕುಮಾರ್ ಯಾದವ್, 9.4), 4-126 (ರಿಷಭ್ ಪಂತ್, 13.5), 5-131 (ಹಾರ್ದಿಕ್ ಪಾಂಡ್ಯ, 14.4), 6-168 (ದೀಪಕ್ ಹೂಡಾ, 18.4), 7–173 (ವಿರಾಟ್ ಕೊಹ್ಲಿ, 19.4)
ಬೌಲಿಂಗ್: ನಸೀಂ ಶಾ 4–0–45–1, ಮೊಹಮ್ಮದ್ ಹಸನೈನ್ 4–0–38–1, ಹ್ಯಾರಿಸ್ ರವೂಫ್ 4–0–38–1, ಮೊಹಮ್ಮದ್ ನವಾಜ್ 4–0–25–1, ಶಾದಾಬ್ ಖಾನ್ 4–0–31–2

ಪಾಕಿಸ್ತಾನ 5ಕ್ಕೆ 182 (19.5 ಓವರ್)
ರಿಜ್ವಾನ್ ಸಿ ಸೂರ್ಯಕುಮಾರ್ ಬಿ ಹಾರ್ದಿಕ್ 71 (51ಎ, 4X6, 6X2), ಆಜಂ ಸಿ ರೋಹಿತ್ ಬಿ ರವಿ 14 (10ಎ, 4X2), ಜಮಾನ್ ಸಿ ವಿರಾಟ್ ಬಿ ಚಾಹಲ್ 15 (18ಎ, 4X2), ನವಾಜ್ ಸಿ ಹೂಡಾ ಬಿ ಭುವನೇಶ್ವರ್ 42 (20ಎ, 4X6, 6X2), ಖುಷ್‌ದಿಲ್ ಔಟಾಗದೆ 14 (11ಎ, 4X1), ಆಸಿಫ್ ಎಲ್‌ಬಿಡಬ್ಲ್ಯು ಬಿ ಅರ್ಷದೀಪ್ 16 (8ಎ, 4X2, 6X1), ಇಫ್ತಿಕಾರ್ ಔಟಾಗದೆ 2 (1ಎ)
ಇತರೆ: 8 (ಲೆಗ್‌ಬೈ 2, ವೈಡ್ 6)
ವಿಕೆಟ್ ಪತನ: 1–22 (ಬಾಬರ್ ಆಜಂ, 3.4), 2–63 (ಫಕರ್ ಜಮಾನ್, 8.4), 3–136 (ಮೊಹಮ್ಮದ್ ನವಾಜ್, 15.3), 4–147 (ಮೊಹಮ್ಮದ್ ರಿಜ್ವಾನ್, 16.5), 5-180 (ಆಸಿಫ್ ಅಲಿ, 19.4)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-40-1, ಅರ್ಷದೀಪ್ ಸಿಂಗ್ 3.5-0-27-1, ರವಿ ಬಿಷ್ಣೋಯಿ 4-0-26-1, ಹಾರ್ದಿಕ್ ಪಾಂಡ್ಯ 4-0-44-1, ಯಜುವೇಂದ್ರ ಚಾಹಲ್ 4-0-43-1

ಫಲಿತಾಂಶ: ಪಾಕಿಸ್ತಾನಕ್ಕೆ 5 ವಿಕೆಟ್ ಗೆಲುವು

ತಿಲಕ್ ವರ್ಮಾ ಶತಕ ಸಂಭ್ರಮ –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ತಿಲಕ್ ಶತಕ: ಪಂದ್ಯ ಡ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ದಿನಗಳ ಆಟ. 1104 ರನ್‌ಗಳು, 314.5 ಓವರ್, 20 ವಿಕೆಟ್ ಪತನ ಹಾಗೂ ನಾಲ್ಕು ಶತಕಗಳು!

ಹೌದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಡ್ರಾದಲ್ಲಿ ಮುಕ್ತಾಯವಾದ ಭಾರತ ಎ ಹಾಗೂ ನ್ಯೂಜಿಲೆಂಡ್ ಎ ತಂಡಗಳ ನಡುವಣ ‘ಟೆಸ್ಟ್’ ಪಂದ್ಯದ ಮುಖ್ಯಾಂಶಗಳು ಇವು.

ಪಂದ್ಯದ ಮೊದಲ ದಿನದಾಟದ ಒಂದಿಷ್ಟು ಸಮಯವು ಮಳೆಗೆ ಆಹುತಿಯಾಗಿದ್ದು ಬಿಟ್ಟರೆ, ಪಿಚ್ ಬ್ಯಾಟರ್‌ಗಳಿಗೆ ಸ್ವರ್ಗವೇ ಆಗಿತ್ತು. ಮೊದಲು ಬ್ಯಾಟಿಂಗ್ ಮಾಡಿದ್ದ ಪ್ರವಾಸಿ ಬಳಗವು ಪ್ರಥಮ ಇನಿಂಗ್ಸ್‌ನಲ್ಲಿ ಜೋ ಕಾರ್ಟರ್ ಶತಕದ ಬಲದಿಂದ 400 ರನ್ ಗಳಿಸಿತ್ತು. ಅದಕ್ಕೆ ಭರ್ಜರಿ ತಿರುಗೇಟು ನೀಡಿದ ಆತಿಥೇಯರು ಕೊನೆಯ ದಿನದ ಮಧ್ಯಾಹ್ನದವರೆಗೂ ಬ್ಯಾಟಿಂಗ್ ಮಾಡಿದರು. 143 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 571 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. 171 ರನ್‌ಗಳ ಮುನ್ನಡೆ ಸಾಧಿಸಿತು.

ಕೊನೆಯ ದಿನದಾಟದಲ್ಲಿ ಹೈದರಾಬಾದ್ ಹುಡುಗ ತಿಲಕ್ ವರ್ಮಾ (121; 183ಎ, 4X9, 6X6) ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ತಮ್ಮ ಮೊದಲ ಶತಕ ಪೂರೈಸಿದರು. ಇದು ಈ ಪಂದ್ಯದಲ್ಲಿ ಭಾರತ ಪರ ದಾಖಲಾದ ಮೂರನೇ ಶತಕ. ಶನಿವಾರ ಅಭಿಮನ್ಯು ಈಶ್ವರನ್ ಹಾಗೂ ರಜತ್ ಪಾಟೀದಾರ್ ಕೂಡ ಶತಕ ಗಳಿಸಿದ್ದರು. ರಜತ್ ಮತ್ತು ತಿಲಕ್ ಐದನೇ ವಿಕೆಟ್ ಜೊತೆಯಾಟದಲ್ಲಿ 186 ರನ್ ಸೇರಿಸಿದರು.

ನ್ಯೂಜಿಲೆಂಡ್ ಎ ತಂಡವು ಎರಡನೇ ಇನಿಂಗ್ಸ್‌ನಲ್ಲಿ 61 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 133 ರನ್ ಗಳಿಸಿತು. ಚೈನಾಮನ್ ಬೌಲರ್ ಕುಲದೀಪ್ ಯಾದವ್ ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ ಎ: 400, ಭಾರತ: 143 ಓವರ್‌ಗಳಲ್ಲಿ 6ಕ್ಕೆ 571 (ರಜತ್ ಪಾಟೀದಾರ್ 176, ತಿಲಕ್ ವರ್ಮಾ 121, ಶ್ರೀಕರ್ ಭರತ್ ಔಟಾಗದೆ 23, ಕುಲದೀಪ್ ಯಾದವ್ ಔಟಾಗದೆ 8, ರಚಿನ್ ರವೀಂದ್ರ 112ಕ್ಕೆ2, ಜೇಕಬ್ ಡಫಿ 90ಕ್ಕೆ1) ಎರಡನೇ ಇನಿಂಗ್ಸ್: 61 ಓವರ್‌ಗಳಲ್ಲಿ 4ಕ್ಕೆ133 (ಚಾಡ್ ಬೋವೆಸ್ 24, ರಚಿನ್ ರವೀಂದ್ರ 40, ಮಾರ್ಕ್ ಚಾಪಮನ್ 23, ಕುಲದೀಪ್ ಯಾದವ್ 38ಕ್ಕೆ2) ಫಲಿತಾಂಶ: ಡ್ರಾ.

ಮುಂದಿನ ಪಂದ್ಯ: ಸೆ. 8ರಿಂದ 11. ಸ್ಥಳ: ಹುಬ್ಬಳ್ಳಿ

ಭಾರತ ತಂಡದ ಆಟಗಾರ್ತಿಯರು ಭಾನುವಾರ ಕಂಠೀರವ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಫಿಬಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಇಂದಿನಿಂದ

ಭಾರತ ತಂಡಕ್ಕೆ ಆಸ್ಟ್ರೇಲಿಯಾ ಸವಾಲು

• ಮಹಮ್ಮದ್ ನೂಮಾನ್

ಬೆಂಗಳೂರು: ಯುವ ಆಟಗಾರ್ತಿಯರಿಗೆ ಪ್ರತಿಭೆ ತೋರಿಸಲು ವೇದಿಕೆ ಕಲ್ಪಿಸಿರುವ 18 ವರ್ಷದೊಳಗಿನ ಮಹಿಳಾ ಫಿಬಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಸೋಮವಾರ ಇಲ್ಲಿ ಆರಂಭವಾಗಲಿದ್ದು, ಭಾರತ ತಂಡ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.

ಸತ್ಯಾ ಕೃಷ್ಣಮೂರ್ತಿ ನೇತೃತ್ವದ ಭಾರತ, ತನ್ನ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಸವಾಲನ್ನು ಎದುರಿಸಲಿದೆ. ಕಂಠೀರವ ಕ್ರೀಡಾಂಗಣದಲ್ಲಿ ಸಂಜೆ 6ಕ್ಕೆ ಈ ಪಂದ್ಯ ನಡೆಯಲಿದೆ. ಸೆ.11ರ ವರೆಗೆ ನಡೆಯುವ ಟೂರ್ನಿಯಲ್ಲಿ ಆತಿಥೇಯ ಭಾರತ ಒಳಗೊಂಡಂತೆ 16 ತಂಡಗಳು ಪೈಪೋಟಿ ನಡೆಸಲಿವೆ.

ಈ ಟೂರ್ನಿಯಲ್ಲಿ ಮೊದಲ ನಾಲ್ಕು ಸ್ಥಾನಗಳನ್ನು ಪಡೆಯುವ ತಂಡಗಳು 2023ರ ಜುಲೈನಲ್ಲಿ ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಡೆಯಲಿರುವ 19 ವರ್ಷದೊಳಗಿನವರ ಫಿಫಾ ಮಹಿಳಾ ವಿಶ್ವಕಪ್‌ಗೆ ಅರ್ಹತೆ ಗಳಿಸಲಿವೆ.

‘ಎ’ ಡಿವಿಷನ್‌ನಲ್ಲಿ ಭಾರತ: ಈ ಬಾರಿ ಭಾರತ ತಂಡ ಟೂರ್ನಿಯ ‘ಎ’ ಡಿವಿಷನ್‌ನಲ್ಲಿ ಆಡಲಿದೆ. 2018ರ ಟೂರ್ನಿಯಲ್ಲಿ ‘ಎ’ ಡಿವಿಷನ್‌ಗೆ ಬಡ್ತಿ ಪಡೆದುಕೊಂಡಿತ್ತು. ಆತಿಥೇಯ ತಂಡವು ‘ಎ’ ಗುಂಪಿನಲ್ಲಿ ಆಸ್ಟ್ರೇಲಿಯಾ, ಕೊರಿಯಾ, ನ್ಯೂಜಿಲೆಂಡ್ ಜತೆ ಸ್ಥಾನ ಪಡೆದುಕೊಂಡಿದೆ. ‘ಬಿ’ ಗುಂಪಿನಲ್ಲಿ ಚೀನಾ, ಜಪಾನ್, ಚೀನಾ ತೈಪೆ, ಇಂಡೊನೇಷ್ಯಾ ತಂಡಗಳು ಇವೆ. ‘ಎ’ ಡಿವಿಷನ್ ಪಂದ್ಯಗಳು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿವೆ.

‘ಬಿ’ ಡಿವಿಷನ್‌ನ ಪಂದ್ಯಗಳು ಕೋರಮಂಗಲ ಕ್ರೀಡಾಂಗಣದಲ್ಲಿ ಆಯೋಜನೆಯಾಗಿವೆ. ಇಲ್ಲಿ ಥಾಯ್ಲೆಂಡ್, ಸಮೋವ, ಮಾಲ್ಡೀವ್ಸ್, ಫಿಲಿಪ್ಪೀನ್ಸ್ (ಎ ಗುಂಪು), ಹಾಂಗ್‌ಕಾಂಗ್, ಮಲೇಷ್ಯಾ, ಜೋರ್ಡಾನ್, ಮಂಗೋಲಿಯ (ಬಿ ಗುಂಪು) ತಂಡಗಳು ಆಡಲಿವೆ.

ಇಂದಿನ ಪಂದ್ಯಗಳು: ಕಂಠೀರವ ಕ್ರೀಡಾಂಗಣ: ಜಪಾನ್– ಚೀನಾ ತೈಪೆ (ಬೆಳಿಗ್ಗೆ 11.15), ಚೀನಾ– ಇಂಡೊನೇಷ್ಯಾ (ಮಧ್ಯಾಹ್ನ 1.30), ಕೊರಿಯಾ– ನ್ಯೂಜಿಲೆಂಡ್ (ಮಧ್ಯಾಹ್ನ 3.45), ಆಸ್ಟ್ರೇಲಿಯಾ– ಭಾರತ (ಸಂಜೆ 6) ಕೋರಮಂಗಲ ಕ್ರೀಡಾಂಗಣ: ಸಮೋವ– ಮಾಲ್ಡೀವ್ಸ್ (ಬೆಳಿಗ್ಗೆ 11.15), ಹಾಂಗ್‌ಕಾಂಗ್– ಮಂಗೋಲಿಯ (ಮಧ್ಯಾಹ್ನ 1.30), ಥಾಯ್ಲೆಂಡ್– ಫಿಲಿಪ್ಪೀನ್ಸ್ (ಸಂಜೆ 3.45), ಮಲೇಷ್ಯಾ– ಜೋರ್ಡಾನ್ (ಸಂಜೆ 6)

ಟಿಟಿ: ಅಥರ್ವ, ಆಯುಷಿಗೆ ಪ್ರಶಸ್ತಿ

ಅಥರ್ವ ಹಾಗೂ ಆಯುಷಿ

ಬೆಂಗಳೂರು: ಅಥರ್ವ ನವರಂಗೆ ಮತ್ತು ಆಯುಷಿ ಬಿ. ಗೋಡ್ಸೆ ಅವರು ಎಂ.ಎಸ್.ರಾಮಯ್ಯ ಸ್ಮಾರಕ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಸ್ಕೈಸ್ ಅಕಾಡೆಮಿಯ ಅಥರ್ವ 8–11, 11-8, 11-8, 11-8, 13-11 ರಲ್ಲಿ ಶಶಾಂಕ್ ಕೇಶವ ರಾವ್ ಅವರನ್ನು ಮಣಿಸಿದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಬಿಟಿಟಿಎಯ ಆಯುಷಿ 11-8, 7-11, 11-6, 14-12, 11-7 ರಲ್ಲಿ ಹಿಯಾ ಸಿಂಗ್ ವಿರುದ್ಧ ಜಯಿಸಿದರು.

ನಿಮಗೆ ಎಷ್ಟು ಮೊತ್ತದ ಇನ್ಶೂರೆನ್ಸ್ ಅಗತ್ಯ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಜೀವ ಅತ್ಯಮೂಲ್ಯವಾದದ್ದು. ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಆದರೆ ಇನ್ಶೂರೆನ್ಸ್ ತೆಗೆದುಕೊಳ್ಳುವ ಮುನ್ನ ನಾವು ನಮ್ಮ ಜೀವದ ಬೆಲೆ ಎಷ್ಟು ಎನ್ನುವ ಲೆಕ್ಕಾಚಾರವನ್ನು ಅನಿವಾರ್ಯವಾಗಿ ಮಾಡಬೇಕಾಗುತ್ತದೆ. ಹೀಗೆ ಮಾಡಿದಾಗ ಮಾತ್ರ ನಮಗೆ ಎಷ್ಟು ಮೊತ್ತದ ಇನ್ಶೂರೆನ್ಸ್ ಅಗತ್ಯ ಎಂದು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ವ್ಯಕ್ತಿಯೊಬ್ಬನಿಗೆ ಎಷ್ಟು ಮೊತ್ತದ ಇನ್ಶೂರೆನ್ಸ್ ಬೇಕು ಎನ್ನುವುದನ್ನು ತಿಳಿಯಲು ಕೆಲವು ಮಾನದಂಡಗಳಿವೆ, ಅವುಗಳ ಬಗ್ಗೆ ತಿಳಿಯೋಣ ಬನ್ನಿ.

ಏಕೆ ಇನ್ಶೂರೆನ್ಸ್ ಬೇಕು: ಮನೆಗೆ ಆಧಾರವಾಗಿ ನೀವು ದುಡಿಯುತ್ತಿರುತ್ತೀರಿ. ಆಕಸ್ಮಿಕವಾಗಿ ನಿಮ್ಮ ಜೀವಕ್ಕೆ ತೊಂದರೆಯಾದರೆ ನಿಮ್ಮ ಕುಟುಂಬದ ಗತಿಯೇನು? ಮಡದಿ ಮಕ್ಕಳ ಹಣಕಾಸಿನ ಅಗತ್ಯಗಳನ್ನು ನೋಡಿಕೊಳ್ಳುವವರು ಯಾರು? ನೀವು ಮಾಡಿರುವ ಸಾಲಗಳನ್ನು ತೀರಿಸುವುದು ಹೇಗೆ? ಇಂತಹ ಪ್ರಶ್ನೆಗೆ ಉತ್ತರವೇ ಇನ್ಶೂರೆನ್ಸ್. ಇನ್ಶೂರೆನ್ಸ್ ನಿಮ್ಮ ಅನುಪಸ್ಥಿತಿಯಲ್ಲಿ ನಿಮ್ಮ ಕುಟುಂಬದ ಹಣಕಾಸಿನ ಅಗತ್ಯಗಳನ್ನು ಪೂರೈಸಲು ನೆರವಾಗುತ್ತದೆ.

ಎಷ್ಟು ಮೊತ್ತದ ಇನ್ಶೂರೆನ್ಸ್ ಬೇಕು: ವ್ಯಕ್ತಿಯೊಬ್ಬನಿಗೆ ಎಷ್ಟು ಮೊತ್ತದ ಇನ್ಶೂರೆನ್ಸ್ ಅಗತ್ಯ ಎಂದು ಹೇಳಲು ಬೇರೆ ಬೇರೆ ಮಾನದಂಡಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ನಿಮ್ಮ ವಾರ್ಷಿಕ ಆದಾಯದ 10 ರಿಂದ 15 ಪಟ್ಟು ಇನ್ಶೂರೆನ್ಸ್ ಇದ್ದರೆ ಒಳ್ಳೆಯದು. ಆದರೆ ಹೊಣೆಗಾರಿಕೆಗಳು ಹೆಚ್ಚಿಗೆ ಇದ್ದರೆ ಅದಕ್ಕೆ ತಕ್ಕಂತೆ ಇನ್ಶೂರೆನ್ಸ್ ಮೊತ್ತವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ನಿಮ್ಮ ದುಡಿಮೆಯ ಮೇಲೆ ಎಷ್ಟು ಮಂದಿ ಅವಲಂಬಿತರಿದ್ದಾರೆ, ಎಷ್ಟು ಮೊತ್ತದ ಆಸ್ತಿ ಹೊಂದಿದ್ದೀರಿ, ಎಷ್ಟು ಸಾಲಗಳನ್ನು ಪಡೆದಿದ್ದೀರಿ ಎನ್ನುವುದು ಸೇರಿದಂತೆ ಹಲವು ಅಂಶಗಳನ್ನು ನಿಮಗೆ ಎಷ್ಟು ಮೊತ್ತದ ಇನ್ಶೂರೆನ್ಸ್ ಬೇಕು ಎನ್ನುವ ಲೆಕ್ಕಾಚಾರದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಸುರಕ್ಷತೆಗಾಗಿ ಯಾವ ಲೈಫ್ ಇನ್ಶೂರೆನ್ಸ್ ತೆಗೆದುಕೊಳ್ಳಬೇಕು: ಮನೆಯ ಹಣಕಾಸಿನ ಹೊಣೆಗಾರಿಕೆ ಹೊತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ಟರ್ಮ್ ಲೈಫ್ ಇನ್ಶೂರೆನ್ಸ್ ಪಡೆದುಕೊಳ್ಳುವುದು ಸೂಕ್ತ. ಪಾಲಿಸಿದಾರರು ಆಕಸ್ಮಿಕ ಸಾವಿನ ವಿರುದ್ಧ ಪಡೆಯುವ ವಿಮೆ ರಕ್ಷಣೆ ಸೌಲಭ್ಯವೇ ‘ಟರ್ಮ್ ಇನ್ಶುರನ್ಸ್’. ಈ ವಿಮೆ ನಿರ್ದಿಷ್ಟ ವ್ಯಕ್ತಿಯ ಕುಟುಂಬಕ್ಕೆ ಆರ್ಥಿಕ ಭದ್ರತೆ ಒದಗಿಸುತ್ತದೆ. ಕನ್ನಡದಲ್ಲಿ ಇದನ್ನು ಅವಧಿ ವಿಮೆ ಎಂದು ಕರೆಯಲಾಗುತ್ತದೆ. 30 ವರ್ಷದ ವ್ಯಕ್ತಿ ವಾರ್ಷಿಕವಾಗಿ ಸುಮಾರು ₹12 ರಿಂದ ₹14 ಸಾವಿರ ಪ್ರೀಮಿಯಂ ಪಾವತಿಸಿದರೆ 1 ಕೋಟಿ ರೂಪಾಯಿ ಮೊತ್ತದ ಟರ್ಮ್ ಲೈಫ್ ಇನ್ಶೂರೆನ್ಸ್ ಸಿಗುತ್ತದೆ. ಇನ್ಶೂರೆನ್ಸ್ ಪಡೆದಿರುವ ವ್ಯಕ್ತಿ ಅಕಸ್ಮಿಕವಾಗಿ ಸಾವನ್ನಪ್ಪಿದರೆ 1 ಕೋಟಿ ರೂಪಾಯಿ ಪರಿಹಾರ ಅವರ ಕುಟುಂಬಕ್ಕೆ ಸಿಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಎಷ್ಟು ಮೊತ್ತದ ಇನ್ಶೂರೆನ್ಸ್ ಅಗತ್ಯ? (ಉದಾಹರಣೆ)

ಪರಿಗಣಿಸಬೇಕಿರುವ ಅಂಶಗಳು	ವಿವರಗಳು
ಬಾಕಿ ಇರುವ ಸಾಲದ ಮೊತ್ತ (ಬಾಕಿ ಇರುವ ಸಾಲಗಳನ್ನು ಗಣನೆಗೆ ತೆಗೆದುಕೊಳ್ಳಿ)	ಗೃಹ ಸಾಲ ₹50 ಲಕ್ಷ ವಾಹನ ಸಾಲ ₹ 5 ಲಕ್ಷ ಕ್ರೆಡಿಟ್ ಕಾರ್ಡ್ ಸರಾಸರಿ ಬಾಕಿ ₹ 50 ಸಾವಿರ ಒಟ್ಟು ₹ 55.5 ಲಕ್ಷ
ಆದಾಯ (ನಿಮ್ಮ ಕುಟುಂಬ ನಿಮ್ಮ ಆದಾಯದ ಮೇಲೆ ಎಷ್ಟು ವರ್ಷ ಅವಲಂಬಿತ ಎನ್ನುವುದನ್ನು ಪರಿಗಣಿಸಿ, ವಾರ್ಷಿಕ ಆದಾಯವನ್ನು ವರ್ಷಗಳೊಂದಿಗೆ ಗುಣಿಸಿ)	ವಾರ್ಷಿಕ ಆದಾಯ ₹ 15 ಲಕ್ಷ ಆದಾಯ ಅವಲಂಬಿತ ವರ್ಷಗಳು 25 ಒಟ್ಟು ₹ 3.75 ಕೋಟಿ
ಮಕ್ಕಳ ಶಿಕ್ಷಣಕ್ಕಾಗಿ ವೆಚ್ಚ (ಮಕ್ಕಳ ಶಿಕ್ಷಣಕ್ಕಾಗಿ ಅಂದಾಜು ಎಷ್ಟು ಹಣ ಅಗತ್ಯ ಎನ್ನುವುದನ್ನು ಪರಿಗಣಿಸಿ)	ಇಬ್ಬರು ಮಕ್ಕಳಿಗೆ ಒಟ್ಟು ಶಿಕ್ಷಣ ವೆಚ್ಚ ₹ 60 ಲಕ್ಷ,
ಬೇಕಿರುವ ಒಟ್ಟು ಇನ್ಶೂರೆನ್ಸ್ ಮೊತ್ತ	₹ 4.9 ಕೋಟಿ

ಅಲ್ಪ ಕುಸಿತ ಕಂಡ ಸೂಚ್ಯಂಕಗಳು

ಸೆಪ್ಟೆಂಬರ್ 2 ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಕುಸಿತ ಕಂಡಿವೆ. ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಶೇ 0.05 ರಷ್ಟು ಇಳಿಕೆಯಾಗಿದ್ದು 58,803 ಅಂಶಗಳಲ್ಲಿ ವಹಿವಾಟು ಮುಗಿಸಿದೆ. ನಿಫ್ಟಿ 50 ಸೂಚ್ಯಂಕ 0.11 ರಷ್ಟು ಕುಸಿದಿದ್ದು 17,539 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದೆ.

ಮೂಡಿಸ್, ಭಾರತದ 2022 ಸಾಲಿನ ಜಿಡಿಪಿ ಅಂದಾಜನ್ನು ಶೇ 7.7 ಕ್ಕೆ ಇಳಿಕೆ ಮಾಡಿರುವುದು, ಅಮೆರಿಕದ ಉದ್ಯೋಗ ದತ್ತಾಂಶ ಹೇಗಿರಲಿದೆ ಎಂಬ ಆತಂಕ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಮಾರುಕಟ್ಟೆ ಸೂಚ್ಯಂಕಗಳು ಗಮನಾರ್ಹ ಪ್ರಗತಿ ಕಾಣದಿರಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಟೆಲಿಕಾಂ ವಲಯ ಶೇ 3.84 ರಷ್ಟು ಗಳಿಸಿಕೊಂಡಿದೆ. ಕ್ಯಾಪಿಟಲ್ ಗೂಡ್ಸ್, ವಾಹನ, ಎಫ್‌ಎಂಸಿಜಿ ಮತ್ತು ಕನ್ಸ್ಯೂಮರ್ ಡ್ಯೂರೆಬಲ್ ಸೂಚ್ಯಂಕಗಳು ಶೇ 1 ರಿಂದ ಶೇ 3 ರಷ್ಟು ಗಳಿಸಿಕೊಂಡಿವೆ. ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3 ಮತ್ತು ಲೋಹ ಸೂಚ್ಯಂಕ ಶೇ 2 ರಷ್ಟು ಕುಸಿತ ದಾಖಲಿಸಿವೆ. ಮತ್ತೊಂದೆಡೆ ಬಿಎಸ್ ಇ ಮಿಡ್ ಕ್ಯಾಪ್ ಮತ್ತು ಬಿಎಸ್‌ಇ 500 ಸೂಚ್ಯಂಕಗಳು ಕ್ರಮವಾಗಿ ಶೇ 1.37, ಶೇ 1.35 ಮತ್ತು ಶೇ 0.38 ರಷ್ಟು ಜಿಗಿದಿವೆ

ಗಳಿಕೆ – ಇಳಿಕೆ: ಬಜಾಜ್ ಫಿನ್ ಸರ್ವ್ ಶೇ 6.41 ರಷ್ಟು ಜಿಗಿದಿದೆ. ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್ ಶೇ 3.96 ರಷ್ಟು, ಐಟಿಸಿ ಶೇ 3.28 ರಷ್ಟು, ಮಹಿಂದ್ರಾ ಆ್ಯಂಡ್ ಮಹಿಂದ್ರಾ ಶೇ 3.24, ಮತ್ತು ಏಷ್ಯನ್ ಪೇಂಟ್ಸ್ ಶೇ 3.23 ರಷ್ಟು ಗಳಿಕೆ ಕಂಡಿವೆ. ಹಿಂಡಾಲ್ಕೊ ಇಂಡಸ್ಟ್ರೀಸ್, ಶ್ರೀ ಸಿಮೆಂಟ್, ಇನ್ಫೊಸಿಸ್, ರಿಲಯನ್ಸ್ ಇಂಡಸ್ಟ್ರೀಸ್, ಒಎನ್‌ಜಿಸಿ, ಟಿಸಿಎಸ್ ಷೇರುಗಳು ಶೇ 2 ರಿಂದ ಶೇ 6 ರಷ್ಟು ಕುಸಿತ ದಾಖಲಿಸಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಈಗಲೂ ಭಾರತದ ಮಾರುಕಟ್ಟೆ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದು ಕಳೆದ ವಾರ ₹1,305.54 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹230.25 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಆಗಸ್ಟ್ ತಿಂಗಳಲ್ಲಿ ಒಟ್ಟಾರೆಯಾಗಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹22,025.62 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದು, ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 7,068.63 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮುನ್ನೋಟ: ಸೆಪ್ಟೆಂಬರ್ 5 ರಂದು ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕದ ದತ್ತಾಂಶ ಲಭಿಸಲಿದೆ. ಹಣದುಬ್ಬರದ ಒತ್ತಡದ ನಡುವೆ ಎಷ್ಟರ ಮಟ್ಟಿಗೆ ಉದ್ಯಮ ವಹಿವಾಟು ಪ್ರಗತಿ ಸಾಧಿಸಿದೆ ಎನ್ನುವುದಕ್ಕೆ ಇದು ಮಾನದಂಡವಾಗಲಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದ ಮಾರುಕಟ್ಟೆಯಿಂದ ಹಣ ಹೊರತೆಗೆಯುವರೇ ಎನ್ನುವುದನ್ನು ಹೂಡಿಕೆದಾರರು ಸೂಕ್ಷ್ಮವಾಗಿ ಗಮನಿಸಲಿದ್ದಾರೆ. ಉಳಿದಂತೆ ತಮಿಳುನಾಡು ಮರ್ಸಂಟೈಲ್ ಬ್ಯಾಂಕ್ ಐಪಿಒ ಮೂಲಕ ₹832 ಕೋಟಿ ಸಂಗ್ರಹಕ್ಕೆ ಮುಂದಾಗಿದೆ. ಐಪಿಒ ಷೇರಿನ ಬೆಲೆಯನ್ನು ₹ 500 ರಿಂದ ₹ 525 ರ ನಡುವೆ ನಿಗದಿಪಡಿಸಲಾಗಿದೆ. ಸೆಪ್ಟೆಂಬರ್ 5 ರಿಂದ 7 ರ ವರೆಗೆ ಈ ಐಪಿಒ ಬಿಡ್ಡಿಂಗ್ ಗೆ ಅವಕಾಶವಿದೆ.

ಆಗಸ್ಟ್‌ನಲ್ಲಿ ₹51,204 ಕೋಟಿ ಮೌಲ್ಯದ ಷೇರು ಖರೀದಿ

ಎಫ್‌ಪಿಐ: 20 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಆಗಸ್ಟ್‌ನಲ್ಲಿ ಭಾರತದ ಷೇರುಪೇಟೆಗಳಲ್ಲಿ ₹ 51,204 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. 2020ರ ಡಿಸೆಂಬರ್ ತಿಂಗಳಿನ ಬಳಿಕ ಆಗಿರುವ ಗರಿಷ್ಠ ಮೊತ್ತದ ಹೂಡಿಕೆ ಇದಾಗಿದೆ. 2020ರ ಡಿಸೆಂಬರ್‌ನಲ್ಲಿ ₹62,016 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದರು.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ವಿದೇಶಿ ಹೂಡಿಕೆದಾರರು ಜುಲೈನಲ್ಲಿ ₹ 5 ಸಾವಿರ ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದರು.

ಸತತವಾಗಿ ಒಂಬತ್ತು ತಿಂಗಳುಗಳವರೆಗೆ ಬಂಡವಾಳ ಹಿಂತೆಗೆತಕ್ಕೆ ಗಮನ ಹರಿಸಿದ್ದ ಹೂಡಿಕೆದಾರರು ಜುಲೈನಲ್ಲಿ ಹೂಡಿಕೆ ಮಾಡಲು ಮುಂದಾದರು. 2021ರ ಅಕ್ಟೋಬರ್‌ನಿಂದ 2022ರ ಜೂನ್ ಅವಧಿಯಲ್ಲಿ ₹ 2.46 ಲಕ್ಷ ಕೋಟಿ ಮೊತ್ತವನ್ನು ಭಾರತದ ಷೇರುಪೇಟೆಗಳಿಂದ ಹಿಂದಕ್ಕೆ ಪಡೆದಿದ್ದಾರೆ.

‘ಸೆಪ್ಟೆಂಬರ್‌ನಲ್ಲಿಯೂ ಭಾರತದ ಷೇರುಪೇಟೆಗಳು ವಿದೇಶಿ ಬಂಡವಾಳ ಆಕರ್ಷಿಸಲಿವೆ. ಆದರೆ, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಳವನ್ನು ಮುಂದುವರಿಸುವುದಾಗಿ ಹೇಳಿರುವುದರಿಂದ ಆಗಸ್ಟ್‌ಗೆ ಹೋಲಿಸಿದರೆ ಹೂಡಿಕೆಯು ತುಸು ಕಡಿಮೆ ಆಗಬಹುದು’ ಎಂದು ಸ್ಯಾಂಕ್ಟಂ ವೆಲ್ತ್‌ನ ಉತ್ಪನ್ನಗಳ ಸಹ ಮುಖ್ಯಸ್ಥ ಮನೀಷ್ ಜೆಲೋಕಾ ಹೇಳಿದ್ದಾರೆ.

‘ವಿದೇಶಿ ಬಂಡವಾಳ ಹೂಡಿಕೆದಾರರು ಎಫ್‌ಎಂಸಿಜಿ, ಬಂಡವಾಳ ಸರಕುಗಳು, ಹಣಕಾಸು ಮತ್ತು ದೂರಸಂಪರ್ಕ ಕಂಪನಿಗಳ ಷೇರುಗಳನ್ನು ಹೆಚ್ಚಾಗಿ ಖರೀದಿಸುತ್ತಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

ಒಳಹರಿವಿಗೆ ಕಾರಣ
- ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು
- ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಗ್ಗಿದ ಕಚ್ಚಾ ತೈಲ ದರ

‘ಹಣದುಬ್ಬರ, ಡಾಲರ್ ಮೌಲ್ಯ ಮತ್ತು ಬಡ್ಡಿದರವು ಎಫ್‌ಪಿಐ ಒಳಹರಿವನ್ನು ನಿರ್ಧರಿಸಲಿವೆ’ ಎಂದು ಅರಿಹಂತ್ ಕ್ಯಾಪಿಟಲ್ ಮಾರ್ಕೆಟ್ಸ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಅರ್ಪಿತ್ ಜೈನ್ ಹೇಳಿದ್ದಾರೆ

ಸಾಲಪತ್ರ ಮಾರುಕಟ್ಟೆಯಲ್ಲಿ ಆಗಸ್ಟ್‌ನಲ್ಲಿ ₹3,844 ಕೋಟಿ ಮೊತ್ತ ಹೂಡಿಕೆ ಮಾಡಿದ್ದಾರೆ. ಭಾರತದ ಜೊತೆಗೆ, ಇಂಡೊನೇಷ್ಯಾ, ದಕ್ಷಿಣ ಕೊರಿಯಾ ಮತ್ತು ಥಾಯ್ಲೆಂಡ್ ಷೇರುಪೇಟೆಗಳು ಸಹ ಆಗಸ್ಟ್‌ನಲ್ಲಿ ವಿದೇಶಿ ಹೂಡಿಕೆಯನ್ನು ಆಕರ್ಷಿಸಿವೆ. ಫಿಲಿಪ್ಪೀನ್ಸ್ ಮತ್ತು ತೈವಾನ್ ದೇಶಗಳಿಂದ ವಿದೇಶಿ ಬಂಡವಾಳ ಹೊರಹೋಗಿದೆ.

ಗೌರವ ಉಳಿಸಿಕೊಳ್ಳಲು ಕಾನೂನು ಸಮರ ನಡೆಸಿದ್ದ ಸೈರಸ್ ಮಿಸ್ತ್ರಿ

ಅಪಘಾತದಿಂದ ಹಾಳಾಗಿರುವ ಮಿಸ್ತ್ರಿ ಪ್ರಯಾಣಿಸುತ್ತಿದ್ದ ಕಾರು –ಪಿಟಿಐ ಚಿತ್ರ

ಮುಂಬೈ (ಪಿಟಿಐ): ಟಾಟಾ ಸನ್ಸ್‌ನ ಅಧ್ಯಕ್ಷರಾಗಿ ನೇಮಕ ಆಗುವವರೆಗೂ ಸೈರಸ್ ಪಲ್ಲೋಂಜಿ ಮಿಸ್ತ್ರಿ ಅವರು ಬಹಳಷ್ಟು ಜನರಿಗೆ ಗೊತ್ತಿರಲಿಲ್ಲ. ತಮ್ಮ ಕುಟುಂಬದ ಶಾಪೂರ್ಜಿ ಪಲ್ಲೋಂಜಿ ಸಮೂಹದ ಉದ್ಯಮದಲ್ಲಿ ಅವರು ತೊಡಗಿಕೊಂಡಿದ್ದರು.

2011ರ ನವೆಂಬರ್‌ನಲ್ಲಿ ರತನ್ ಟಾಟಾ ಅವರ ಉತ್ತರಾಧಿಕಾರಿಯಾಗಿ ಮಿಸ್ತ್ರಿ ಅವರನ್ನು ನೇಮಿಸಲಾಯಿತು ಅಲ್ಲಿಂದ 2016ರ ಅಕ್ಟೋಬರ್‌ವರೆಗೆ ಅವರು ಕಂಪನಿಯ ಬೆಳವಣಿಗೆಗೆ ಹಲವು ನಿರ್ಧಾರಗಳನ್ನು ತೆಗೆದುಕೊಂಡಿದ್ದರು.

2016ರ ಅಕ್ಟೋಬರ್‌ನಲ್ಲಿ ಮಿಸ್ತ್ರಿ ಅವರನ್ನು ಟಾಟಾ ಸನ್ಸ್ ಪ್ರೈವೇಟ್ ಲಿಮಿಟೆಡ್‌ನ ಆಡಳಿತ ಮಂಡಳಿಯ ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಲಾಯಿತು. ಅದನ್ನು ಪ್ರಶ್ನಿಸಿ ಮಿಸ್ತ್ರಿ ಅವರು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ (ಎನ್‌ಸಿಎಲ್‌ಎಟಿ) ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ನ್ಯಾಯಮಂಡಳಿಯು ಅವರನ್ನು ಮರು ನೇಮಕ ಮಾಡುವಂತೆ ಆದೇಶ ನೀಡಿತ್ತು.

ಆದರೆ, ಎನ್‌ಸಿಎಲ್‌ಎಟಿ ಆದೇಶವನ್ನು ಪ್ರಶ್ನಿಸಿ ಟಾಟಾ ಸಮೂಹವು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತು. ಇದರ ವಿಚಾರಣೆ ನಡೆಸಿದ ನ್ಯಾಯಾಲಯವು 2021ರ ಮಾರ್ಚ್‌ನಲ್ಲಿ ಎನ್‌ಸಿಎಲ್‌ಎಟಿ ಆದೇಶವನ್ನು ರದ್ದುಪಡಿಸಿತು.

ಚುರುಕು ಬುದ್ಧಿಯ ಅಧ್ಯಯನಶೀಲ ಕಾರ್ಯನಿರ್ವಾಹಕ ಎನಿಸಿಕೊಂಡಿದ್ದ ಮಿಸ್ತ್ರಿ, ಒಂಟಿಯಾಗಿ ಇರಲು ಬಯಸುತ್ತಿದ್ದರು. ಮಾತಿಗಿಂತಲೂ ಕೆಲಸ ಮಾಡುವುದರಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದರು. ಅಧಿಕಾರದಲ್ಲಿ ಇದ್ದ ನಾಲ್ಕು ವರ್ಷಗಳಲ್ಲಿ ಅವರು ಮಾಧ್ಯಮಗಳಿಗೆ ಒಂದೇ ಒಂದು ಸಂದರ್ಶನವನ್ನೂ ನೀಡಿರಲಿಲ್ಲ. ಟಾಟಾ ಸನ್ಸ್‌ನಿಂದ ವಜಾಗೊಂಡ ಬಳಿಕ ಅವರು ಮಾಧ್ಯಮಗಳ ಜತೆ ಹೆಚ್ಚು ಮಾತನಾಡಲು ಆರಂಭಿಸಿದರು.

ಟಾಟಾ ಸಮೂಹದೊಂದಿಗೆ ಅವರು ಕಾನೂನು ಸಮರ ನಡೆಸುತ್ತಿದ್ದಾಗ ಕಾರ್ಪೊರೇಟ್ ಜಗತ್ತಿನ ಪ್ರಮುಖರು ಅವರ ಪರವಾಗಿ ನಿಲ್ಲಲಿಲ್ಲ.

ಶಾಪೂರ್ಜಿ ಪಲ್ಲೋಂಜಿ ಸಮೂಹವು ಟಾಟಾ ಸನ್ಸ್‌ನಲ್ಲಿ ಶೇ18. 4ರಷ್ಟು ಪಾಲು ಬಂಡವಾಳ ಹೊಂದಿದೆ.

ಸರ್ಕಾರ ಉದ್ದಿಮೆಗಳನ್ನು ನಡೆಸಬಾರದು: ಭಾರ್ಗವ್

ನವದೆಹಲಿ (ಪಿಟಿಐ): ಸರ್ಕಾರವು ಉದ್ದಿಮೆಗಳನ್ನು ನಡೆಸಬಾರದು. ಏಕೆಂದರೆ ಸರ್ಕಾರಿ ಸ್ವಾಮ್ಯದ ಕಂಪನಿಗಳು ಅಸಮರ್ಥವಾಗಿದ್ದು, ಅವುಗಳ ಬೆಳವಣಿಗೆಗೆ ಬೇಕಾದಷ್ಟು ವರಮಾನ ಸೃಷ್ಟಿಸುತ್ತಿಲ್ಲ ಎಂದು ಮಾರುತಿ ಸುಜುಕಿ ಇಂಡಿಯಾದ ಅಧ್ಯಕ್ಷ ಆರ್.ಸಿ. ಭಾರ್ಗವ್ ಹೇಳಿದ್ದಾರೆ.

ಸರ್ಕಾರಿ ವಲಯದ ಕಂಪನಿಗಳ ಬೆಳವಣಿಗೆಗೆ ಎಲ್ಲಾ ಕಾಲಕ್ಕೂ ಸರ್ಕಾರದ ಬೆಂಬಲ ಮತ್ತು ಹಣಕಾಸಿನ ನೆರವು ಬೇಕು ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಸರ್ಕಾರ ನಡೆಸುತ್ತಿರುವ ಕಂಪನಿಗಳು ಸಮರ್ಥವಾಗಿಲ್ಲ. ಉತ್ಪಾದಕತೆಯನ್ನು ಹೊಂದಿಲ್ಲ. ಲಾಭ ಗಳಿಸುತ್ತಿಲ್ಲ. ಸಂಪನ್ಮೂಲವನ್ನೂ ಸೃಷ್ಟಿಸುತ್ತಿಲ್ಲ. ಬೆಳವಣಿಗೆಯನ್ನೂ ಸಾಧಿಸುತ್ತಿಲ್ಲ ಎಂದು ಅವರು ವಿವರಿಸಿದ್ದಾರೆ.

ಸಾರ್ವಜನಿಕ ವಲಯದ ವೈಫಲ್ಯವು ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ರಷ್ಯಾ, ಇಂಗ್ಲೆಂಡ್, ಫ್ರಾನ್ಸ್ ಮತ್ತು ಜಪಾನ್‌ನಲ್ಲೂ ಆಗಿವೆ. ಈ ದೇಶಗಳಲ್ಲಿ ಪ್ರತಿಯೊಬ್ಬರೂ ಸಾರ್ವಜನಿಕ ವಲಯದಿಂದ ಹೊರಬರುತ್ತಿದ್ದಾರೆ ಎಂದು ಭಾರ್ಗವ್ ತಿಳಿಸಿದ್ದಾರೆ.

ಎನ್‌ಎಂಡಿಸಿಯ ಉಕ್ಕು ಘಟಕ ಮಾರಾಟಕ್ಕೆ ಬಿಡ್ ಸಾಧ್ಯತೆ

ನವದೆಹಲಿ (ಪಿಟಿಐ): ಎನ್‌ಎಂಡಿಸಿಯ ಉಕ್ಕು ಘಟಕವನ್ನು ಮಾರಾಟ ಮಾಡುವ ಸಂಬಂಧ ಕೇಂದ್ರ ಸರ್ಕಾರವು ಮಾರ್ಚ್ ಅಂತ್ಯದ ವೇಳೆಗೆ ಪ್ರಾಥಮಿಕ ಬಿಡ್ ಆಹ್ವಾನಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಛತ್ತೀಸಗಡದಲ್ಲಿ ನಿರ್ಮಾಣ ಹಂತದ ಈ ಉಕ್ಕು ಘಟಕವು ಇದೇ ತಿಂಗಳಿನಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಎನ್‌ಎಂಡಿಸಿಯಿಂದ ನಗರ್ನಾರ್ ಸ್ಟೀಲ್ ಪ್ಲಾಂಟ್ (ಎನ್‌ಎಸ್‌ಪಿ) ಅನ್ನು ಪ್ರತ್ಯೇಕಿಸಿದ ಬಳಿಕ ಘಟಕವನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಯನ್ನು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ (ಡಿಐಪಿಎಎಂ) ಕೈಗೆತ್ತಿಕೊಳ್ಳಲಿದೆ ಎಂದು ಅವರು ಹೇಳಿದ್ದಾರೆ.

ಮುಂದಿನ ಹಣಕಾಸು ವರ್ಷದಲ್ಲಿ ಮಾರಾಟ ಪ್ರಕ್ರಿಯೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹475

ಕಾರು ಅಪಘಾತ: ಸೈರಸ್ ಮಿಸ್ತ್ರಿ ಸಾವು

ಒಂದನೇ ಪುಟದಿಂದ

ಕಾರು ಚಲಾಯಿಸುತ್ತಿದ್ದ ಅನಾಹಿತಾ ಪಾಂಡೋಲೆ ಮತ್ತು ಆಕೆಯ ಪತಿ ಡೇರಿಯಸ್ ಪಾಂಡೋಲೆಗೆ ಗಾಯಗಳಾಗಿವೆ. ಆದರೆ, ಮಿಸ್ತ್ರಿ ಮತ್ತು ಡೇರಿಯಸ್‌ನ ಸಹೋದರ ಜಹಂಗೀರ್ ಪಾಂಡೋಲೆ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಗಾಯಾಳುಗಳನ್ನು ಗುಜರಾತ್‌ನ ವಾಪಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಮೆರಿಕ ಓಪನ್ ಟೆನಿಸ್ ಟೂರ್ನಿ: ನಾಲ್ಕನೇ ಸುತ್ತಿಗೆ ಕಾರ್ಲೋಸ್ ಅಲ್ಕರಾಜ್

ನಡಾಲ್, ಸ್ವಟೆಕ್ ಜಯಭೇರಿ

ನ್ಯೂಯಾರ್ಕ್ (ಎಎಫ್‌ಪಿ): ಆತ್ಮೀಯ ಗೆಳೆಯ ರಿಚರ್ಡ್ ಗ್ಯಾಸ್ಕೆಟ್‌ಗೆ ಸೋಲುಣಿಸಿದ ರಫೆಲ್ ನಡಾಲ್ ಮತ್ತು ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಇಗಾ ಸ್ವಟೆಕ್ ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ನಾಲ್ಕನೇ ಸುತ್ತು ಪ್ರವೇಶಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನಲ್ಲಿ ಸ್ಪೇನ್‌ನ ನಡಾಲ್ ಶನಿವಾರ 6-0, 6-1, 7-5ರಿಂದ ಫ್ರಾನ್ಸ್ ಆಟಗಾರನನ್ನು ಮಣಿಸಿದರು. ಇಲ್ಲಿ ನಾಲ್ಕು ಬಾರಿ ಚಾಂಪಿಯನ್ ಆಗಿರುವ ನಡಾಲ್ ಅವರಿಗೆ ಗ್ಯಾಸ್ಕೆಟ್ ವಿರುದ್ಧ ಇದು ಸತತ 18ನೇ ಜಯವಾಗಿದೆ.

23ನೇ ಗ್ರ್ಯಾನ್‌ಸ್ಲಾಮ್ ಗೆಲುವಿನತ್ತ ದಾಪುಗಾಲಿಟ್ಟಿರುವ ನಡಾಲ್, ಗ್ಯಾಸ್ಕೆಟ್ ವಿರುದ್ಧ 34 ನೇರ ಸೆಟ್‌ಗಳನ್ನು ಗೆದ್ದುಕೊಂಡಿದ್ದಾರೆ.

ಈ ಪಂದ್ಯದ ಆರಂಭದಿಂದ ಸ್ಪೇನ್ ಆಟಗಾರ ಪಾರಮ್ಯ ಮೆರೆದರು. ಅವರು ಸತತ ಒಂಬತ್ತು ಗೇಮ್ ಗೆದ್ದ ಬಳಿಕ ಗ್ಯಾಸ್ಕೆಟ್ ಖಾತೆ ತೆರೆದರು. ಕೊನೆಯ ಸೆಟ್‌ನಲ್ಲಿ ಮಾತ್ರ ಫ್ರೆಂಚ್ ಆಟಗಾರ ಸ್ವಲ್ಪ ಪ್ರತಿರೋಧ ತೋರಿದರು.

ಮುಂದಿನ ಪಂದ್ಯದಲ್ಲಿ ನಡಾಲ್ ಅವರಿಗೆ ಅಮೆರಿಕದ ಫ್ರಾನ್ಸೆಸ್ ಟಿಫೊಯ್ ಸವಾಲು ಎದುರಾಗಿದೆ. ಮೂರನೇ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಟಿಫೊಯ್ 7-6 (9/7), 6-4, 6-4ರಿಂದ ಅರ್ಜೆಂಟೀನಾದ ಡಿಗೊ ಸ್ವಾರ್ಟ್ಜ್‌ಮನ್ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಇನ್ನುಳಿದ ಹಣಾಹಣಿಗಳಲ್ಲಿ ಕ್ರೊವೇಷ್ಯಾದ ಮರಿನ್ ಸಿಲಿಚ್ 7-6 (13/11), 6-7 (3/7), 6-2, 7-5ರಿಂದ ಬ್ರಿಟನ್‌ನ ಡ್ಯಾನ್ ಇವಾನ್ಸ್ ಎದುರು, ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ 6-3, 6-3, 6-3ರಿಂದ ಅಮೆರಿಕದ ಜೆನ್ಸನ್ ಬ್ರೂಕ್ಸ್‌ಬಿ ಎದುರು, ಬ್ರಿಟನ್‌ನ ಕ್ಯಾಮರಾನ್ ನೊರಿ 7-5, 6-4, 6-1ರಿಂದ ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಎದುರು, ರಷ್ಯಾದ ಆ್ಯಂಡ್ರೆ ರುಬ್ಲೆವ್ 6-4, 2-6, 6-7 (3/7), 6-4, 7-6 (10/7)ರಿಂದ ಕೆನಡಾದ ಡೆನಿಸ್ ಶಪವಲೊವ್ ಎದುರು ಜಯ ಗಳಿಸಿದರು.


ಕಾರ್ಲೋಸ್ ಅಲ್ಕರಾಜ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಸ್ವಟೆಕ್‌ಗೆ ಗೆಲುವು: ಮಹಿಳಾ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಹಣಾಹಣಿಯಲ್ಲಿ ಪೋಲೆಂಡ್ ಇಗಾ ಸ್ವಟೆಕ್ 6-3, 6-4ರಿಂದ ಅಮೆರಿಕದ ಲಾರೆನ್ ಡೇವಿಸ್ ಅವರನ್ನು ಮಣಿಸಿದರು.

ಮುಖ್ಯಾಂಶಗಳು
- ರಿಚರ್ಡ್ ಗ್ಯಾಸ್ಕೆಟ್‌ಗೆ ಸೋಲುಣಿಸಿದ ರಫೆಲ್ ನಡಾಲ್
- ಸ್ವಟೆಕ್‌ಗೆ 6-3, 6-4 ರಿಂದ ಅಮೆರಿಕದ ಲಾರೆನ್ ಡೇವಿಸ್ ಎದುರು ಜಯ

ಎರಡನೇ ಸೆಟ್‌ನಲ್ಲಿ 1-4ರಿಂದ ಹಿನ್ನಡೆ ಅನುಭವಿಸಿದ್ದ ಸ್ವಟೆಕ್ ಆತಂಕ ಎದುರಿಸಿದರು. ಆದರೆ ಛಲದ ಆಟದ ಮೂಲಕ ಗೆಲುವು ಒಲಿಸಿಕೊಂಡರು. ರಕ್ತದೊತ್ತಡದ ಕಾರಣ ಲಾರೆನ್ ಕೆಲಹೊತ್ತು ವಿರಾಮ ಪಡೆದರು.

ಮುಂದಿನ ಪಂದ್ಯದಲ್ಲಿ ಸ್ವಟೆಕ್, ಜರ್ಮನಿಯ ಜೂಲ್ ನೀಮಿಯರ್ ಅವರನ್ನು ಎದುರಿಸುವರು.

ಮಹಿಳಾ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಅಮೆರಿಕದ ಜೆಸ್ಸಿಕಾ ಪೆಗುಲಾ 6-2, 6-7 (6/8), 6-0ರಿಂದ ಚೀನಾದ ಯುವಾನ್ ಯು ಎದುರು, ಜೆಕ್ ಗಣರಾಜ್ಯದ ಪೆಟ್ರಾ ಕ್ವಿಟೊವಾ 5-7, 6-3, 7-6 (12/10)ರಿಂದ ಸ್ಪೇನ್‌ನ ಗಾರ್ಬೈನ್ ಮುಗುರುಜಾ ವಿರುದ್ಧ, ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ 6-3, 6-0ರಿಂದ ಕ್ರೊವೇಷ್ಯಾದ ಪೆಟ್ರಾ ಮಾರ್ಟಿಚ್ ಎದುರು, ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ 5-7, 6-4, 6-3ರಿಂದ ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಬೆನ್ಸಿಚ್ ಎದುರು, ಬೆಲಾರಸ್‌ನ ಅರಿನಾ ಸಬಲೆಂಕಾ 6-0, 6-2ರಿಂದ ಫ್ರಾನ್ಸ್‌ನ ಕ್ಲಾರಾ ಬುರೆಲ್ ವಿರುದ್ಧ ಗೆದ್ದು ಮುಂದಿನ ಹಂತ ಪ್ರವೇಶಿಸಿದರು.

ಒಡಿಶಾ ಜಗರ್‌ನಾಟ್ಸ್ ತಂಡದ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಕೊಕ್ಕೊ: ಒಡಿಶಾ ಚಾಂಪಿಯನ್

ಪುಣೆ: ಜಿದ್ದಾಜಿದ್ದಿನ ಹೋರಾಟದಲ್ಲಿ ರೋಚಕ ಜಯ ಸಾಧಿಸಿದ ಒಡಿಶಾ ಜಗರ್‌ನಾಟ್ಸ್ ತಂಡವು ಚೊಚ್ಚಲ ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಇಲ್ಲಿನ ಶಿವ ಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಟೂರ್ನಿಯ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಒಡಿಶಾ 46–45ರಿಂದ ತೆಲುಗು ಯೋಧಾಸ್ ತಂಡಕ್ಕೆ ಸೋಲುಣಿಸಿತು.

ತೀವ್ರ ಪೈಪೋಟಿ ನಡೆದ ಪಂದ್ಯದಲ್ಲಿ ಒಡಿಶಾ 21 ಸ್ಕೈ ಡೈವ್ ಪಾಯಿಂಟ್ಸ್ ಗಳಿಸಿದರೆ, ತೆಲುಗು ಆಟಗಾರರು 18 ಅಂಕ ಕಲೆಹಾಕಿದರು. ಆದರೆ ಟಚ್ ಪಾಯಿಂಟ್ಸ್‌ನಲ್ಲಿ ತೆಲುಗು ಯೋಧಾಸ್ (10), ಒಡಿಶಾ (8) ತಂಡಕ್ಕಿಂತ ಎರಡು ಪಾಯಿಂಟ್ಸ್ ಹೆಚ್ಚು ಗಳಿಸಿತು. ಬೋನಸ್ ಪಾಯಿಂಟ್ಸ್‌ನಲ್ಲಿ ಉಭಯ ತಂಡಗಳು (ತಲಾ 14) ಸಮಬಲ ಸಾಧಿಸಿದ್ದವು.

ಚಾಂಪಿಯನ್ ತಂಡ ₹ 1 ಕೋಟಿ ಹಾಗೂ ರನ್ನರ್ ಅಪ್ ತಂಡ ₹ 50 ಲಕ್ಷ ನಗದು ಬಹುಮಾನ ಗಳಿಸಿತು. 3ನೇ ಸ್ಥಾನ ಪಡೆದ ಗುಜರಾತ್ ಜೈಂಟ್ಸ್ ₹ 30 ಲಕ್ಷ ತನ್ನದಾಗಿಸಿಕೊಂಡಿತು.

ಆಟಗಾರ್ತಿಯರ ಮೇಲೆ ಲೈಂಗಿಕ ದೌರ್ಜನ್ಯ ನಿಲ್ಲಲಿ: ಅಜರೆಂಕಾ

ನ್ಯೂಯಾರ್ಕ್ (ರಾಯಿಟರ್ಸ್): ಡಬ್ಲ್ಯುಟಿಎ ಟೂರ್‌ಗಳಲ್ಲಿ ಯುವ ಆಟಗಾರ್ತಿಯರ ಮೇಲೆ ಪುರುಷ ತರಬೇತುದಾರರಿಂದ ಲೈಂಗಿನ ದೌರ್ಜನ್ಯ ನಡೆಯುತ್ತಿದ್ದು, ಇದನ್ನು ತಡೆಯುವುದು ನಮ್ಮ ಮೊದಲ ಆದ್ಯತೆಯಾಗಬೇಕು ಎಂದು ಬೆಲಾರಸ್ ಆಟಗಾರ್ತಿ ವಿಕ್ಟೋರಿಯಾ ಅಜರೆಂಕಾ ಹೇಳಿದ್ದಾರೆ.

ಫ್ರಾನ್ಸ್‌ನ ಆಟಗಾರ್ತಿ ಫಿಯೊನಾ ಫೆರ್ರೊ, ತಮ್ಮ ಕೋಚ್ ಆಗಿದ್ದ ಪಿಯರ್ ಬೌಟೆಯರ್ 2012–2015ರ ಅವಧಿಯಲ್ಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಎಸಗಿದ್ದರು ಎಂದು ಗುರುವಾರ ಆರೋಪಿಸಿದ್ದರು. ಈ ಕುರಿತು ಎಎಫ್‌ಪಿ ವರದಿ ಮಾಡಿತ್ತು. ಇದನ್ನು ಉಲ್ಲೇಖಿಸಿ ಅಜರೆಂಕಾ ಮಾತುಗಳನ್ನಾಡಿದ್ದಾರೆ.

‘ಲೈಂಗಿಕ ದೌರ್ಜನ್ಯ ತಡೆಯುವುದು ನಮ್ಮ ಗುಂಪಿನ ಪ್ರಮುಖ ಆದ್ಯತೆ’ ಎಂದು ಡಬ್ಲ್ಯುಟಿಎ ಆಟಗಾರ್ತಿಯರ ಕೌನ್ಸಿಲ್ ಸದಸ್ಯೆಯಾಗಿರುವ ಅಜರೆಂಕಾ ಹೇಳಿದ್ದಾರೆ.

‘ಇದು ನಿಜವಾಗಿ ಅತಿ ದುಃಖದ ಸಂಗತಿ. ಇಂತಹ ಘಟನೆಗಳು ನಡೆಯುವ ಹೊತ್ತಲ್ಲಿ, ಒಂದು ವೇಳೆ ನನಗೊಬ್ಬಳು ಮಗಳಿದ್ದು, ಆಕೆ ಟೆನಿಸ್ ಆಡಲು ಬಯಸಿದರೆ ಅದು ನನಗೆ ದೊಡ್ಡ ಕಳವಳದ ಸಂಗತಿಯಾಗುತ್ತದೆ’ ಎಂದು ಅಜರೆಂಕಾ ನುಡಿದರು.

ಅಜರೆಂಕಾ– ಎಎಫ್‌ಪಿ ಚಿತ್ರ

ದೌರ್ಜನ್ಯವನ್ನು ಬಹಿರಂಗಪಡಿಸುವಲ್ಲಿ ಪತ್ರಕರ್ತರು ತಮ್ಮ ಪಾತ್ರ ನಿಭಾಯಿಸಬೇಕು ಎಂದು ಅಜರೆಂಕಾ ಮನವಿ ಮಾಡಿದರು. ‘ಜನರು ಈ ಕುರಿತು ಮುಕ್ತವಾಗಿ ಮಾತನಾಡುವಂತೆ ಅವರಿಗೆ ನೆರವಾಗಬೇಕು’ ಎಂದರು.

ಚೆಸ್: ಮುಕ್ತ ವಿಭಾಗದಲ್ಲಿ ಸಾತ್ವಿಕ್ ರನ್ನರ್ಸ್ ಅಪ್

ಧನುಷ್, ಅಕ್ಷಯಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಧನುಷ್ ರಾಮ್ ಮತ್ತು ಉತ್ತರ ಕನ್ನಡ ಜಿಲ್ಲೆ ಕಾರವಾರದ ಅಕ್ಷಯಾ ಸಾಥಿ ಅವರು ಉಡುಪಿಯ ಶ್ರೀ ನಾರಾಯಣ ಗುರು ಸ್ಕೂಲ್ ಆಫ್ ಚೆಸ್ ಮತ್ತು ಕುಂದಾಪುರದ ಶ್ರೀ ಸಿದ್ಧಿವಿನಾಯಕ ಚೆಸ್ ಅಕಾಡೆಮಿ ಆಯೋಜಿಸಿದ್ದ ಫಿಡೆ ರೇಟೆಡ್ ರಾಜ್ಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಮುಕ್ತ ಮತ್ತು ಬಾಲಕಿಯರ ವಿಭಾಗದ ಚಾಂಪಿಯನ್ ಪಟ್ಟ ಅಲಂಕರಿಸಿಕೊಂಡರು.

ಉಡುಪಿಯ ಎಲ್‌ಐಸಿಐ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ನಡೆದ ಕೊನೆಯ ಸುತ್ತಿನ ಸ್ಪರ್ಧೆಯಲ್ಲಿ ಧನುಷ್ ಬೆಂಗಳೂರಿನ ಸ್ಯಾಮ್ಯುಯೆಲ್ ಮ್ಯಾಥ್ಯೂ ಜೊತೆ ಡ್ರಾ ಸಾಧಿಸಿದರು. ಆದರೂ 8 ಪಾಯಿಂಟ್ ಕಲೆ ಹಾಕಿ ಅಗ್ರ ಸ್ಥಾನಕ್ಕೇರಿದರು. 7.5 ಪಾಯಿಂಟ್‌ಗಳೊಂದಿಗೆ ಬೆಂಗಳೂರಿನ ಸಾತ್ವಿಕ್ ಅಡಿಗ ರನ್ನರ್ ಅಪ್ ಆದರು. ಶನಿವಾರ ಅಗ್ರಸ್ಥಾನದಲ್ಲಿದ್ದ ಅಪೂರ್ವ್ ಕಾಂಬ್ಳೆ ಅವರಿಗೆ 6.5 ಪಾಯಿಂಟ್ ಗಳಿಸಲಷ್ಟೇ ಸಾಧ್ಯವಾಯಿತು.

ಬಾಲಕಿಯರ ವಿಭಾಗದಲ್ಲಿ ಶನಿವಾರ ಅಗ್ರಸ್ಥಾನದಲ್ಲಿದ್ದ ಅಕ್ಷಯಾ ಭಾನುವಾರವೂ ಗೆಲುವಿನ ಓಟ ಮುಂದುವರಿಸಿದರು. 1717 ಯೆಲೊ ರೇಟಿಂಗ್ ಹೊಂದಿರುವ ಅವರು ಕೊನೆಯ ಸುತ್ತಿನಲ್ಲಿ ಬೆಂಗಳೂರಿನ ಸ್ತುತಿ ಪ್ರದೀಪ್ ವಿರುದ್ಧ ಗೆದ್ದು ಒಟ್ಟು 9 ಪಾಯಿಂಟ್ ಕಲೆ ಹಾಕಿದರು. ಮಂಗಳೂರಿನ ಶ್ರಿಯಾನ್ ಮಲ್ಯ 7.5 ಪಾಯಿಂಟ್ ಗಳಿಸಿ ರನ್ನರ್ ಅಪ್ ಆದರು. 7 ಪಾಯಿಂಟ್ ಗಳಿಸಿದ ಮಂಗಳೂರಿನ ರುದ್ರ ರಾಜೀವ್ ಮೂರನೇ ಸ್ಥಾನ ಗಳಿಸಿದರು.

ಮುಕ್ತ ವಿಭಾಗದಲ್ಲಿ ಸ್ಯಾಮ್ಯುಯೆಲ್ ಮ್ಯಾಥ್ಯೂ, ದಕ್ಷಿಣ ಕನ್ನಡದ ಸುಶಾಂತ್ ವಾಮನ್ ಶೆಟ್ಟಿ, ಆರಾಧ್ಯೊ ಭಟಾಚಾರ್ಯ ಮತ್ತು ಪ್ರಣವ್ ಪಿ.ಜಿ ತಲಾ 7 ಪಾಯಿಂಟ್ ಗಳಿಸಿದರು. ಟೈ ಬ್ರೇಕ್ ಸ್ಕೋರ್ ಆಧಾರದಲ್ಲಿ ಅವರು ಕ್ರಮವಾಗಿ 3ರಿಂದ 6ನೇ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಉಡುಪಿಯ ದಿಶಾ ಯು.ಎ ಮತ್ತು ಬೆಂಗಳೂರಿನ ನ್ಯಾನ್ಸಿ ಆರೋಕ್ಯರಾಜ್ ತಲಾ 6.5 ಪಾಯಿಂಟ್‌ಗಳೊಂದಿಗೆ ಕ್ರಮವಾಗಿ 4 ಮತ್ತು 5ನೇ ಸ್ಥಾನ ಗಳಿಸಿದರು.

ಮುಕ್ತ ವಿಭಾಗದಲ್ಲಿ ಚಾಂಪಿಯನ್ ಆದ ಧನುಷ್ ರಾಮ್ (ಎಡ) ಮತ್ತು ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದ ಅಕ್ಷಯಾ

ಬ್ಯಾಡ್ಮಿಂಟನ್: ಉನ್ನತಿ, ದರ್ಶನ್ ರನ್ನರ್ಸ್ ಅಪ್

ಪುಣೆ (ಪಿಟಿಐ): ಭಾರತದ ಉನ್ನತಿ ಹೂಡಾ ಮತ್ತು ದರ್ಶನ್ ಪೂಜಾರಿ ಅವರು ಇಲ್ಲಿ ನಡೆದ ಇಂಡಿಯಾ ಜೂನಿಯರ್ ಅಂತರರಾಷ್ಟ್ರೀಯ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆದರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ 14 ವರ್ಷದ ಉನ್ನತಿ, ಫೈನಲ್‌ನಲ್ಲಿ 25-23, 17-21, 10-21ರಿಂದ ಥಾಯ್ಲೆಂಡ್‌ನ ಸರುನ್ರಕ್ ವಿತಿದ್ಸನ್ ಎದುರು ಸೋತರು.

ಬಾಲಕರ ಸಿಂಗಲ್ಸ್ ಪ್ರಶಸ್ತಿ ಸುತ್ತಿನಲ್ಲಿ ದರ್ಶನ್ 13-21, 13-21ರಿಂದ ಇಂಡೋನೇಷ್ಯಾದ ಮುಹಮ್ಮದ್ ಹಲೀಮ್ ಸಾದಿಕ್ ವಿರುದ್ಧ ಮಣಿದರು.

ರಿಧಿ- ದಿವ್ಯಂಗೆ ಪ್ರಶಸ್ತಿ: ಮಿಶ್ರ ಡಬಲ್ಸ್‌ನಲ್ಲಿ ಭಾರತದ ರಿಧಿ ಕಪೂರ್–ದಿವ್ಯಂ ಕಪೂರ್ ಪ್ರಶಸ್ತಿ ಜಯಿಸಿದರು. ಫೈನಲ್‌ನಲ್ಲಿ ಅವರು 21-17, 14-21, 21-15ರಿಂದ ಭಾರತದವರೇ ಆದ ಪ್ರೇಮ್ ಕುಮಾರ್ ಪ್ರಭು ರಾಜ್‌ಮೋಹನ್– ಕನಿಷ್ಕಾ ಗಣೇಶನ್ ಎದುರು ಜಯಿಸಿದರು.

ಮಹಿಳಾ ಡಬಲ್ಸ್‌ನಲ್ಲಿ ರಿಧಿ ಅವರು ನಾರ್ದನಾ ರವಿಶಂಕರ್ ಜೊತೆಗೂಡಿ ರನ್ನರ್ಸ್‌ಅಪ್ ಆದರು. ಫೈನಲ್‌ನಲ್ಲಿ ಈ ಜೋಡಿ 19-21, 18-21ರಿಂದ ಭಾರತದ ವೆನ್ನಲಾ ಕಲಗೋಟ್ಲಾ–ಶ್ರೀಯಾಂಶಿ ವಾಲಿಶೆಟ್ಟಿ ಎದುರು ಸೋಲು ಅನುಭವಿಸಿತು.

ಜೋರ್ಡಾನ್ ಹ್ಯಾಟ್ರಿಕ್ ಗೋಲು

ಬೆಂಗಳೂರು: ಜೋರ್ಡಾನ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬಿಯು ಸೆವೆಂಟಿನ್ಸ್ ಎಫ್‌ಎ ತಂಡವು ಕೆಎಸ್‌ಎಫ್‌ಎ ಯೂತ್ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 11 ವರ್ಷದೊಳಗಿನವರ ವಿಭಾಗದ 7 ಎ ಸೈಡ್ ಪಂದ್ಯದಲ್ಲಿ ಬಿಯು 6–1ರಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ಎದುರು ಗೆದ್ದಿತು. ಜೋರ್ಡಾನ್ 16, 23 ಮತ್ತು 30ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಲೋಲಿತ್ (21, 37ನೇ ನಿ.) ಮತ್ತು ಕ್ರಿಸ್ ಜಾನ್ (42ನೇ ನಿ.) ವಿಜೇತ ತಂಡದ ಪರ ಗೋಲು ಹೊಡೆದರು.

ಎಫ್‌ಸಿಬಿಯು ತಂಡಕ್ಕಾಗಿ ಸಮೀರ್ ಜಾಗೀರ್‌ದಾರ (9ನೇ ನಿ.) ಒಂದು ಗೋಲು ದಾಖಲಿಸಿದರು.

18 ವರ್ಷದೊಳಗಿನವರ ವಿಭಾಗದ 11 ಎ ಸೈಡ್ ಪಂದ್ಯಗಳಲ್ಲಿ ಬಿವೈಎಫ್‌ಎಲ್ 1–0ಯಿಂದ ನಾರ್ತ್‌ಈಸ್ಟ್ ಯೂತ್ ಎಫ್‌ಸಿ ವಿರುದ್ಧ, ದ ಸ್ಪೋರ್ಟ್ಸ್ ಸ್ಕೂಲ್ 2–1ರಿಂದ ಸ್ಟೇಡಿಯಂ ಎಫ್‌ಸಿ ಎದುರು ಜಯ ಸಾಧಿಸಿದವು. ಸ್ನಿಪ್ಪರ್ಸ್ ಎಫ್‌ಸಿ 1–1ರಿಂದ ಬೆಂಗಳೂರು ಚಾಂಪ್ಸ್ ತಂಡದೊಂದಿಗೆ ಡ್ರಾ ಸಾಧಿಸಿತು.

ಸಂಕ್ಷಿಪ್ತ ಸುದ್ದಿ

ಟಿ20 ಕ್ರಿಕೆಟ್‌ಗೆ ಮುಶ್ಫೀಕರ್ ವಿದಾಯ

ಢಾಕಾ (ಪಿಟಿಐ): ಬಾಂಗ್ಲಾದೇಶ ತಂಡದ ವಿಕೆಟ್ ಕೀಪರ್ ಬ್ಯಾಟರ್ ಮುಶ್ಫೀಕರ್ ರಹೀಂ ಅವರು ಭಾನುವಾರ ಟಿ20 ಕ್ರಿಕೆಟ್‌ಗೆ ನಿವೃತ್ತಿ ಪ್ರಕಟಿಸಿದ್ದಾರೆ. ಏಕದಿನ ಮತ್ತು ಟೆಸ್ಟ್ ಮಾದರಿಗಳಿಗೆ ಹೆಚ್ಚು ಗಮನ ನೀಡಲು ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಮುಶ್ಫೀಕರ್

‘ಅವಕಾಶ ಸಿಕ್ಕರೆ ಫ್ರಾಂಚೈಸ್ ಕ್ರಿಕೆಟ್’ನಲ್ಲಿ ಮುಂದುವರಿಯುವುದಾಗಿ 35 ವರ್ಷದ ಮುಶ್ಫೀಕರ್ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಸದ್ಯ ನಡೆಯುತ್ತಿರುವ ಏಷ್ಯಾಕಪ್ ಟಿ20 ಟೂರ್ನಿಯಲ್ಲಿ ಬಾಂಗ್ಲಾದೇಶ ತಂಡವು ಒಂದೂ ಪಂದ್ಯ ಗೆಲ್ಲದೆ ನಿರ್ಗಮಿಸಿದೆ. ತಂಡದ ಮಾಜಿ ನಾಯಕ ಆಗಿರುವ ಮುಶ್ಫೀಕರ್, 102 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿದ್ದು, 115.03ರ ಸರಾಸರಿಯಲ್ಲಿ 1500 ರನ್ ಗಳಿಸಿದ್ದಾರೆ.

ಚೆಸ್: ಅನಿಷ್ಕಾ ಬಿಯಾನಿಗೆ ಚಿನ್ನ

ಮುಂಬೈ (ಪಿಟಿಐ): ಮುಂಬೈನ ಆರು ವರ್ಷದ ಬಾಲಕಿ ಅನಿಷ್ಕಾ ಬಿಯಾನಿ ಅವರು ಮಲೇಷ್ಯಾದ ಕ್ವಾಲಾಲಂಪುರದಲ್ಲಿ ಭಾನುವಾರ ಕೊನೆಗೊಂಡ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲಿ ಚಿನ್ನ ಗೆದ್ದುಕೊಂಡರು.

ಆರು ವರ್ಷದೊಳಗಿನವರ ವಿಭಾಗದಲ್ಲಿ ಸ್ಪರ್ಧಿಸಿದ ಅವರು ಆರು ಸುತ್ತುಗಳಲ್ಲಿ ನಾಲ್ಕು ಪಾಯಿಂಟ್ ಸಂಗ್ರಹಿಸಿ ಅಗ್ರಸ್ಥಾನ ಪಡೆದರು. ಎಂಟು ರಾಷ್ಟ್ರಗಳ ಸ್ಪರ್ಧಿಗಳು ಈ ಟೂರ್ನಿಯಲ್ಲಿ ಪಾಲ್ಗೊಂಡಿದ್ದರು.

ಅನಿಷ್ಕಾ ಅವರು ಈ ವರ್ಷದ ಆರಂಭದಲ್ಲಿ ಹೈದರಾಬಾದ್‌ನಲ್ಲಿ ನಡೆದಿದ್ದ ಅಖಿಲ ಭಾರತ ಫಿಡೆ ರೇಟಿಂಗ್ ಚೆಸ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು.

ಟೆನ್‌ಪಿನ್: ರಾಷ್ಟ್ರೀಯ ಚಾಂಪಿಯನ್‌ಷಿಪ್ ಇಂದಿನಿಂದ

ಬೆಂಗಳೂರು: ಭಾರತ ಟೆನ್‌ಪಿನ್ ಬೌಲಿಂಗ್ ಫೆಡರೇಷನ್ ಆಶ್ರಯದಲ್ಲಿ ಸೆ. 5 ರಿಂದ 10ರ ವರೆಗೆ ನಗರದಲ್ಲಿ 31ನೇ ರಾಷ್ಟ್ರೀಯ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್ ಆಯೋಜಿಸಲಾಗಿದೆ.

ಚರ್ಚ್‌ಸ್ಟ್ರೀಟ್‌ನಲ್ಲಿರುವ ಅಮೀಬಾ ಬೌಲಿಂಗ್ ಸೆಂಟರ್‌ನಲ್ಲಿ ನಡೆಯುವ ಟೂರ್ನಿಯಲ್ಲಿ 14 ರಾಜ್ಯಗಳ 146 ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ. ಪುರುಷರ ವಿಭಾಗದಲ್ಲಿ 118 ಹಾಗೂ ಮಹಿಳೆಯರ ವಿಭಾಗದಲ್ಲಿ 28 ಮಂದಿ ಕಣದಲ್ಲಿದ್ದಾರೆ.

ಹಾಲಿ ಚಾಂಪಿಯನ್ ಆಗಿರುವ ಕರ್ನಾಟಕದ ಆಕಾಶ್ ಅಶೋಕ್ ಕುಮಾರ್, ಶಬ್ಬೀರ್ ಧನ್ಕೋಟ್ (ತಮಿಳುನಾಡು), ಧ್ರುವ್ ಸರ್ದಾ (ದೆಹಲಿ), ಎಸ್.ಎ.ಹಮೀದ್ (ದೆಹಲಿ) ಮತ್ತು ಸ್ಥಳೀಯ ಪ್ರತಿಭೆ ಆರ್.ಕಿಶನ್ ಪುರುಷರ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಪ್ರಮುಖರಾಗಿದ್ದಾರೆ. ಮಹಿಳೆಯರ ವಿಭಾಗದಲ್ಲಿ ತಮಿಳುನಾಡಿನ ಸಬೀನಾ ಅತೀಕಾ ಪ್ರಶಸ್ತಿ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿಕೊಂಡಿದ್ದಾರೆ.